# ಸಮಾಜ ವಿಜ್ಞಾನ I

# SOCIAL SCIENCE - I

## ಭಾಗ - 2
## PART - 2

## ತರಗತಿ X
## STANDARD X

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ

2025

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ!

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆ ಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

# ಸಮಾಜವಿಜ್ಞಾನ I

SOCIAL SCIENCE - I

**10**

**State Council of Educational Research and Training (SCERT)**
Poojappura, Thiruvananthapuram 695012, Kerala
Website : www.scertkerala.gov.in
e-mail : scertkerala@gmail.com, Phone : 0471 - 2341883,
Typesetting and Layout : SCERT
First Edition : 2025
*Printed at* : KBPS, Kakkanad, Kochi-30
© Department of General Education, Government of Kerala

ಪ್ರೀತಿಯ ವಿದ್ಯಾರ್ಥಿಗಳೇ,

ಸಮಾಜದ ವಿವಿಧ ಹಂತಗಳಲ್ಲಿ ನಡೆಸಿದ ಚರ್ಚೆಗಳ ಮೂಲಕ ಲಭಿಸಿದ ಚಿಂತನೆಗಳ ಆಧಾರದಲ್ಲಿ ತಯಾರಿಸಿದ ಹತ್ತನೇ ತರಗತಿಯ ಹೊಸ ಸಮಾಜ ವಿಜ್ಞಾನ I ಪಠ್ಯಪುಸ್ತಕವನ್ನು ಎರಡು ಭಾಗಗಳ ಮೂಲಕ ನಿಮ್ಮ ಕೈಗಿಡುತ್ತಿದ್ದೇವೆ. ಸಮಾಜ ವಿಜ್ಞಾನದ ಪ್ರಧಾನ ಕಲಿಕಾ ವಲಯಗಳಾದ ಇತಿಹಾಸ, ರಾಜ್ಯಶಾಸ್ತ್ರ ಮತ್ತು ಸಮಾಜಶಾಸ್ತ್ರಗಳಿಗೆ ಸಂಬಂಧಿಸಿದ ಪಾಠಭಾಗಗಳನ್ನು ಇದರಲ್ಲಿ ಸೇರಿಸಲಾಗಿದೆ. ಇಂದಿನ ಜಗತ್ತನ್ನು ಸರಿಯಾಗಿ ಮತ್ತು ನಿಕಟವಾಗಿ ಅರ್ಥೈಸಲು ಮತ್ತು ನಾಳೆಗಳನ್ನು ರೂಪಿಸಲು, ನಿನ್ನೆಯ ಕುರಿತಾದ ಜ್ಞಾನವು ಮುಖ್ಯವಾಗಿದೆಯಲ್ಲವೆ? ಆಧುನಿಕ ಜಗತ್ತನ್ನು ರೂಪಿಸುವಲ್ಲಿ ಪ್ರಧಾನ ಪಾತ್ರ ವಹಿಸಿದ ನವೋತ್ಥಾನ ಕಾಲದಲ್ಲಿ ವಿವಿಧ ವಲಯಗಳಲ್ಲುಂಟಾದ ಬದಲಾವಣೆಗಳನ್ನು ಈ ಪಠ್ಯಪುಸ್ತಕದ ಒಂದನೇ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಮುಂದಿನ ಅಧ್ಯಾಯಗಳಲ್ಲಿ ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರತೆ ಎಂಬೀ ಘೋಷಣೆಗಳನ್ನು ಜಗತ್ತಿಗೆ ನೀಡಿದ ಕ್ರಾಂತಿಯ ಕುರಿತು ಹಾಗೂ ವಿವಿಧ ಕಾಲಗಳಲ್ಲಿ ಫ್ರಾನ್ಸಿನ ಆರ್ಥಿಕ ರಂಗದಲ್ಲುಂಟಾದ ಬದಲಾವಣೆಗಳು ಮತ್ತು ಅದರ ಪರಿಣಾಮಗಳ ಕುರಿತು ಚರ್ಚಿಸಲಾಗಿದೆ. ಆಧುನಿಕ ಜಗತ್ತು ಸಾಕ್ಷಿಯಾದ ಅತಿದೊಡ್ಡ ಜನಪರ ಹೋರಾಟವಾದ ಭಾರತದ ಸ್ವಾತಂತ್ರ್ಯ ಹೋರಾಟ ಮತ್ತು ಅದರಲ್ಲಿ ನಮ್ಮ ರಾಷ್ಟ್ರಪಿತರಾದ ಗಾಂಧೀಜಿಯವರ ಪಾತ್ರವನ್ನು ಬಹಳ ವಿವರವಾಗಿ ಮುಂದಿನ ಅಧ್ಯಾಯದಲ್ಲಿ ಪ್ರತಿಪಾದಿಸಲಾಗುತ್ತಿದೆ. ಸ್ವಾತಂತ್ರ್ಯಾನಂತರದ ಭಾರತವು ಎದುರಿಸಿದ ಸಮಸ್ಯೆಗಳು ಮತ್ತು ಅವುಗಳನ್ನು ಪರಿಹರಿಸಿ ವಿವಿಧ ರಂಗಗಳಲ್ಲಿ ನಾವು ಮಾಡಿದ ಸಾಧನೆಗಳನ್ನೂ ಪಠ್ಯಪುಸ್ತಕದಲ್ಲಿ ಚರ್ಚಿಸಲಾಗಿದೆ.

ಸಾಮಾಜಿಕ ವಿಷಯಗಳನ್ನು ಮತ್ತು ಸಮಸ್ಯೆಗಳನ್ನು ಸಾಮಾನ್ಯಜ್ಞಾನಕ್ಕಿಂತಲೂ ಮಿಗಿಲಾಗಿ ಸಮಾಜಶಾಸ್ತ್ರ ಪರಿಕಲ್ಪನೆಯ ಮೂಲಕ ಸಮೀಪಿಸುವ ಕೌಶಲ್ಯವನ್ನು ನಿಮ್ಮಲ್ಲಿ ಬೆಳೆಸುವ ಉದ್ದೇಶದಿಂದ ಸಮಾಜವಿಜ್ಞಾನ ಕಲಿಕೆಯ ನೂತನ ವಲಯಗಳಲ್ಲೊಂದಾದ ಸಮಾಜಶಾಸ್ತ್ರವನ್ನು ಮಂಡಿಸಲಾಗಿದೆ. ಸಮಾಜಶಾಸ್ತ್ರದ ಇನ್ನೊಂದು ಪಾಠಭಾಗದಲ್ಲಿ ಭಾರತದ ಸಾಮಾಜಿಕ ರಚನೆಯನ್ನು ವಿವರವಾಗಿ ಚರ್ಚಿಸಲಾಗಿದೆ.

ಸ್ವಾತಂತ್ರ್ಯಾನಂತರದ ಕಾಲದಲ್ಲಿ ಭಾರತದ ರಾಜಕೀಯ ರಂಗದಲ್ಲುಂಟಾದ ಬದಲಾವಣೆಗಳು ಮತ್ತು ದೇಶದ ವಿವಿಧ ಭಾಗಗಳಲ್ಲಿ ನಡೆದ ಜನಪ್ರಿಯ ದಂಗೆಗಳು ಮತ್ತು ಭಾರತದ ಪ್ರಜಾಪ್ರಭುತ್ವವು ಎದುರಿಸುತ್ತಿರುವ ಸವಾಲುಗಳನ್ನು ಪ್ರತಿಪಾದಿಸುವ ಪಾಠಭಾಗವನ್ನು ರಾಜ್ಯಶಾಸ್ತ್ರದ ಭಾಗವಾಗಿ ಇದರಲ್ಲಿ ಸೇರಿಸಲಾಗಿದೆ.

ಸಾಮಾಜಿಕ ಜೀವಿಯೆಂಬ ನೆಲೆಯಲ್ಲಿ ಸಮಾಜದ ವಿವಿಧ ವಿಷಯಗಳಲ್ಲಿ ಪರಿಣಾಮಕಾರಿಯಾಗಿ ತೊಡಗಿಸಿಕೊಳ್ಳಲು ಮತ್ತು ಪ್ರಜಾಪ್ರಭುತ್ವ ಪ್ರಜ್ಞೆಯಿಂದ ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿದು ಸಮಾಜದ ಅಧಾರಸ್ತಂಭವಾಗಲು ಈ ಪಠ್ಯಪುಸ್ತಕವು ನಿಮಗೆ ದಾರಿದೀಪವಾಗಬಹುದೆಂದು ನಾನು ಆಶಿಸುತ್ತೇನೆ. ನಿಮಗೆ ಪ್ರತಿಯೊಬ್ಬರಿಗೂ ಜ್ಞಾನ ಸಮಾಜದ ಭಾಗವಾಗಲು ಸಾಧ್ಯವಾಗಲೆಂದು ಹಾರೈಸುತ್ತೇನೆ.

ಶುಭಹಾರೈಕೆಗಳೊಂದಿಗೆ,

ಡಾ. ಜಯಪ್ರಕಾಶ್ ಆರ್. ಕೆ.
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ.

# TEXT BOOK DEVELOPMENT COMMITTEE

## Advisor

**Dr. K. N. Ganesh**
Chairman, Kerala Council For Historical Research

## Chairperson

**Dr. Shivadasan P.**
Senior Professor,
Department of History, Calicut University

## Experts

**Dr. K. K. Radha**
Principal (Rtd.)
Govt. College for Women
Thiruvananthapuram

**Dr. P. P. Abdul Razak**
Professor & Head (Rtd.)
Department of History
P.S.M.O. College, Tirurangadi

**Dr. Antony Palakkal**
Professor (Rtd.),
Department of Sociology,
University of Kerala

**Dr. P. Mohandas**
Associate Professor (Rtd.)
Department of History
KMM Govt.Women's College, Kannur

**Dr. Pradeep Kumar K.**
Associate Professor & Head (Rtd.)
Department of Political Science
Govt. College, Attingal, Thiruvananthapuram

## Members

**Yousuf Kumar S. M.**
Principal, G.H.S.S. Chithara, Kollam

**Haripradeep S.**
HST (Rtd.), SVHS, Pullad, Pathanamthitta

**Dr. Anjana V.R. Chandran.**
Research Officer, SCERT, Kerala

**Dr. Ajith R. Pillai**
Principal, DBHSS, Parumala, Pathanamthitta

**Aju S.**
HST, History, G.M.G.H.S.S.
Pattom, Thiruvananthapuram

**Jayakrishnan O.K.**
HSST, K.P.C.H.S.S. Pattanur, Kannur

**Pradeepan T.**
HSST, History, GHSS Palayad, Kannur

**Margaret Lini V. P.**
HST Social Science,
GV & HSS Vellanad, Thiruvananthapuram

**Vishvambharan N.**
HSST (Rtd.), Boys Higher Secondary School, Karunagappally, Kollam.

**Sreejith M. Moothedath**
HST, Social Science,
CNN G.H.S. Cherp, Thrissur

**Anas N.S.**
Research Student, University of Kerala

## Kannada Version

### Subject Expert

**Narayana D.** Headmaster, GHS Udyawar

### Language Expert

**Vishalaksha M.,** Rtd. HST (Kan), SGKHS Kudlu.

### Participants

**Ganesh Kumar S.,** Rtd. HST, Social Science, SGKHS Kudlu.

**Sanjeeva M.,** Headmaster, GVHSS Karadka

**Bhanu A.C.,** HST, Social Science, GVHSS Mulleria

**Praveena V.,** HST, Social Science, SNHS Perla

**Raviraja,** HST, Social Science, GHSS Adoor.

## Academic Co-ordinator

**Jagadeesh K. T.**
Research Officer, SCERT, Kerala

**State Council for Educational Research and Training (SCERT) Kerala**
**Vidyabhavan, Poojappuram - 695 012**

# ಅನುಕ್ರಮಣಿಕೆ


| | | |
|---|---|---|
| 6 | ಸ್ವಾತಂತ್ರ್ಯಕ್ಕಾಗಿ ಜನಾಂದೋಲನ | 111-130 |
| 7 | ಸ್ವತಂತ್ರ ಭಾರತದ ವರ್ತಮಾನ ಕಾಲ | 131-154 |
| 8 | ಪ್ರಜಾಪ್ರಭುತ್ವ : ಒಂದು ಭಾರತೀಯ ಅನುಭವ | 155-180 |
| 9 | ಭಾರತದ ಸಾಮಾಜಿಕ ವ್ಯವಸ್ಥೆಯನ್ನು ತಿಳಿಯೋಣ | 181-202 |


**ಈ ಪಠ್ಯಪುಸ್ತಕದಲ್ಲಿ ಕಲಿಕೆಯ ಸೌಕರ್ಯಕ್ಕಾಗಿ ಕೆಲವು ಚಿಹ್ನೆಗಳನ್ನು ಉಪಯೋಗಿಸಲಾಗಿದೆ**



ಹೆಚ್ಚಿನ ಓದಿಗಾಗಿ - ಮೌಲ್ಯನಿರ್ಣಯಕ್ಕೆ ಒಳಪಡಿಸಬೇಕಾಗಿಲ್ಲ



ಕಲಿಕಾ ಚಟುವಟಿಕೆ



ಮುಂದುವರಿದ ಚಟುವಟಿಕೆಗಳು

# ಭಾರತದ ಸಂವಿಧಾನ

## ಪ್ರಸ್ತಾವನೆ

ಭಾರತದ ಜನಗಳಾದ ನಾವು ಭಾರತವನ್ನು ಒಂದು [1]**[ಸಾರ್ವಭೌಮ ಸಮಾಜವಾದೀ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ]** ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ:

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ** ;
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ **ಸ್ವಾತಂತ್ರ್ಯ** ;
ಸ್ಥಾನಮಾನ ಹಾಗೂ ಅವಕಾಶ **ಸಮಾನತೆ**

ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು,[2][ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು] ಸುನಿಶ್ಚಿತಗೊಳಿಸಿ ಅವರಲ್ಲಿ **ಭ್ರಾತೃಭಾವನೆಯನ್ನು** ವೃದ್ಧಿಗೊಳಿಸಲು ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;

**ನಮ್ಮ ಸಂವಿಧಾನ ಸಭೆಯಲ್ಲಿ** 1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ **ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.**

---

1. 1976ನೇ ಇಸವಿಯ ಭಾರತ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ಸಂಪೂರ್ಣ ಪ್ರಭುತ್ವ ಸಂಪನ್ನ ಲೋಕತಂತ್ರಾತ್ಮಕ ಗಣರಾಜ್ಯವಾಗಿ" ಎಂಬ ಪದಗಳ ಬದಲಾಗಿ (3-1-1977 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. ಮೇಲ್ಕಂಡ ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ರಾಷ್ಟ್ರದ ಏಕತೆಯನ್ನೂ" ಎಂಬ ಪದಗಳ ಬದಲಾಗಿ (3 - 1 - 1977ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.



# 6

# ಸ್ವಾತಂತ್ರ್ಯಕ್ಕಾಗಿ ಜನಾಂದೋಲನ

## ಮಹಾ ವಿಚಾರಣೆ

*ಸರಕಾರಿ ಸರ್ಕ್ಯೂಟ್ ಹೌಸ್, ಅಹಮ್ಮದಾಬಾದ್, ಮಾರ್ಚ್ 18, 1922 ಸೆಷನ್ಸ್ ನ್ಯಾಯಾಧೀಶ ನ್ಯಾಯಮೂರ್ತಿ ಸಿ.ಎನ್. ಬ್ರೂಮ್ ಫೀಲ್ಡ್ ರ ಮುಂದೆ.*

*ಪ್ರಾಸಿಕ್ಯೂಟರ್ ಸರ್ ಜೆ.ಟಿ. ಸ್ಟ್ರಾಂಗ್ ಮೆನ್, ಅಡ್ವಕೇಟ್ ಜನರಲ್, ಬಾಂಬೆ.*



ಆರೋಪಿಗೆ ಹೇಳಲಿರುವ ವಿಚಾರಗಳನ್ನು ಆಲಿಸಿದ ನಂತರ ನ್ಯಾಯಾಧೀಶರಾದ ಬ್ರೂಮ್ ಫೀಲ್ಡ್ ಆರೋಪಿಗೆ ವಂದಿಸಿ, ತೀರ್ಪನ್ನು ಪ್ರಸ್ತಾಪಿಸಿದರು. 'ಈ ಪ್ರಕರಣದಲ್ಲಿ ನ್ಯಾಯಯುತ ತೀರ್ಪನ್ನು ನೀಡುವುದು ಈ ದೇಶದಲ್ಲಿ ನ್ಯಾಯಾಧೀಶರು ಎದುರಿಸಬೇಕಾಗಿ ಬಂದ ಅತ್ಯಂತ ಕಷ್ಟಕರವಾದ ಕೆಲಸವಾಗಿದೆ. ವ್ಯಕ್ತಿಗಳನ್ನು ನೋಡಿಕೊಂಡು ತೀರ್ಪನ್ನು ನೀಡುವುದು ಕಾನೂನಿನ ಕರ್ತವ್ಯವಲ್ಲ. ನಾನು ಈ ತನಕ ವಿಚಾರಣೆ ನಡೆಸಿದ ಹಾಗೂ ಭವಿಷ್ಯದಲ್ಲಿ ವಿಚಾರಣೆ ನಡೆಸಲು ಸಾಧ್ಯತೆಯಿರುವ ವ್ಯಕ್ತಿಗಳಿಗಿಂತ ನೀವು ತುಂಬಾ ಭಿನ್ನರಾಗಿದ್ದೀರಿ ಎಂಬ ವಾಸ್ತವಿಕತೆಯನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ. ಲಕ್ಷಾಂತರ ಭಾರತೀಯರ ದೃಷ್ಟಿಯಲ್ಲಿ ನೀವು ಒಬ್ಬ ಮಹಾನ್ ದೇಶಪ್ರೇಮಿ ಮತ್ತು ನಾಯಕ ಎಂಬುದನ್ನು ಮರೆಯುವುದಿಲ್ಲ. ನಿಮ್ಮ ರಾಜಕೀಯ ನಿಲುವುಗಳ ಬಗ್ಗೆ ಭಿನ್ನಾಭಿಪ್ರಾಯವನ್ನು ಹೊಂದಿದವರು ಕೂಡಾ ನಿಮ್ಮನ್ನು ಉದಾತ್ತ ಮತ್ತು ಪವಿತ್ರವಾದ ಜೀವನವನ್ನು ನಡೆಸುವ, ಉನ್ನತ ಆದರ್ಶಗಳನ್ನು ಎತ್ತಿಹಿಡಿಯುವ ವ್ಯಕ್ತಿಯಾಗಿ ಕಾಣುತ್ತಾರೆ. ಆರೋಪಿಗೆ ಶಿಕ್ಷೆಯಾಗಿ 6 ವರ್ಷದ ಜೈಲುವಾಸದ ತೀರ್ಪನ್ನು ನೀಡಿದ ನಂತರ ನ್ಯಾಯಾಧೀಶರು 'ಸರಕಾರವು ಶಿಕ್ಷೆಯನ್ನು ಕಡಿಮೆಮಾಡಿದರೆ ನನ್ನಷ್ಟು ಸಂತೋಷಪಡುವ ವ್ಯಕ್ತಿ ಯಾರೂ ಇರಲಿಕ್ಕಿಲ್ಲ' ಎಂದು ಹೇಳಿದರು.

*Source:* Louis Fischer, *The Life of Mahatma Gandhi*

### ದಕ್ಷಿಣ ಆಫ್ರಿಕಾ ಎಂಬ ರಾಜಕೀಯ ಗರಡಿ

ಗಾಂಧೀಜಿ ಎಂಬ ನಾಯಕನನ್ನು ರೂಪಿಸಿದ್ದು ದಕ್ಷಿಣ ಆಫ್ರಿಕವಾಗಿದೆ. ಗಾಂಧೀಜಿಯು ದಕ್ಷಿಣ ಆಫ್ರಿಕಾದಲ್ಲಿ ಇಪ್ಪತ್ತು ವರ್ಷಗಳ ಕಾಲ ಕಾರ್ಯ ನಿರ್ವಹಿಸಿದರು. ಗುಜರಾತಿ ವಲಸೆ ವ್ಯಾಪಾರಿಯಾದ ದಾದಾ ಅಬ್ದುಲ್ಲ ಜಾವೇರಿ ಯವರಿಗೆ ಕಾನೂನು ಸಹಾಯಕನಾಗಿ ಗಾಂಧೀಜಿ ಅಲ್ಲಿಗೆ ತಲುಪಿದರು. ಆ ಕಾಲದಲ್ಲಿ ಏಷ್ಯಾದವರು ಮತ್ತು ಕಪ್ಪು ಜನಾಂಗದವರು ದಕ್ಷಿಣ ಆಫ್ರಿಕಾದಲ್ಲಿ ಬಿಳಿಯರಿಂದ ಅನುಭವಿಸಬೇಕಾಗಿದ್ದ ವರ್ಣಭೇದ ನೀತಿಗೆದುರಾಗಿ ಗಾಂಧೀಜಿ ಹೋರಾಟವನ್ನು ನಡೆಸಿದರು. ದಕ್ಷಿಣ ಆಫ್ರಿಕಾದಲ್ಲಿಯೇ ಗಾಂಧೀಜಿ ತನ್ನ ಅಹಿಂಸೆಗೆ ಒತ್ತು ನೀಡುವ ಸತ್ಯಾಗ್ರಹ ಎಂಬ ಹೋರಾಟ ವಿಧಾನಕ್ಕೆ ರೂಪು ನೀಡಿದರು. ಗಾಂಧೀಜಿಗೆ ದಕ್ಷಿಣ ಆಫ್ರಿಕಾವು ನಿಜವಾದ ಹೋರಾಟದ ತರಬೇತಿ ಕೇಂದ್ರವಾಗಿತ್ತು. 1915 ರಲ್ಲಿ ಗಾಂಧೀಜಿ ಭಾರತಕ್ಕೆ ಹಿಂತಿರುಗಿದರು.

ನ್ಯಾಯಯುತವಾದ ತೀರ್ಪನ್ನು ನೀಡುವುದು ಕಷ್ಟಕರ ಎಂದು ನ್ಯಾಯಾಧೀಶರು ಬಣ್ಣಿಸಿದ ಪ್ರಕರಣದ ವಿಭಿನ್ನ ವ್ಯಕ್ತಿತ್ವದ ಹಾಗೂ ದೇಶಪ್ರೇಮಿಯಾದ ಆರೋಪಿ ನಮ್ಮ ರಾಷ್ಟ್ರಪಿತ ಗಾಂಧೀಜಿಯವರಾಗಿದ್ದಾರೆ. ಗಾಂಧೀಜಿ ಭಾರತದ ಸ್ವಾತಂತ್ರ್ಯ ಹೋರಾಟವನ್ನು ಒಂದು ಜನಪರ ಚಳುವಳಿಯಾಗಿ ಪರಿವರ್ತಿಸಿದರು. 1919 ರಿಂದ ಗಾಂಧೀಜಿಯ ನೇತೃತ್ವದಲ್ಲಿ ಮುನ್ನಡೆದ ಭಾರತದ ಸ್ವಾತಂತ್ರ್ಯ ಹೋರಾಟ ಚಳುವಳಿಯ ಕೆಲವು ಪ್ರಮುಖ ಘಟನೆಗಳನ್ನು ನಾವು ಈ ಪಾಠ ಭಾಗದಲ್ಲಿ ಚರ್ಚಿಸೋಣ.

ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ಸಿನ ರೂಪೀಕರಣ ಹಾಗೂ ಆರಂಭ ಕಾಲದ ಹೋರಾಟಗಳನ್ನು ನೀವು ಹಿಂದಿನ ತರಗತಿಗಳಲ್ಲಿ ಪರಿಚಯಿಸಿಕೊಂಡಿದ್ದೀರಲ್ಲವೆ? ಗಾಂಧೀಜಿಯವರು ಸ್ವಾತಂತ್ರ್ಯ ಹೋರಾಟದ ನಾಯಕರಾದ ನಂತರ ಕೃಷಿಕರು, ಕಾರ್ಮಿಕರು, ಮಹಿಳೆಯರು, ವಿದ್ಯಾರ್ಥಿಗಳೇ ಮೊದಲಾದ ಸಮಾಜದ ವಿವಿಧ ವಿಭಾಗದವರು ಹೋರಾಟದಲ್ಲಿ ಸಕ್ರಿಯರಾದರು. ಸಮಾಜದ ವಿವಿಧ ವಿಭಾಗದವರನ್ನು ಒಟ್ಟಾಗಿ ಒಂದೇ ಸೂರಿನಡಿಯಲ್ಲಿ ಸಜ್ಜುಗೊಳಿಸಿದರೆ ಮಾತ್ರವೇ ಬ್ರಿಟಿಷ್ ಸಾಮ್ರಾಜ್ಯವನ್ನು ಎದುರಿಸಲು ಸಾಧ್ಯವೆಂಬ ವಾಸ್ತವವು ಗಾಂಧೀಜಿಗೆ ತಿಳಿದಿತ್ತು. ಎಲ್ಲರನ್ನೂ ಒಂದೇ ಸೂರಿನಡಿಯಲ್ಲಿ ಸಜ್ಜುಗೊಳಿಸಲು ಹಾಗೂ ಅವರಲ್ಲಿ ಒಬ್ಬರಾಗಲು ಅವರಿಗೆ ಸಾಧ್ಯವಾಯಿತು.

ಗಾಂಧೀಜಿಯ ನೇತೃತ್ವದಲ್ಲಿ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಉಂಟಾದ ಬದಲಾವಣೆಗಳನ್ನು ಚರ್ಚಿಸಿ ಟಿಪ್ಪಣಿ ತಯಾರಿಸಿರಿ.

## ಚಂಪಾರಣ್‌ನಿಂದ ಖೇಡಾದ ವರೆಗೆ

ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಹಿಂತಿರುಗಿದ ಗಾಂಧೀಜಿಯು ಮೊದಲು ಪ್ರಾದೇಶಿಕ ಹೋರಾಟಗಳತ್ತ ಗಮನಹರಿಸಿದರು. 1917 ರಲ್ಲಿ ಬಿಹಾರದ ಚಂಪಾರಣ್ ಜಿಲ್ಲೆಯ ನೀಲ ಕೃಷಿಕರ ಸಮಸ್ಯೆಗಳಲ್ಲಿ ಅವರು ಮಧ್ಯಪ್ರವೇಶಿಸಿದರು. ಚಂಪಾರಣ್ ನಿವಾಸಿಯಾದ ರಾಜಕುಮಾರ್ ಶುಕ್ಲಾರವರ ಪ್ರೇರಣೆಯಿಂದ ಅವರು ಅಲ್ಲಿಗೆ ತಲುಪಿದರು. ಯುರೋಪಿಯನ್ನರಾದ ತೋಟ ಮಾಲಕರು ನೀಲ ಕೃಷಿಕರನ್ನು ಶೋಷಣೆ ಮಾಡುತ್ತಿದ್ದರು. ಗಾಂಧೀಜಿಯ ಹಸ್ತಕ್ಷೇಪದ ನಂತರ ಬ್ರಿಟಿಷ್ ಆಡಳಿತವು ಕೃಷಿಕರ ಸಮಸ್ಯೆಯನ್ನು ಅಧ್ಯಯನ ನಡೆಸಲು ಗಾಂಧೀಜಿಯನ್ನು ಒಳಗೊಂಡ ಆಯೋಗವನ್ನು ನೇಮಿಸಿತು. ಇದರ ಪರಿಣಾಮವಾಗಿ ಕೃಷಿಕರ ಸಮಸ್ಯೆಗಳು ಸ್ವಲ್ಪ ಮಟ್ಟಿಗೆ ಪರಿಹಾರಗೊಂಡವು.

1918 ರಲ್ಲಿ ಗುಜರಾತಿನ ಅಹಮ್ಮದಾಬಾದ್‌ನಲ್ಲಿ ನಡೆದ ಬಟ್ಟೆ ಗಿರಣಿ ಕಾರ್ಮಿಕರ ಹೋರಾಟದಲ್ಲಿಯೂ ಗಾಂಧೀಜಿ ಭಾಗವಹಿಸಿದರು. ವೇತನ ಹೆಚ್ಚಳಕ್ಕೆ ಕಾರ್ಮಿಕರು ಒತ್ತಾಯಿಸಿ ಮುಷ್ಕರ ನಡೆಸಿದರು. ಗಾಂಧೀಜಿಯವರು ಉಪವಾಸ ಸತ್ಯಾಗ್ರಹವನ್ನು ಆರಂಭಿಸಿದ ಪರಿಣಾಮವಾಗಿ ಕಾರ್ಮಿಕರ ವೇತನದಲ್ಲಿ ಹೆಚ್ಚಳ ಉಂಟಾಯಿತು.

1918 ರಲ್ಲಿ ಗುಜರಾತಿನ ಖೇಡಾದಲ್ಲಿ ಕೃಷಿಕರ ಪರವಾಗಿ ಗಾಂಧೀಜಿ ಹೋರಾಟ ನಡೆಸಿದರು. ಪ್ರಕೃತಿ ವಿಕೋಪದಿಂದ ಕೃಷಿನಾಶ ಉಂಟಾದ ಖೇಡಾದ ಕೃಷಿಕರಿಗೆ ತೆರಿಗೆಯನ್ನು ಪಾವತಿಸಲು ಸಾಧ್ಯವಾಗಲಿಲ್ಲ. ತೆರಿಗೆ ವಿನಾಯಿತಿ ನೀಡಬೇಕೆಂಬ ಬೇಡಿಕೆಯೊಂದಿಗೆ ಕೃಷಿಕರು ಹೋರಾಟವನ್ನು ಆರಂಭಿಸಿದರು. ಗಾಂಧೀಜಿ ಗ್ರಾಮ ಗ್ರಾಮಗಳಿಗೆ ಸಂಚರಿಸಿ ಕೃಷಿಕರಿಗೆ ಸ್ಫೂರ್ತಿ ನೀಡಿದರು. ಶೀಘ್ರದಲ್ಲೇ, ಬೆಳೆನಾಶ ಉಂಟಾದ ಕೃಷಿಕರಿಗೆ ತೆರಿಗೆ ವಿನಾಯಿತಿಯನ್ನು ನೀಡಲು ಸರಕಾರವು ಸಿದ್ಧವಾಯಿತು.

ಈ ಮೂರು ಹೋರಾಟಗಳ ಮೂಲಕ ಗಾಂಧೀಜಿ ಎಂಬ ಹೊಸ ರಾಷ್ಟ್ರೀಯ ನಾಯಕನ ಉದಯಕ್ಕೆ ಭಾರತವು ಸಾಕ್ಷಿಯಾಯಿತು. ಈ ಹೋರಾಟಗಳ ಮೂಲಕ ಭಾರತೀಯರಿಗೆ ಅವರ ರಾಜಕೀಯ ನಿಲುವು ಹಾಗೂ ಅಹಿಂಸೆಯನ್ನು ಆಧರಿಸಿರುವ ಸತ್ಯಾಗ್ರಹ ಹೋರಾಟ ವಿಧಾನವು ಪರಿಚಿತವಾಯಿತು.

ಪಟ್ಟಿಯನ್ನು ಪೂರ್ತಿಗೊಳಿಸಿರಿ.

| .............................................. | ಚಂಪಾರಣ್ | .............................................. |
|---|---|---|
| 1918 | .............................................. | ಬಟ್ಟೆ ಗಿರಣಿ ಕಾರ್ಮಿಕರ ವೇತನ ಹೆಚ್ಚಳಕ್ಕಾಗಿ |
| .............................................. | ಖೇಡಾ | .............................................. |

ಗಾಂಧೀಜಿಯವರು ಭಾರತದಲ್ಲಿ ಭಾಗವಹಿಸಿದ ಆರಂಭ ಕಾಲದ ಹೋರಾಟಗಳ ಸಾಮಾನ್ಯ ವಿಶೇಷತೆಗಳನ್ನು ಕಂಡುಹಿಡಿದು ಚಾರ್ಟ್ ತಯಾರಿಸಿರಿ. ಭಾರತದ ರೂಪರೇಖೆಯಲ್ಲಿ ಹೋರಾಟಗಳಿಗೆ ಸಂಬಂಧಿಸಿದ ಸ್ಥಳಗಳನ್ನು ಗುರುತಿಸಿ ಚಾರ್ಟ್‌ನಲ್ಲಿ ಸೇರಿಸಿರಿ.

## ಪ್ರಥಮ ಜಾಗತಿಕ ಯುದ್ಧ ಮತ್ತು ಭಾರತ

1914 ರಿಂದ 1918 ವರೆಗೆ ನಡೆದ ಪ್ರಥಮ ಜಾಗತಿಕ ಯುದ್ಧದ ಕುರಿತು ನಾವು ಹಿಂದೆ ಚರ್ಚಿಸಿರುವೆವಲ್ಲವೇ.

ಪ್ರಥಮ ಜಾಗತಿಕ ಯುದ್ಧವು ಭಾರತದಲ್ಲಿ ಬೃಹತ್ ಆರ್ಥಿಕ ದುಷ್ಪರಿಣಾಮವನ್ನು ಉಂಟುಮಾಡಿತು.

- ಯುದ್ಧದ ಹೆಸರಿನಲ್ಲಿ ಜನರ ಮೇಲೆ ಹೆಚ್ಚುವರಿ ತೆರಿಗೆಗಳನ್ನು ಹೇರಲಾಯಿತು.
- ಸೈನಿಕರ ಅಗತ್ಯಗಳಿಗಾಗಿ ಬೃಹತ್ ಪ್ರಮಾಣದಲ್ಲಿ ಧಾನ್ಯಗಳನ್ನು ರಫ್ತು ಮಾಡಿದುದು ಆಹಾರದ ಕ್ಷಾಮಕ್ಕೆ ಕಾರಣವಾಯಿತು.
- ಆ ಸಮಯದಲ್ಲಿ ಬೆಳೆನಾಶ ಹಾಗೂ ಸಾಂಕ್ರಾಮಿಕ ರೋಗಗಳು ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸಿದವು. ಕ್ಷಾಮದಿಂದಾಗಿ ಅನೇಕರು ಮರಣ ಹೊಂದಿದರು.

ಈ ಹಿನ್ನೆಲೆಯಲ್ಲಿ ಗಾಂಧೀಜಿ ಭಾರತದ ಸ್ವಾತಂತ್ರ್ಯ ಹೋರಾಟದ ನಾಯಕತ್ವ ವಹಿಸಿದರು.

## ದಬ್ಬಾಳಿಕೆಯ ವಿರುದ್ಧ ಹೋರಾಟ

ಪ್ರಥಮ ಜಾಗತಿಕ ಯುದ್ಧದ ನಂತರ ತೀವ್ರಗೊಂಡ ಭಾರತದ ಸ್ವಾತಂತ್ರ್ಯ ಹೋರಾಟವನ್ನು ದಮನಿಸಲು ಬ್ರಿಟಿಷ್ ಸರಕಾರವು ಕೆಲವು ಕ್ರಮಗಳನ್ನು ಸ್ವೀಕರಿಸಿತು. ಇದರ ಭಾಗವಾಗಿ 1919 ರಲ್ಲಿ ರೌಲಟ್ ಕಾಯಿದೆಯನ್ನು ಜಾರಿಗೊಳಿಸಲಾಯಿತು. ಈ ಕಾನೂನಿನ ಪ್ರಕಾರ;

- ವಾರಂಟ್ ಇಲ್ಲದೆ ಯಾರನ್ನೂ ಕೂಡ ಬಂಧಿಸಬಹುದು.
- ವಿಚಾರಣೆ ಇಲ್ಲದೆ ಯಾರನ್ನೂ ಕೂಡ ಸೆರೆಮನೆಯಲ್ಲಿರಿಸಬಹುದು.

ನಾಗರಿಕ ಹಕ್ಕುಗಳನ್ನು ನಿಷೇಧಿಸುವ ಈ ಕಾನೂನನ್ನು ವಿರೋಧಿಸಿ 1919 ಎಪ್ರಿಲ್ 6 ರಂದು ಗಾಂಧೀಜಿ ರಾಷ್ಟ್ರೀಯ ಹರತಾಳಕ್ಕೆ ಕರೆ ನೀಡಿದರು. ಇದರ ಪ್ರಚಾರಕ್ಕಾಗಿ 'ಸತ್ಯಾಗ್ರಹ ಸಭಾ'ವನ್ನು ರೂಪಿಸಲಾಯಿತು. ಹರತಾಳದಲ್ಲಿ ಅಸಂಖ್ಯಾತ ಜನರು ಪಾಲ್ಗೊಂಡರು. ಗಾಂಧೀಜಿ ಈ ಹರತಾಳವನ್ನು 'ಅತ್ಯಂತ ಅದ್ಭುತ ದೃಶ್ಯ' ಎಂದು ಬಣ್ಣಿಸಿದರು.

ಪಂಜಾಬ್ ಮತ್ತು ಲಾಹೋರ್‌ನಲ್ಲಿ ಈ ಕಾನೂನಿನ ವಿರುದ್ಧ ತೀವ್ರ ಪ್ರತಿಭಟನೆಯು ನಡೆಯಿತು. ಪಂಜಾಬ್‌ನ ಜನಪ್ರಿಯ ನೇತಾರರಾದ ಡಾ. ಸತ್ಯಪಾಲ್ ಮತ್ತು ಡಾ. ಸೈಫುದ್ದೀನ್ ಕಿಚ್ಲುರನ್ನು ಬಂಧಿಸಿ ಜೈಲಿನಲ್ಲಿರಿಸಿದರು. ಅಮೃತಸರದಲ್ಲಿ ಸೈನಿಕ ಕಾನೂನನ್ನು ಘೋಷಿಸಿದರು.



ಜಲಿಯನ್ ವಾಲಾಬಾಗ್ ನ ಗುಂಡಿನ ದಾಳಿಯ ಫಲವಾಗಿ ಗೋಡೆಗಳಲ್ಲಿ ಉಂಟಾದ ದ್ವಾರಗಳು.

1919 ಎಪ್ರಿಲ್ 13 ರಂದು ನೇತಾರರ ಬಂಧನವನ್ನು ಪ್ರತಿಭಟಿಸಲು ಅಮೃತಸರದ ಜಲಿಯನ್ ವಾಲಾಬಾಗ್ ಮೈದಾನದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿದವರ ಮೇಲೆ ಬ್ರಿಟಿಷ್ ಸೈನ್ಯವು ಸೈನಿಕ ಅಧಿಕಾರಿಯಾದ ಜನರಲ್ ರೆಜಿನಾಲ್ಡ್ ಡಯರ್‌ನ ಆಜ್ಞೆಯ ಪ್ರಕಾರ ಗುಂಡು ಹಾರಿಸಿತು. ಮೈದಾನಕ್ಕೆ ಕೇವಲ ಒಂದೇ ಒಂದು ಪ್ರವೇಶದ್ವಾರವಿತ್ತು. ಯಾವುದೇ ಮುನ್ಸೂಚನೆ ನೀಡದೆ ಗುಂಡಿನ ದಾಳಿ ನಡೆಯಿತು. 10 ನಿಮಿಷಗಳ ಕಾಲ ಮುಂದುವರಿದ ಗುಂಡಿನ ದಾಳಿಯಲ್ಲಿ ಸರಕಾರದ ದಾಖಲೆ ಪ್ರಕಾರ 379 ಮಂದಿ ಮರಣ ಹೊಂದಿದರು. ಆದರೆ ನಿಜವಾದ ಮರಣ ಸಂಖ್ಯೆಯು ಇದಕ್ಕಿಂತಲೂ ಅಧಿಕವಾಗಿತ್ತು. ಸಾವಿರಕ್ಕಿಂತಲೂ ಹೆಚ್ಚು ಜನರು ಗಾಯಗೊಂಡರು.

ಜಲಿಯನ್ ವಾಲಾಬಾಗ್ ಹತ್ಯಾಕಾಂಡಕ್ಕೆ ಸಂಬಂಧಿಸಿದ ಹೆಚ್ಚಿನ ಮಾಹಿತಿಗಳನ್ನು ಸಂಗ್ರಹಿಸಿ ಅದರ ಆಧಾರದಲ್ಲಿ ರೋಲ್ ಪ್ಲೇಯನ್ನು ಮಂಡಿಸಿರಿ.

### ಹಂಟರ್ ಆಯೋಗ

ಹಂಟರ್ ಆಯೋಗವು ಜಲಿಯನ್‌ವಾಲಾ ಬಾಗ್ ಸೇರಿದಂತೆ ಇಂತಹ ಘಟನೆಗಳ ತನಿಖೆ ನಡೆಸಲು ಬ್ರಿಟಿಷ್ ಸರಕಾರವು ನೇಮಿಸಿದ ಆಯೋಗವಾಗಿದೆ. ಹಂಟರ್ ಆಯೋಗದ ಮುಂದೆ ಹಾಜರಾದ ಜನರಲ್ ಡಯರ್ ನಲ್ಲಿ ಆಯೋಗವು ಕೇಳಿದ ಕೆಲವು ಪ್ರಶ್ನೆಗಳು ಮತ್ತು ಅವುಗಳ ಉತ್ತರಗಳು ಈ ಕೆಳಗಿನಂತಿವೆ:

ಪ್ರಶ್ನೆ : ಜನರು ಹೆಚ್ಚಿರುವ ಸ್ಥಳವನ್ನು ನೋಡಿ ನೀವು ಗುಂಡು ಹಾರಿಸುವ ದಿಕ್ಕನ್ನು ಬದಲಾಯಿಸುತ್ತಾ ಹೋಗಿದ್ದೀರಿ. ಅದು ಸರಿಯೇ?

ಉತ್ತರ : ಸರಿ

ಪ್ರಶ್ನೆ : ಪ್ರವೇಶದ್ವಾರವು ದೊಡ್ಡದು ಮತ್ತು ಶಸ್ತ್ರಸಜ್ಜಿತ ವಾಹನಗಳಿಗೆ ಪ್ರವೇಶಿಸಲು ಸಾಧ್ಯವಾಗುವಂತಿದ್ದರೆ ನೀವು ಅದನ್ನು ಉಪಯೋಗಿಸಿರುತ್ತಿದ್ದಿರಾ?

ಉತ್ತರ : ಬಹುಶಃ ಉಪಯೋಗಿಸುತ್ತಿದ್ದೆ.

ಆಯೋಗದ ಮುಂದೆ ಡಯರ್ ಹೀಗೆ ಸಾಕ್ಷ್ಯ ನುಡಿದರು "ನಾನು ಎಲ್ಲರನ್ನೂ ಕೊಲ್ಲಲು ನಿರ್ಧರಿಸಿದ್ದೆ".

*Source:* Louis Fischer, *Life of Mahatma Gandhi*

## ಜನಪರ ಹೋರಾಟದೆಡೆಗೆ

ರೌಲಟ್ ಕಾನೂನಿನ ವಿರುದ್ಧದ ಹೋರಾಟವು ಸ್ವಾತಂತ್ರ್ಯ ಹೋರಾಟದಲ್ಲಿ ಒಂದು ಮಹತ್ತರವಾದ ತಿರುವಾಗಿತ್ತು. ಆದರೆ ಅದು ಮುಖ್ಯವಾಗಿ ನಗರ ಕೇಂದ್ರಿತವಾಗಿತ್ತು. ಇದನ್ನು ಗ್ರಾಮೀಣ ಪ್ರದೇಶಗಳಿಗೂ ವಿಸ್ತರಿಸುವ ಅಗತ್ಯವನ್ನು ಗಾಂಧೀಜಿ ಮನಗಂಡಿದ್ದರು. ಇದು ಪ್ರಾಯೋಗಿಕವಾಗಬೇಕಾದರೆ, ಹಿಂದೂ ಮುಸ್ಲಿಂ ಏಕತೆಯನ್ನು ಬಲಪಡಿಸಬೇಕು ಎಂದು ಗಾಂಧೀಜಿ ಮನಗಂಡರು. ಈ ಗುರಿಯೊಂದಿಗೆ ಗಾಂಧೀಜಿ ಖಿಲಾಫತ್ ಸಮಸ್ಯೆಯನ್ನು ಕೈಗೆತ್ತಿಕೊಂಡರು. ಭಾರತದಲ್ಲಿ ಖಿಲಾಫತ್ ಚಳುವಳಿಯ ನೇತೃತ್ವವನ್ನು ಸಹೋದರರಾದ ಮುಹಮ್ಮದ್ ಅಲಿ ಮತ್ತು ಶೌಕತ್ ಅಲಿಯವರು ವಹಿಸಿದ್ದರು.

### ಖಿಲಾಫತ್

ಪ್ರಥಮ ಜಾಗತಿಕ ಯುದ್ಧದ ವಿಜೇತರು ಪರಾಜಯಗೊಂಡ ಟರ್ಕಿಯೊಂದಿಗೆ ಸೆವ್ರೆಸ್ ಒಪ್ಪಂದಕ್ಕೆ ಸಹಿ ಹಾಕಿದರು. ಇದರಿಂದಾಗಿ ಟರ್ಕಿಯ ಆಡಳಿತಾಧಿಕಾರಿ ಹಾಗೂ ಜಾಗತಿಕ ಇಸ್ಲಾಂನ ಆಧ್ಯಾತ್ಮಿಕ ನಾಯಕ ಎಂದು ಪರಿಗಣಿಸಲ್ಪಟ್ಟ ಖಲೀಫರ ಅನೇಕ ಅಧಿಕಾರಗಳು ಇಲ್ಲದಾಯಿತು. ಖಲೀಫರ ಅಧಿಕಾರಗಳನ್ನು ಮರುಸ್ಥಾಪಿಸುವ ಉದ್ದೇಶದೊಂದಿಗೆ ಖಿಲಾಫತ್ ಚಳುವಳಿಯನ್ನು ಆರಂಭಿಸಲಾಯಿತು.

## ಅಸಹಕಾರದ ಮೂಲಕ ಒಂದು ಹೋರಾಟ

ಖಿಲಾಫತ್ ಸಮಿತಿ ಮತ್ತು ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ನ ನೇತೃತ್ವದಲ್ಲಿ ಅಹಿಂಸಾತ್ಮಕವಾದ ಅಸಹಕಾರ ಚಳುವಳಿಯನ್ನು ಪ್ರಾರಂಭಿಸಲಾಯಿತು. ಅಸಹಕಾರ ಹೋರಾಟದ ವಿಧಾನಗಳು ಈ ಕೆಳಗಿನಂತಿದ್ದವು.

- ಬ್ರಿಟಿಷ್ ಸರಕಾರವು ನೀಡಿದ ಪದವಿಗಳನ್ನು ಹಿಂತಿರುಗಿಸುವುದು.
- ಸರಕಾರಿ ಹುದ್ದೆಗಳಿಗೆ ರಾಜೀನಾಮೆ ನೀಡುವುದು.
- ವಕೀಲರು ನ್ಯಾಯಾಲಯಗಳನ್ನು ಬಹಿಷ್ಕರಿಸುವುದು.
- ವಿದ್ಯಾರ್ಥಿಗಳು ಬ್ರಿಟಿಷರ ಶಿಕ್ಷಣಾಲಯಗಳನ್ನು ಬಹಿಷ್ಕರಿಸುವುದು.
- ವಿದೇಶಿ ವಸ್ತುಗಳನ್ನು ಬಹಿಷ್ಕರಿಸುವುದು.

## ಹಿಂದ್ ಸ್ವರಾಜ್




ಗಾಂಧೀಜಿ ರಚಿಸಿದ 'ಹಿಂದ್ ಸ್ವರಾಜ್' ಎಂಬುದು 1909 ರಲ್ಲಿ ಪ್ರಕಟವಾದ ಪುಸ್ತಕವಾಗಿದೆ. ಅದರಲ್ಲಿ, ಗಾಂಧೀಜಿ ಭಾರತದ ಬ್ರಿಟಿಷ್ ಆಳ್ವಿಕೆಯನ್ನು ಈ ಕೆಳಗಿನಂತೆ ವಿವರಿಸಿದರು: ಭಾರತೀಯರ ಸಹಕಾರದಿಂದ ಭಾರತದಲ್ಲಿ ಬ್ರಿಟಿಷ್ ಆಡಳಿತವು ಅಸ್ತಿತ್ವಕ್ಕೆ ಬಂದಿದೆ. ಈ ಸಹಕಾರದಿಂದಲೇ ಅದು ನೆಲೆನಿಂತಿದೆ. ಭಾರತೀಯರು ಸಹಕರಿಸದಿದ್ದರೆ, ಬ್ರಿಟಿಷ್ ಆಡಳಿತವು ಒಂದು ವರ್ಷದಲ್ಲಿ ಕೊನೆಗೊಂಡು ಸ್ವರಾಜ್ ಅಸ್ತಿತ್ವಕ್ಕೆ ಬರಬಹುದು. ಹಿಂದ್ ಸ್ವರಾಜ್ ಎಂಬುದರಿಂದ ಗಾಂಧೀಜಿ ಉದ್ದೇಶಿಸಿರುವುದು ಭಾರತದ ಸ್ವಯಂ ಆಡಳಿತೆಯನ್ನಾಗಿದೆ.

- ಶಾಸಕಾಂಗವನ್ನು ಬಹಿಷ್ಕರಿಸುವುದು

ಕೋಮು ಸಾಮರಸ್ಯವನ್ನು ಬಲಪಡಿಸುವುದು, ಸ್ವದೇಶೀ ಉತ್ಪನ್ನಗಳ ಬಳಕೆ, ಖಾದಿಯನ್ನು ಪ್ರಚಾರ ಮಾಡುವುದು ಮತ್ತು ರಾಷ್ಟ್ರೀಯ ವಿದ್ಯಾಲಯಗಳನ್ನು ಸ್ಥಾಪಿಸುವುದು ಮೊದಲಾದವುಗಳು ಹೋರಾಟ ಕಾಲದ ಕಾರ್ಯಕ್ರಮಗಳಾಗಿದ್ದವು.

ಗಾಂಧೀಜಿ ಮತ್ತು ಅಲಿ ಸಹೋದರರು ಅಸಹಕಾರ ಚಳುವಳಿಯ ಸಂದೇಶಗಳೊಂದಿಗೆ ದೇಶದ ವಿವಿಧ ಭಾಗಗಳನ್ನು ಸಂದರ್ಶಿಸಿ ಜನರನ್ನು ನೇರವಾಗಿ ಭೇಟಿಯಾದರು. ಈ ಸಂದರ್ಶನಗಳು ಸ್ವಾತಂತ್ರ್ಯ ಹೋರಾಟವು ಜನಸಾಮಾನ್ಯರದ್ದೂ ಕೂಡ ಆಗಿದೆ ಎಂಬ ಅರಿವನ್ನು ಜನರಲ್ಲಿ ಮೂಡಿಸಲು ಸಹಾಯ ಮಾಡಿತು.

ಗ್ರಾಮ ಮತ್ತು ನಗರ ಪ್ರದೇಶಗಳಲ್ಲಿ ಹೋರಾಟದ ತೀವ್ರತೆಯು ಏಕಪ್ರಕಾರವಾಗಿತ್ತು. ಈ ಹೋರಾಟದಲ್ಲಿ ಸಮಾಜದ ವಿವಿಧ ವರ್ಗಗಳು ಹೇಗೆ ಭಾಗವಹಿಸಿದವು ಎಂಬುದನ್ನು ನೋಡೋಣ.

**ಮಹಿಳೆಯರು**

ವಿದೇಶಿ ವಸ್ತುಗಳನ್ನು ಬಹಿಷ್ಕರಿಸುವುದು ಮತ್ತು ವಿದೇಶಿ ಬಟ್ಟೆಗಳನ್ನು ಸಂಗ್ರಹಿಸಿ ಸುಡುವಂತಹ ಹೋರಾಟ ವಿಧಾನಗಳಲ್ಲಿ ಮಹಿಳೆಯರು ಭಾಗಿಗಳಾದರು.

**ಕಾರ್ಮಿಕರು**

ಅಸಹಕಾರ ಚಳುವಳಿಗೆ ಕಾರ್ಮಿಕರ ಪ್ರತಿಕ್ರಿಯೆಯೂ ಸಕ್ರಿಯವಾಗಿತ್ತು. ಮದ್ರಾಸ್‌ನ ಬಕಿಂಗ್‌ಹ್ಯಾಮ್ - ಕರ್ನಾಟಿಕ್ ಬಟ್ಟೆ ಗಿರಣಿಯ ಕಾರ್ಮಿಕರು, ಅಸ್ಸಾಂನ ತೋಟದ ಕಾರ್ಮಿಕರು ಮತ್ತು ಅಸ್ಸಾಂ - ಬಂಗಾಳ ರೈಲ್ವೇ ಕಾರ್ಮಿಕರು ಮೊದಲಾದವರು ಮುಷ್ಕರದಲ್ಲಿ ಪಾಲ್ಗೊಂಡು ಚಳುವಳಿಗೆ ಸಹಕರಿಸಿದರು.

**ವಿದ್ಯಾರ್ಥಿಗಳು**

ಸಾವಿರಾರು ವಿದ್ಯಾರ್ಥಿಗಳು ಸರಕಾರಿ ಶಾಲಾ ಕಾಲೇಜುಗಳನ್ನು ಬಹಿಷ್ಕರಿಸಿದರು. ಅವರು ರಾಷ್ಟ್ರೀಯ ಶಾಲೆಗಳನ್ನು ಸೇರಿ ತಮ್ಮ ಅಧ್ಯಯನವನ್ನು ಮುಂದುವರಿಸಿದರು. ಬನಾರಸ್‌ನ ಕಾಶಿ ವಿದ್ಯಾಪೀಠ, ಗುಜರಾತ್ ವಿದ್ಯಾಪೀಠ ಮತ್ತು ಅಲಿಗಢದ ಜಾಮಿಯಾ ಮಿಲಿಯಾ ಇಸ್ಲಾಮಿಯಾ ಎಂಬಿವುಗಳು ಈ ಕಾಲದಲ್ಲಿ ಪ್ರಾರಂಭವಾದ ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳಾಗಿವೆ.

**ಬುಡಕಟ್ಟು ಜನರು**

ಬುಡಕಟ್ಟು ಜನರು ಬ್ರಿಟಿಷರು ಜಾರಿಗೆ ತಂದ ಅರಣ್ಯ ಕಾನೂನುಗಳನ್ನು ಉಲ್ಲಂಘಿಸುವ ಮೂಲಕ ಹೋರಾಟದಲ್ಲಿ ಭಾಗವಹಿಸಿದರು. ಈ ಕಾನೂನುಗಳು ಅರಣ್ಯ ಸಂಪನ್ಮೂಲಗಳ ಸಂಗ್ರಹಕ್ಕೆ ಅಡ್ಡಿಯಾಗಿದ್ದವು.

**ಕೃಷಿಕರು**

ಈ ಹೋರಾಟದಲ್ಲಿ ಅನೇಕ ಕೃಷಿಕರು ಭಾಗವಹಿಸಿದ್ದರು. ಈ ಸಮಯದಲ್ಲಿಯೇ ಜವಾಹರ್ ಲಾಲ್ ನೆಹರೂರವರ ನೇತೃತ್ವದಲ್ಲಿ 'ಅವಧ್ ಕಿಸಾನ್ ಸಭಾ' ರಚನೆಯಾಯಿತು. ಬಂಗಾಳದ ಕೃಷಿ ವಲಯದಲ್ಲಿ ಸೆಣಬು ಕೃಷಿ ಬಹಿಷ್ಕಾರ ಹೋರಾಟ ನಡೆಯಿತು. ಸೆಣಬಿನ ಬದಲಿಗೆ ಭತ್ತ ಮತ್ತು ಹತ್ತಿಯನ್ನು ಕೃಷಿ ಮಾಡಲು ನಿರ್ಧರಿಸಲಾಯಿತು.

ಸೆಣಬಿನ ಬದಲಿಗೆ ಭತ್ತ ಮತ್ತು ಹತ್ತಿಯನ್ನು ಬೆಳೆಯುವ ನಿರ್ಧಾರದ ಹಿಂದಿನ ಪ್ರಮುಖ ಉದ್ದೇಶಗಳು ಈ ಕೆಳಗಿನಂತಿವೆ.

- ಸೆಣಬಿನ ಲಭ್ಯತೆಯನ್ನು ಇಲ್ಲದಾಗಿಸಿ ಬ್ರಿಟಿಷರ ಒಡೆತನದಲ್ಲಿರುವ ಸೆಣಬು ಗಿರಣಿಗಳನ್ನು ಮುಚ್ಚಿಸುವುದು.
- ಭತ್ತದ ಕೃಷಿಯನ್ನು ವಿಸ್ತರಿಸುವ ಮೂಲಕ ಆಹಾರದ ಲಭ್ಯತೆಯನ್ನು ಖಚಿತಪಡಿಸಿಕೊಳ್ಳುವುದು.
- ಹತ್ತಿಯ ಲಭ್ಯತೆಯ ಮೂಲಕ ನೇಯ್ಗೆ ಕೆಲಸ ಮತ್ತು ಖಾದಿ ಬಳಕೆಯನ್ನು ಹೆಚ್ಚಿಸುವುದು.

'ಬಹಿಷ್ಕಾರ ಮತ್ತು ನಿರ್ಮಾಣ ಚಟುವಟಿಕೆಗಳು ಅಸಹಕಾರ ಚಳುವಳಿಯ ಮೂಲ ಆಶಯಗಳಾಗಿದ್ದವು' ಎಂಬ ವಿಷಯದ ಕುರಿತು ಚರ್ಚೆಯನ್ನು ಆಯೋಜಿಸಿರಿ.

1922 ರ ಫೆಬ್ರವರಿ 5 ರಂದು ಅಸಹಕಾರ ಚಳುವಳಿಯ ಸಮಯದಲ್ಲಿ ಉತ್ತರ ಪ್ರದೇಶದ ಚೌರಿ ಚೌರಾದಲ್ಲಿ ಪ್ರತಿಭಟನಾಕಾರರ ಮತ್ತು ಪೊಲೀಸರ ನಡುವೆ ಘರ್ಷಣೆಗಳು ಉಂಟಾದವು. ಉದ್ರಿಕ್ತಗೊಂಡ ಗುಂಪೊಂದು ಪೊಲೀಸ್ ಠಾಣೆಗೆ ಬೆಂಕಿ ಹಚ್ಚಿತು. ಇದರ ಪರಿಣಾಮವಾಗಿ 22 ಪೊಲೀಸರು ಸಾವನ್ನಪ್ಪಿದರು. ಚಳುವಳಿಯು ಅಹಿಂಸೆಯ ಮಾರ್ಗದಿಂದ ವಿಮುಖವಾಗುತ್ತಿದೆ ಎಂದು ಅರಿತ ಗಾಂಧೀಜಿ ಚಳುವಳಿಯನ್ನು ಹಿಂತೆಗೆದುಕೊಂಡರು. ಈ ನಿರ್ಧಾರವು ಇತರ ನಾಯಕರನ್ನು ಅಚ್ಚರಿಗೊಳಿಸಿತು. ಗಾಂಧೀಜಿ ತೀವ್ರ ಟೀಕೆಗೊಳಗಾದರು. ಸುಭಾಷ್ ಚಂದ್ರ ಬೋಸ್ ಈ ನಿರ್ಧಾರವನ್ನು 'ರಾಷ್ಟ್ರೀಯ ವಿಪತ್ತು' ಎಂದು ಬಣ್ಣಿಸಿದರು.

### ಚಿರಾಲ ಪೆರಾಲ

ಅಸಹಕಾರ ಚಳುವಳಿಯ ಕಾಲದಲ್ಲಿ ಗಮನಾರ್ಹವಾದ ಜನಪರ ಚಳುವಳಿಯು ನಡೆದ ಆಂಧ್ರಪ್ರದೇಶದ ಗುಂಟೂರು ಜಿಲ್ಲೆಯ ಚಿರಾಲ ಪೆರಾಲವು ಒಂದು ಸಣ್ಣ ಪಟ್ಟಣವಾಗಿತ್ತು. ಸರಕಾರವು ಈ ಪಟ್ಟಣವನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸಲು ಮುಂದಾಗಿತ್ತು. ಇದು ಅಲ್ಲಿನ ತೆರಿಗೆ ಹೊರೆಯಲ್ಲಿ ಭಾರಿ ಹೆಚ್ಚಳಕ್ಕೆ ಕಾರಣವಾಗಬಹುದಿತ್ತು. ಇದರ ವಿರುದ್ಧ ದುಗ್ಗಿರಾಲ ಗೋಪಾಲಕೃಷ್ಣ ರ ನೇತೃತ್ವದಲ್ಲಿ ಸುಮಾರು ಹದಿನೈದು ಸಾವಿರದಷ್ಟು ಜನರು ತೆರಿಗೆ ನಿರಾಕರಣೆ ಮುಷ್ಕರ ನಡೆಸಿದರಲ್ಲದೆ ಪಟ್ಟಣವನ್ನು ತೊರೆದರು. ಅವರು 11 ತಿಂಗಳುಗಳ ಕಾಲ ಬೇರೊಂದೆಡೆಯಲ್ಲಿ ವಾಸಿಸಿದರು.

*Source:* Sumit Sarkar, *Modern India 1885-1947*

ಚೌರಿ ಚೌರಾ ಘಟನೆಯ ಆಧಾರದಲ್ಲಿ ಒಂದು ಪತ್ರಿಕಾ ವರದಿಯನ್ನು ತಯಾರಿಸಿರಿ.

ಅನಂತರ ಗಾಂಧೀಜಿಯನ್ನು ಬಂಧಿಸಿ, ವಿಚಾರಣೆಗೊಳಪಡಿಸಿದ ನಂತರ ಆರು ವರ್ಷಗಳ ಜೈಲು ಶಿಕ್ಷೆಯನ್ನು ವಿಧಿಸಿದರು. ನೀವು ಪಾಠದ ಆರಂಭದಲ್ಲಿ ಓದಿರುವುದು ಈ ವಿಚಾರಣೆಗೆ ಸಂಬಂಧಿಸಿದ್ದಾಗಿದೆ.

## ಹೋರಾಟವು ಶಾಸನಸಭೆಯಲ್ಲಿ

ಅಸಹಕಾರ ಚಳುವಳಿಯ ಸಮಯದಲ್ಲಿ ಚುನಾವಣೆಗಳನ್ನೂ ಶಾಸನಸಭೆಯನ್ನೂ ಬಹಿಷ್ಕರಿಸಿದರು. ಇದರ ಕುರಿತು ಭಿನ್ನಾಭಿಪ್ರಾಯವಿದ್ದ ಕಾಂಗ್ರೆಸ್ ನಾಯಕರಾದ ಸಿ.ಆರ್. ದಾಸ್, ಮೋತಿಲಾಲ್ ನೆಹರು ಮೊದಲಾದವರ ನೇತೃತ್ವದಲ್ಲಿ 1923 ರಲ್ಲಿ ಸ್ವರಾಜ್ ಪಕ್ಷವನ್ನು ರೂಪಿಸಿದರು. ಶಾಸನ ಸಭೆಗಳನ್ನು ಹೋರಾಟದ ವೇದಿಕೆಯನ್ನಾಗಿ ಮಾಡುವುದು ಅವರ ಗುರಿಯಾಗಿತ್ತು. ಇದಕ್ಕಾಗಿ ಅವರು ಚುನಾವಣೆಗಳಲ್ಲಿ



ಸಿ.ಆರ್. ದಾಸ್



ಮೋತಿಲಾಲ್ ನೆಹರು

ಸ್ಪರ್ಧಿಸಿ, ಶಾಸನಸಭೆಯ ಸದಸ್ಯತನವನ್ನು ಗಳಿಸಿ ಸರಕಾರವನ್ನು ಟೀಕಿಸಿದರು. ಸ್ವರಾಜ್ ಪಕ್ಷಕ್ಕೆ ಶಾಸನಸಭೆಗಳಲ್ಲಿನ ಸರಕಾರದ ಜನವಿರೋಧಿ ನೀತಿಗಳನ್ನು ಬಹಿರಂಗಪಡಿಸಲು ಸಾಧ್ಯವಾಯಿತು.

ಸ್ವರಾಜ್ ಪಕ್ಷದ ನೀತಿಗಳು ಅಸಹಕಾರ ಚಳವಳಿಯ ನೀತಿಗಳಿಗಿಂತ ಹೇಗೆ ಭಿನ್ನವಾಗಿದ್ದವು? ಚರ್ಚಿಸಿರಿ.

**ಶತಮಾನ ಪೂರ್ತಿಗೊಳ್ಳುವ ಸಂಗಮ**



ಭಾರತೀಯ ರಾಷ್ಟ್ರೀಯ ಚಳುವಳಿಯನ್ನು ಮುನ್ನಡೆಸಿದ ಗಾಂಧೀಜಿ ಮತ್ತು ಕೇರಳದಲ್ಲಿ ನವೋತ್ಥಾನ ಚಳುವಳಿಯನ್ನು ಮುನ್ನಡೆಸಿದ ಶ್ರೀ ನಾರಾಯಣ ಗುರುಗಳು 1925 ಮಾರ್ಚ್ 12 ರಂದು ವರ್ಕಲದ ಶಿವಗಿರಿ ಮಠದ ಬಳಿಯ ವನಜಾಕ್ಷಿ ಮಂದಿರದಲ್ಲಿ ಭೇಟಿಯಾದರು. 2025 ಮಾರ್ಚ್ 12 ಕ್ಕೆ ಈ ಇಬ್ಬರು ಮಹಾನ್ ವ್ಯಕ್ತಿಗಳ ಭೇಟಿಯಾಗಿ ಒಂದು ಶತಮಾನವು ಪೂರ್ತಿಯಾಯಿತು.

## ಮುಂದುವರಿಯುತ್ತಿರುವ ಜನಪರ ಹೋರಾಟಗಳು

ಚೌರಿ ಚೌರಾ ಘಟನೆಯ ನಂತರ ಅಸಹಕಾರ ಚಳುವಳಿಯನ್ನು ಹಿಂತೆಗೆದುಕೊಂಡರೂ ಅದು ಜನರಲ್ಲಿ ಉಂಟುಮಾಡಿದ ಉತ್ಸಾಹವು ಕೊನೆಗೊಳ್ಳಲಿಲ್ಲ. ನಂತರದ ವರ್ಷಗಳಲ್ಲಿಯೂ ಭಾರತದ ವಿವಿಧ ಭಾಗಗಳಲ್ಲಿ ಬ್ರಿಟಿಷ್ ವಿರೋಧಿ ಚಳುವಳಿಗಳು ನಡೆದವು. ಆಂಧ್ರಪ್ರದೇಶದ ಬುಡಕಟ್ಟು ಜನರ ಹೋರಾಟವು ಇದಕ್ಕೊಂದು ಉದಾಹರಣೆಯಾಗಿದೆ. ರಾಂಪಾ ದಂಗೆ ಎಂದು ಕರೆಯಲ್ಪಡುವ ಈ ಚಳುವಳಿಗೆ ಅಲ್ಲೂರಿ ಸೀತಾರಾಮರಾಜು ನೇತೃತ್ವ ವಹಿಸಿದ್ದರು. ಬ್ರಿಟಿಷರ ಅರಣ್ಯ ಕಾನೂನುಗಳಿಂದಾಗಿ ಕಾಡುಗಳಲ್ಲಿ ಜಾನುವಾರುಗಳನ್ನು ಮೇಯಿಸುವ ಹಕ್ಕುಗಳ ನಿರಾಕರಣೆ ಹಾಗೂ ಲೇವಾದೇವಿಗಾರರ ಶೋಷಣೆಯು ಅವರನ್ನು ಹೋರಾಟಕ್ಕೆ ಪ್ರೇರೇಪಿಸಿತು.

2500 ಚದರ ಮೈಲು ಭೂಪ್ರದೇಶವು ಪ್ರತಿಭಟನೆಕಾರರ ನಿಯಂತ್ರಣದಲ್ಲಾಗಿತ್ತು. ಮಲಬಾರ್ ಸ್ಪೆಷಲ್ ಪೊಲೀಸ್, ಅಸ್ಸಾಂ ರೈಫಲ್ಸ್ ಎಂಬೀ ಸೈನಿಕ ವಿಭಾಗಗಳನ್ನು ಉಪಯೋಗಿಸಿ ಪ್ರತಿಭಟನೆಯನ್ನು ಹತ್ತಿಕ್ಕಿದರು. ಪ್ರತಿಭಟನೆಯ ಸಮಯದಲ್ಲಿ ಅಲ್ಲೂರಿ ಸೀತಾರಾಮರಾಜು ಕೊಲ್ಲಲ್ಪಟ್ಟರು.

ಈ ಸಮಯದಲ್ಲಿ ವಿದ್ಯಾರ್ಥಿ - ಯುವಜನ ಸಂಘಟನೆಗಳು ಪ್ರಬಲವಾದವು. ಈ ಸಂಘಟನೆಗಳು ಪೂರ್ಣ ಸ್ವಾತಂತ್ರ್ಯ ಎಂಬ ಗುರಿಯನ್ನು ಮುಂದಿಟ್ಟವು. ಜವಾಹರ್ ಲಾಲ್ ನೆಹರು ಮತ್ತು ಸುಭಾಷ್ ಚಂದ್ರ ಬೋಸ್ ರವರು ಭಾರತದಾದ್ಯಂತ ಸಂಚರಿಸಿ ವಿದ್ಯಾರ್ಥಿಗಳನ್ನು ಮತ್ತು ಯುವಕರನ್ನು ಉದ್ದೇಶಿಸಿ ಮಾತನಾಡಿದರು.

## 'ಸೈಮನ್ ಗೋ ಬ್ಯಾಕ್' (Simon Go Back)

ಸರ್. ಜಾನ್ ಸೈಮನ್ ನೇತೃತ್ವದ ಆಯೋಗವು ಭಾರತದಲ್ಲಿ ಜಾರಿಗೆ ತರಬೇಕಾದ ಸಾಂವಿಧಾನಿಕ ಸುಧಾರಣೆಗಳ ಕುರಿತು ಶಿಫಾರಸ್ಸುಗಳನ್ನು ಮಾಡಲು ಬ್ರಿಟಿಷ್ ಸರಕಾರವು ನೇಮಿಸಿದ ಆಯೋಗವಾಗಿದೆ. ಆಯೋಗದ ಏಳು ಸದಸ್ಯರೂ ಬ್ರಿಟಿಷರಾಗಿದ್ದರು. ಈ ಕಾರಣದಿಂದಾಗಿ ಕಾಂಗ್ರೆಸ್ ಮತ್ತು ಇತರ ಕೆಲವು ರಾಜಕೀಯ ಪಕ್ಷಗಳು ಸೈಮನ್ ಆಯೋಗವನ್ನು ಬಹಿಷ್ಕರಿಸಲು ನಿರ್ಧರಿಸಿದವು.



ಸೈಮನ್ ಆಯೋಗದ ವಿರುದ್ಧ ನಡೆಸಿದ ಪ್ರತಿಭಟನೆ

ಆಯೋಗವು ಭಾರತಕ್ಕೆ ತಲುಪಿದ ದಿನ (1928 ಫೆಬ್ರವರಿ 3) ದೇಶದಾದ್ಯಂತ ಹರತಾಳ ಆಚರಿಸಲಾಯಿತು. 'ಸೈಮನ್ ಗೋ ಬ್ಯಾಕ್' ಎಂಬ ಘೋಷಣೆಯು ಭಾರತದ ಬೀದಿ ಬೀದಿಗಳಲ್ಲಿ ಪ್ರತಿಧ್ವನಿಸಿತು. ಲಾಹೋರ್‌ನಲ್ಲಿ ಪ್ರತಿಭಟನಾಕಾರರ ಮೇಲೆ ನಡೆದ ಲಾಠಿಚಾರ್ಜ್‌ನಲ್ಲಿ ಗಾಯಗೊಂಡಿದ್ದ ಲಾಲಾ ಲಜಪತ್ ರಾಯ್ ನಂತರ ನಿಧನರಾದರು.

ಸುದೃಢವಾದ ಸಾಂವಿಧಾನಿಕ ಸುಧಾರಣೆಗಳನ್ನು ಆವಿಷ್ಕರಿಸಲು ಭಾರತೀಯರು ಸಮರ್ಥರಲ್ಲ ಎಂದು ಬ್ರಿಟಿಷ್ ಅಧಿಕಾರಿಗಳು ನಿರಂತರವಾಗಿ ಹೇಳುತ್ತಿದ್ದರು. ಈ ಹಿನ್ನೆಲೆಯಲ್ಲಿ ವಿವಿಧ ಪಕ್ಷಗಳು ಪುಣೆಯಲ್ಲಿ ಸಭೆ ಸೇರಿ ಸಾಂವಿಧಾನಿಕ ಸುಧಾರಣೆಗಳ ಕುರಿತು ವರದಿಯನ್ನು ಸಿದ್ಧಪಡಿಸಿದವು. ಮೋತಿಲಾಲ್ ನೆಹರೂರವರ ನೇತೃತ್ವದಲ್ಲಿ ಸಿದ್ಧಪಡಿಸಲಾದ ಈ ವರದಿಯನ್ನು ನೆಹರೂ ಸಮಿತಿ ವರದಿ ಎಂದು ಕರೆಯುತ್ತಾರೆ. ಈ ವರದಿಯು ನಂತರದ ಕಾಲದಲ್ಲಿ ಭಾರತೀಯ ಸಂವಿಧಾನ ರಚನೆಯಲ್ಲಿ ಪ್ರಭಾವ ಬೀರಿತು.

ಸೈಮನ್ ಆಯೋಗದ ವಿರುದ್ಧ ನಡೆದ ಹೋರಾಟದ ಕುರಿತು ಒಂದು ಲಘು ಟಿಪ್ಪಣಿ ತಯಾರಿಸಿರಿ.

## ಬರ್ದೋಲಿಯ ಕೃಷಿಕರ ದಂಗೆ

1928ರಲ್ಲಿ ಗುಜರಾತ್‌ನ ಬರ್ದೋಲಿಯು ಒಂದು ಬೃಹತ್ ಕೃಷಿಕ ಚಳುವಳಿಗೆ ವೇದಿಕೆಯಾಯಿತು. ಈ ಚಳುವಳಿಗೆ ಸರ್ದಾರ್ ವಲ್ಲಭಭಾಯಿ ಪಟೇಲ್ ನೇತೃತ್ವ ವಹಿಸಿದ್ದರು. ಅಬ್ಬಾಸ್ ತ್ಯಾಬ್ಜಿ ಮತ್ತು ವಿಠಲಭಾಯಿ ಪಟೇಲ್ ಕೂಡ ಈ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದರು.

ತೆರಿಗೆಯ ಹೆಚ್ಚಳವು ದಂಗೆಯ ಪ್ರಧಾನ ಕಾರಣವಾಗಿತ್ತು. ರೈತರು ತೆರಿಗೆ ಪಾವತಿಸಲು ನಿರಾಕರಿಸುವ ಮೂಲಕ ದಂಗೆಯನ್ನು ಆರಂಭಿಸಿದರು. ಸರಕಾರವು ಅವರ ಕೃಷಿಭೂಮಿಗಳು, ಜಾನುವಾರುಗಳು, ಗಾಡಿಗಳು ಮತ್ತು ಕೃಷಿ ಉಪಕರಣಗಳನ್ನು ವಶಪಡಿಸಿಕೊಂಡಿತು. ಸರ್ದಾರ್ ವಲ್ಲಭಭಾಯಿ ಪಟೇಲ್ ಪ್ರತಿಭಟನಾಕಾರರಲ್ಲಿ 'ನಿಮ್ಮ ಗಾಡಿಗಳನ್ನು ಮತ್ತು ಉಪಕರಣಗಳನ್ನು ಬಿಡಿಭಾಗಗಳನ್ನಾಗಿಸಿ ಅವುಗಳನ್ನು ವಿವಿಧ ಸ್ಥಳಗಳಲ್ಲಿಟ್ಟು ಕಾಪಾಡಿರಿ' ಎಂದು ಸೂಚಿಸಿದರು. ಗಾಂಧೀಜಿ ಬರ್ದೋಲಿಗೆ ಭೇಟಿ ನೀಡಿ ಕೃಷಿಕರಿಗೆ ದೃಢ ಬೆಂಬಲ ನೀಡಿದರು. ಕೊನೆಗೆ ಸರಕಾರವು ತೆರಿಗೆ ಹೆಚ್ಚಳವನ್ನು ಹಿಂತೆಗೆದುಕೊಂಡಿತು. ಹೀಗೆ ದಂಗೆಯು ಯಶಸ್ವಿಯಾಗಿ ಕೊನೆಗೊಂಡಿತು.

ಅಸಹಕಾರ ಚಳುವಳಿಯನ್ನು ಹಿಂತೆಗೆದ ನಂತರ ನಡೆದ ಪ್ರಮುಖ ಹೋರಾಟಗಳನ್ನೊಳಗೊಂಡ ಚಾರ್ಟ್ ತಯಾರಿಸಿರಿ.

## ಲಾಹೋರ್ ಸಮ್ಮೇಳನ ಎಂಬ ಮಹತ್ವದ ತಿರುವು

*"ನಾನು ಓರ್ವ ಪ್ರಜಾಪ್ರಭುತ್ವವಾದಿ ಮತ್ತು ಸಮಾಜವಾದಿಯಾಗಿದ್ದೇನೆ, ನನಗೆ ರಾಜರು ಮತ್ತು ರಾಜಕುಮಾರರಲ್ಲಿ ನಂಬಿಕೆಯಿಲ್ಲ. ಹೊಸ ಕೈಗಾರಿಕಾ ರಾಜರನ್ನು ಸೃಷ್ಟಿಸುವ ವ್ಯವಸ್ಥೆಯಲ್ಲಿಯೂ ನನಗೆ ನಂಬಿಕೆಯಿಲ್ಲ."*

*(ಜವಾಹರ್‌ಲಾಲ್ ನೆಹರು)*

*Source:* Bipan Chandra et-al, *India's Struggle for Independence*

ಮೇಲಿನ ಹೇಳಿಕೆಯು 1929 ರ ಡಿಸೆಂಬರ್‌ನಲ್ಲಿ ಲಾಹೋರ್‌ನಲ್ಲಿ ನಡೆದ ಕಾಂಗ್ರೆಸ್‌ನ ವಾರ್ಷಿಕ ಸಮ್ಮೇಳನದಲ್ಲಿ ಜವಾಹರ್ ಲಾಲ್ ನೆಹರೂರವರು ಮಾಡಿದ ಅಧ್ಯಕ್ಷೀಯ ಭಾಷಣದ ಆಯ್ದ ಭಾಗವಾಗಿದೆ. ಲಾಹೋರ್ ಸಮ್ಮೇಳನವು ಹಲವು ಕಾರಣಗಳಿಂದ ಭಾರತೀಯ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಮಹತ್ವದ್ದಾಗಿತ್ತು.


ಜವಾಹರ್ ಲಾಲ್ ನೆಹರು ಮತ್ತು ಗಾಂಧೀಜಿ

ಅವುಗಳಲ್ಲಿ ಕೆಲವನ್ನು ಕೆಳಗೆ ನೀಡಲಾಗಿದೆ.

- ಕಾಂಗ್ರೆಸ್, ಮೊದಲ ಬಾರಿಗೆ ಪೂರ್ಣ ಸ್ವಾತಂತ್ರ್ಯದ ಬೇಡಿಕೆಯನ್ನು ಮುಂದಿಟ್ಟಿತು.
- ಇದಕ್ಕಾಗಿ ಜನಪರ ಹೋರಾಟವನ್ನು ಪ್ರಾರಂಭಿಸಲು ಗಾಂಧೀಜಿಗೆ ಜವಾಬ್ದಾರಿ ನೀಡಲಾಯಿತು.
- ತ್ರಿವರ್ಣ ಧ್ವಜವನ್ನು ಅಂಗೀಕರಿಸಲಾಯಿತು.

ಲಾಹೋರ್ ಸಮ್ಮೇಳನವು ಸ್ವಾತಂತ್ರ್ಯ ಹೋರಾಟದಲ್ಲಿ ಒಂದು ಮೈಲುಗಲ್ಲಾಗಲು ಕಾರಣವೇನು?

### ಸ್ವಾತಂತ್ರ್ಯಕ್ಕೂ ಮುನ್ನ 'ಸ್ವಾತಂತ್ರ್ಯ ದಿನಾಚರಣೆ'

ಲಾಹೋರ್ ಸಮ್ಮೇಳನದ ತೀರ್ಮಾನದಂತೆ, ಭಾರತದಾದ್ಯಂತ ಜನವರಿ 26, 1930 ರಂದು ಸ್ವಾತಂತ್ರ್ಯ ದಿನವನ್ನು ಆಚರಿಸಿದರು. ಹಳ್ಳಿ ಮತ್ತು ನಗರಗಳಲ್ಲಿ ಏಕಕಾಲದಲ್ಲಿ ಸಭೆ ಸೇರಿ ಸ್ವಾತಂತ್ರ್ಯ ಘೋಷಣೆಯನ್ನು ಮಾಡಿದರು. ಜನರು ರಾಷ್ಟ್ರಧ್ವಜಾರೋಹಣೆಯನ್ನು ಮಾಡಿ, ದೇಶಭಕ್ತಿ ಗೀತೆಗಳನ್ನು ಹಾಡುವ ಮೂಲಕ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಭಾಗವಹಿಸಿದರು. ಚರಕದಲ್ಲಿ ನೂಲುವುದು, ಮದ್ಯ ನಿಷೇಧ ಮತ್ತು ಹಿಂದೂ-ಮುಸ್ಲಿಂ ಏಕತೆಯ ಪ್ರಚಾರವೂ ಇದರ ಭಾಗವಾಗಿತ್ತು. ನಂತರದ ವರ್ಷಗಳಲ್ಲಿಯೂ ಜನವರಿ 26 ನ್ನು ಸ್ವಾತಂತ್ರ್ಯ ದಿನವಾಗಿ ಆಚರಿಸುತ್ತಿದ್ದರು. ಈ ಹಿನ್ನೆಲೆಯಲ್ಲಿ ಸ್ವಾತಂತ್ರ್ಯದ ನಂತರ ಜನವರಿ 26 ನ್ನೇ ಗಣರಾಜ್ಯೋತ್ಸವವನ್ನಾಗಿ ಆಯ್ಕೆ ಮಾಡಿದರು.

## ದಂಡಿಯಲ್ಲಿನ ಕಡಲ ಘರ್ಜನೆ


ಗಾಂಧೀಜಿ ಉಪ್ಪನ್ನು ಕೈಯಲ್ಲಿ ಹಿಡಿದ ಕಾನೂನನ್ನು ಉಲ್ಲಂಘಿಸಿದಕ್ಷಣ

ಲಾಹೋರ್ ಸಮ್ಮೇಳನದ ತೀರ್ಮಾನದಂತೆ ಪೂರ್ಣ ಸ್ವಾತಂತ್ರ್ಯವನ್ನು ಸಾಧಿಸುವ ಗುರಿಯೊಂದಿಗೆ ಜನಾಂದೋಲನವನ್ನು ಪ್ರಾರಂಭಿಸುವ ಜವಾಬ್ದಾರಿಯನ್ನು ಗಾಂಧೀಜಿಯವರಿಗೆ ನೀಡಲಾಯಿತಲ್ಲವೇ. ಚಳವಳಿಯನ್ನು ಪ್ರಾರಂಭಿಸುವ ಮೊದಲು ಗಾಂಧೀಜಿ ಅಂದಿನ ವೈಸರಾಯ್ ಆಗಿದ್ದ ಲಾರ್ಡ್ ಇರ್ವಿನ್ ಅವರಿಗೆ ಬ್ರಿಟಿಷ್ ಆಳ್ವಿಕೆಯಲ್ಲಿ ಭಾರತೀಯರ ಕಷ್ಟಗಳನ್ನು ವಿವರಿಸಿ ಒಂದು ಪತ್ರ ಬರೆದಿದ್ದರು. ಸರಕಾರದ ವಿರುದ್ಧ ನಾಗರಿಕ ಕಾನೂನುಲ್ಲಂಘನೆಯನ್ನು ಪ್ರಾರಂಭಿಸುವ ಉದ್ದೇಶವನ್ನು ಪತ್ರದಲ್ಲಿ ಉಲ್ಲೇಖಿಸಲಾಗಿತ್ತು. ಸಮಾಜದ ಎಲ್ಲ ವಿಭಾಗದವರು ಚಳುವಳಿಯಲ್ಲಿ ಪಾಲ್ಗೊಳ್ಳುವವಂತೆ ಮಾಡುವುದು ಗಾಂಧೀಜಿಯವರ ಉದ್ದೇಶವಾಗಿತ್ತು. ಅನಂತರ ಉಪ್ಪಿನ ಕಾನೂನನ್ನು ಉಲ್ಲಂಘಿಸುವ ಮೂಲಕ ನಾಗರಿಕ ಕಾನೂನು ಉಲ್ಲಂಘನಾ ಚಳವಳಿಯನ್ನು ಪ್ರಾರಂಭಿಸಲು ಗಾಂಧೀಜಿ ನಿರ್ಧರಿಸಿದರು.

ಗುಜರಾತ್‌ನ ದಂಡಿ ತೀರದಲ್ಲಿ ಉಪ್ಪಿನ ಕಾನೂನನ್ನು ಉಲ್ಲಂಘಿಸಲು ತೀರ್ಮಾನಿಸಲಾಯಿತು. ಇದಕ್ಕಾಗಿ ಗಾಂಧೀಜಿ ಮತ್ತು 78 ಆಯ್ದ ಸ್ವಯಂಸೇವಕರು ಸಬರಮತಿ ಆಶ್ರಮದಿಂದ ದಂಡಿ ತೀರಕ್ಕೆ ಪಾದಯಾತ್ರೆ ನಡೆಸಿದರು. 24 ದಿನಗಳ ಕಾಲ ಮುಂದುವರಿದ ಯಾತ್ರೆಯನ್ನು ವರದಿ ಮಾಡಲು ಅನೇಕ ವಿದೇಶಿ ಪತ್ರಕರ್ತರು ಕೂಡಾ ಬಂದಿದ್ದರು. ಯಾತ್ರೆಯುದ್ದಕ್ಕೂ

ರಸ್ತೆಯ ಇಕ್ಕೆಲಗಳಲ್ಲಿ ಕಿಕ್ಕಿರಿದು ನೆರೆದವರಲ್ಲಿ ಗಾಂಧೀಜಿ ಶುಚಿತ್ವ ಬೋಧನೆ, ಖಾದಿಯನ್ನು ಧರಿಸುವ ಅಗತ್ಯ, ಸಾಮುದಾಯಿಕ ಸೌಹಾರ್ದತೆ ಇತ್ಯಾದಿಗಳ ಕುರಿತು ಬೋಧನೆಯನ್ನು ನೀಡಿದರು. 1930 ಎಪ್ರಿಲ್ 6 ರಂದು ದಂಡಿ ಸಮುದ್ರ ತೀರದಲ್ಲಿ ಉಪ್ಪನ್ನು ತಯಾರಿಸಿ ಕಾನೂನು ಉಲ್ಲಂಘನಾ ಹೋರಾಟವನ್ನು ಆರಂಭಿಸಿದರು. ಉಪ್ಪು ತಯಾರಿಕೆಯ ಕುರಿತಾದ ಲಘು ಲೇಖನಗಳನ್ನು ಜನರಿಗೆ ಹಂಚಿದರು.

## ಯಾಕಾಗಿ ಉಪ್ಪು?

ಉಪ್ಪು ತಯಾರಿಸುವುದು ಸರಕಾರದ ಏಕಸ್ವಾಮ್ಯವಾದ ಅಧಿಕಾರವಾಗಿತ್ತು. ಖಾಸಗಿಯಾಗಿ ವ್ಯಕ್ತಿಗಳು ಉಪ್ಪು ತಯಾರಿಸುವುದನ್ನು ಅಪರಾಧ ಎಂದು ಪರಿಗಣಿಸಿ ಅವರಿಗೆ ಶಿಕ್ಷೆಯನ್ನು ವಿಧಿಸುತ್ತಿದ್ದರು. ಈ ಕಾನೂನನ್ನು ಉಲ್ಲಂಘಿಸಲು ಗಾಂಧೀಜಿ ತೀರ್ಮಾನಿಸಿದರು.

ಉಷ್ಣವಲಯ ಹವಾಗುಣವು ಅನುಭವಕ್ಕೆ ಬರುವ ಭಾರತದ ಜನರಿಗೂ, ಸಾಕು ಮೃಗಗಳಿಗೂ ಉಪ್ಪು ಅತ್ಯವಶ್ಯಕ ವಸ್ತುವಾಗಿತ್ತು. ಕೃಷಿ ಅಗತ್ಯಗಳಿಗೂ ಕೂಡ ಉಪಯೋಗಿಸುತ್ತಿದ್ದ ಉಪ್ಪಿನ ಮೇಲಿನ ಸರಕಾರದ ಏಕಸ್ವಾಮಿತ್ವವನ್ನು 'ಅಸಹನೀಯ ಏಕಸ್ವಾಮಿತ್ವ' ಎಂದು ಗಾಂಧೀಜಿ ಬಣ್ಣಿಸಿದರು.

## ಧರಾಸನ ಹೋರಾಟ

1930 ಮೇ 21 ರಂದು ಎರಡು ಸಾವಿರಕ್ಕಿಂತಲೂ ಹೆಚ್ಚು ಜನರನ್ನೊಳಗೊಂಡ ಹೋರಾಟಗಾರರ ಒಂದು ಗುಂಪು ಗುಜರಾತಿನ ಧರಾಸನ ಉಪ್ಪು ತಯಾರಿ ಕೇಂದ್ರವನ್ನು ತಲುಪಿದರು. ಅವರು ಸಮೀಪಿಸುತ್ತಿದ್ದಂತೆ ಧಾವಿಸಿದ ಪೊಲೀಸ್ ಸೇನೆಯು ಕಬ್ಬಿಣದ ಸಲಾಕೆಯನ್ನು ಜೋಡಿಸಿದ ಲಾಠಿಯನ್ನುಪಯೋಗಿಸಿ ಹೋರಾಟಗಾರರು ಧರಾಶಾಹಿಯಾಗುವ ವರೆಗೂ ಥಳಿಸಿದರು. ಗಾಯಗೊಂಡವರನ್ನು ಸಹಹೋರಾಟಗಾರರು ಕೊಂಡೊಯ್ಯುವುದರೊಂದಿಗೆ, ಹೋರಾಟಗಾರರ ಇನ್ನೊಂದು ಗುಂಪು ಮುಂದೆ ಬಂತು. ಅವರನ್ನೂ ಪೋಲೀಸರು ನಿರ್ದಯವಾಗಿ ಥಳಿಸಿದರು. ಅವರನ್ನು ಕೊಂಡೊಯ್ಯುವಾಗ ಮತ್ತಷ್ಟು ಹೋರಾಟಗಾರರು ಮುಂದೆ ಬರಲಾರಂಭಿಸಿದರು. ಇದು ಹೀಗೆಯೇ ಮುಂದುವರಿಯಿತು. ಕೊನೆಗೆ ಸುಮಾರು 11 ಗಂಟೆಯ ಹೊತ್ತಿಗೆ ಉಷ್ಣತೆಯು 46.67 ಡಿಗ್ರಿ ಸೆಲ್ಷಿಯಸ್ ತಲುಪಿದಾಗ ಗಾಯಗೊಂಡವರ ಸಂಖ್ಯೆಯು 320 ಕ್ಕೆ ಏರಿತು ಮತ್ತು ಇಬ್ಬರು ಹೋರಾಟಗಾರರು ಮೃತರಾದರು. ಅಮೇರಿಕಾ ಪತ್ರಕರ್ತ ಮತ್ತು ಘಟನೆಯ ಪ್ರತ್ಯಕ್ಷದರ್ಶಿಯಾದ ವೆಬ್ ಮಿಲ್ಲರ್ ಹೀಗೆ ದಾಖಲಿಸಿದನು. "ಹದಿನೆಂಟು ವರ್ಷಗಳಲ್ಲಿ ಇಪ್ಪತ್ತು ದೇಶಗಳಲ್ಲಾಗಿ ಪತ್ರಕರ್ತನಾಗಿ ದುಡಿದ ನಾನು ಅನೇಕ ಜನಪರ ಹೋರಾಟಗಳನ್ನೂ ದಂಗೆಗಳನ್ನೂ ಬೀದಿ ಕಾಳಗಗಳನ್ನೂ ನೋಡಿರುವೆನು. ಆದರೆ ಧರಾಸನದಲ್ಲಿ ನೋಡಿದಂತಹ ಘಟನೆಯನ್ನು ನಾನೆಲ್ಲಿಯೂ ಕಾಣಲಿಲ್ಲ"



ಸರೋಜಿನಿ ನಾಯ್ಡು ಗಾಂಧೀಜಿಯವರೊಂದಿಗೆ

*Source:* Bipan Chandra et-al, *India's Struggle for Independence,*

*(ಕಾನೂನು ಉಲ್ಲಂಘನಾ ಹೋರಾಟದ ಕಾಲದಲ್ಲಿ ಸರೋಜಿನಿ ನಾಯ್ಡು, ಇಮಾಂ ಸಾಹೇಬ್ ಎಂಬಿವರ ನೇತೃತ್ವದಲ್ಲಿ ಗುಜರಾತಿನ ಧರಾಸನ ಉಪ್ಪು ತಯಾರಿ ಕೇಂದ್ರದಲ್ಲಿ ನಡೆದ ಹೋರಾಟದ ವಿವರಣೆ)*

ನಾವು ಈ ಮೊದಲು ಚರ್ಚಿಸಿದ ಅಸಹಕಾರ ಚಳುವಳಿಗಿಂತ ಹೆಚ್ಚು ಜನರ ಪಾಲ್ಗೊಳ್ಳುವಿಕೆಯು ಕಾನೂನುಲ್ಲಂಘನಾ ಚಳುವಳಿಯಲ್ಲಿ ಕಂಡುಬಂತು. ಅಸಹಕಾರದೊಂದಿಗೆ ಕಾನೂನನ್ನು ಉಲ್ಲಂಘಿಸುವ ಮೂಲಕ ಹೋರಾಟವು ಮುಂದುವರಿಯಿತು.



ಗಾಂಧೀಜಿಯೊಂದಿಗೆ ಖಾನ್ ಅಬ್ದುಲ್ ಗಫರ್ ಖಾನ್

ವಾಯುವ್ಯ ಭಾರತವು ಕಾನೂನು ಉಲ್ಲಂಘನಾ ಹೋರಾಟದ ಪ್ರಮುಖ ಕೇಂದ್ರಗಳಲ್ಲಿ ಒಂದಾಗಿತ್ತು. ಖಾನ್ ಅಬ್ದುಲ್ ಗಫರ್ ಖಾನ್ ಅಲ್ಲಿನ ಹೋರಾಟಗಳಿಗೆ ನೇತೃತ್ವವನ್ನು ನೀಡಿದರು. 'ಗಡಿನಾಡ ಗಾಂಧಿ' ಎಂದು ಪ್ರಸಿದ್ಧರಾದ ಅವರ ಕೈಕೆಳಗೆ "ಖುದಾಯಿ ಖಿದ್‌ಮತ್‌ಗರ್" ಎಂಬ ಸ್ವಯಂಸೇವಾ ಸಂಘಟನೆಯೊಂದು ಕಾರ್ಯನಿರ್ವಹಿಸುತ್ತಿತ್ತು. ಈ ಹೋರಾಟದಲ್ಲಿ ವಿವಿಧ ಜನ ವಿಭಾಗಗಳ ಪಾಲ್ಗೊಳ್ಳುವಿಕೆಯು ಹೇಗಿತ್ತೆಂದು ನೋಡೋಣ.

| | |
|---|---|
| **ಕೃಷಿಕರು** | ಸರಕಾರಕ್ಕೆ ತೆರಿಗೆ ನೀಡದೆ, ಜಮೀನ್ದಾರರಿಗೆ ಗೇಣಿ ನೀಡದೆ ಹೋರಾಟದಲ್ಲಿ ಭಾಗವಹಿಸಿದರು. |
| **ಕಾರ್ಮಿಕರು** | ರೈಲ್ವೇ, ಬಂದರು, ಗಣಿಗಳಲ್ಲಿ ದುಡಿಯುವ ಕಾರ್ಮಿಕರು ಹೋರಾಟದಲ್ಲಿ ಭಾಗಿಯಾದರು. ಸೋಲಾಪುರದಲ್ಲಿ (ಮಹಾರಾಷ್ಟ್ರ) ಕಾರ್ಮಿಕರು ನಡೆಸಿದ ಹೋರಾಟವು ಹಿಂಸಾತ್ಮಕವಾಯಿತು. |
| **ಬುಡಕಟ್ಟು ವಿಭಾಗ** | ಅರಣ್ಯ ನಿಯಮಗಳನ್ನು ಉಲ್ಲಂಘಿಸಿ ಅರಣ್ಯದೊಳಗೆ ಪ್ರವೇಶಿಸಿದರು, ವನಸಂಪನ್ಮೂಲಗಳನ್ನು ಸಂಗ್ರಹಿಸಿದರು. |
| **ಮಹಿಳೆಯರು** | ಉಪ್ಪು ತಯಾರಿ, ವಿದೇಶೀ ವಸ್ತುಗಳನ್ನು ಮಾರಾಟ ಮಾಡುವ ಅಂಗಡಿಗಳೆದುರು ಪಿಕೆಟಿಂಗ್ ಮೊದಲಾದ ಹೋರಾಟಗಳಲ್ಲಿ ಸಕ್ರೀಯವಾಗಿ ಭಾಗವಹಿಸಿದರು. |
| **ವ್ಯಾಪಾರಿಗಳು ಮತ್ತು ಉದ್ದಿಮೆದಾರರು** | ಆಮದು ಮಾಡಿದ ವಸ್ತುಗಳನ್ನು ಖರೀದಿಸಲೂ ಮಾರಾಟ ಮಾಡಲೂ ನಿರಾಕರಿಸಿದರು. |

## ರಾಣಿ ಗೈಡಿನ್‌ಲಿಯು



ರಾಣಿ ಗೈಡಿನ್‌ಲಿಯು

ರಾಣಿ ಗೈಡಿನ್‌ಲಿಯು ಕಾನೂನು ಉಲ್ಲಂಘನಾ ಹೋರಾಟ ಕಾಲದಲ್ಲಿ ಈಶಾನ್ಯ ಭಾರತದ ಧೀರೆಯಾದ ಮಹಿಳಾ ಹೋರಾಟಗಾರ್ತಿಯಾಗಿದ್ದಳು. ಕಾನೂನು ಉಲ್ಲಂಘನಾ ಹೋರಾಟ ಕಾಲದಲ್ಲಿ ಸೆರೆಹಿಡಿಯಲ್ಪಟ್ಟ ಅವರು ತಮ್ಮ ಯೌವ್ವನ ಕಾಲವನ್ನು ಜೈಲಿನಲ್ಲಿ ಕಳೆದರು. ಅವರನ್ನು ಜೈಲಿನಲ್ಲಿ ಭೇಟಿಮಾಡಿದ ಜವಾಹರ್‌ಲಾಲ್ ನೆಹರು ಹೀಗೆ ಬರೆದರು, 'ಭಾರತವು ಅವರನ್ನು ಸ್ಮರಿಸುವ ಮತ್ತು ಗೌರವಿಸುವ ದಿನವೊಂದು ಬರುತ್ತದೆ'. ರಾಣಿ ಗೈಡಿನ್‌ಲಿಯು ಭಾರತವು ಸ್ವಾತಂತ್ರ್ಯವನ್ನು ಪಡೆದ ನಂತರ ಜೈಲಿನಿಂದ ಬಿಡುಗಡೆಯಾದರು.

ಕಾನೂನು ಉಲ್ಲಂಘನಾ ಹೋರಾಟಕಾಲದಲ್ಲಿ ವಿವಿಧ ಜನವಿಭಾಗಗಳ ಭಾಗವಹಿಸುವಿಕೆಯನ್ನು ಸೂಚಿಸುವ ವಾರ್ತಾಪತ್ರಿಕೆಯೊಂದನ್ನು ತಯಾರಿಸಿ ತರಗತಿಯಲ್ಲಿ ಪ್ರದರ್ಶಿಸಿರಿ.

## ಒಪ್ಪಂದ – ಮಾತುಕತೆಗಳು



ಗಾಂಧಿ-ಇರ್ವಿನ್ ಒಪ್ಪಂದ

ಪರಿಮಿತವಾದ ಕೆಲವೊಂದು ಅಧಿಕಾರಗಳನ್ನಾದರೂ ಭಾರತೀಯರಿಗೆ ನೀಡಬೇಕಾದೀತು ಎಂಬ ಅರಿವನ್ನು ಕಾನೂನು ಉಲ್ಲಂಘನಾ ಹೋರಾಟವು ಬ್ರಿಟಿಷ್ ಆಡಳಿತಕ್ಕೆ ಮನವರಿಕೆಯನ್ನುಂಟುಮಾಡಿತು. ಇದಕ್ಕಾಗಿ ಕೆಲವೊಂದು ಸಮಾಲೋಚನೆಗಳು ಲಂಡನಿನಲ್ಲಿ ನಡೆದವು. ಈ ರೀತಿಯ ಸಮಾಲೋಚನೆಗಳನ್ನು ದುಂಡು ಮೇಜಿನ ಪರಿಷತ್ತುಗಳೆಂದು ಕರೆಯುತ್ತಾರೆ. 1930 ರಲ್ಲಿ ನಡೆದ ಮೊದಲ ದುಂಡುಮೇಜಿನ ಪರಿಷತ್ತಿನಲ್ಲಿ ಕಾಂಗ್ರೆಸ್ ಭಾಗವಹಿಸಲಿಲ್ಲ. ಈ ಹಿನ್ನೆಲೆಯಲ್ಲಿ ಕಾನೂನು ಉಲ್ಲಂಘನಾ ಹೋರಾಟವನ್ನು ಕೊನೆಗೊಳಿಸಲು ಮತ್ತು ಎರಡನೆಯ ದುಂಡುಮೇಜಿನ ಪರಿಷತ್ತಿನಲ್ಲಿ ಕಾಂಗ್ರೆಸ್ ಪ್ರತಿನಿಧಿಯನ್ನು ಭಾಗವಹಿಸುವಂತೆ ಮಾಡಲು ಸರಕಾರವು ಪ್ರಯತ್ನವನ್ನಾರಂಭಿಸಿತು. ಗಾಂಧಿ-ಇರ್ವಿನ್ ಒಪ್ಪಂದವು (Gandhi - Irwin Pact) ಇದರ ಭಾಗವಾಗಿ ಸಹಿ ಹಾಕಿದ ಒಪ್ಪಂದವಾಗಿದೆ. 1931 ಮಾರ್ಚ್ 5 ರಂದು ಸಹಿ ಹಾಕಿದ ಈ ಒಪ್ಪಂದದಂತೆ :

- ಕಾನೂನು ಉಲ್ಲಂಘನಾ ಹೋರಾಟವನ್ನು ಕೊನೆಗೊಳಿಸಲಾಯಿತು.
- ಗಾಂಧೀಜಿ ಎರಡನೇ ದುಂಡುಮೇಜಿನ ಪರಿಷತ್ತಿನಲ್ಲಿ ಭಾಗವಹಿಸಿದರು.

ಆದರೆ ಎರಡನೇ ದುಂಡುಮೇಜಿನ ಪರಿಷತ್ತು ಯಾವುದೇ ತೀರ್ಮಾನಗಳಿಲ್ಲದೆ ಕೊನೆಗೊಂಡಿತು ಮತ್ತು ಮೂರನೆಯ ದುಂಡುಮೇಜಿನ ಪರಿಷತ್ತನ್ನು ಕಾಂಗ್ರೆಸ್ ಬಹಿಷ್ಕರಿಸಿತು.

## ಸಶಸ್ತ್ರ ಹೋರಾಟದ ಹಾದಿಯಲ್ಲಿ

ಸ್ವಾತಂತ್ರ್ಯ ಎಂಬ ಗುರಿಯೆಡೆಗೆ ಮುನ್ನಡೆಯಲು ಕಾಂಗ್ರೆಸ್ ಮತ್ತು ಮಹಾತ್ಮಾ ಗಾಂಧೀಜಿಯವರ ನೇತೃತ್ವದಲ್ಲಿ ನಡೆದ ಹೋರಾಟ ವಿಧಾನಗಳ ಜೊತೆಗೆ ಇತರ ಹಲವರು ವಿಭಿನ್ನ ವಿಧಾನಗಳನ್ನು ಅಳವಡಿಸಿಕೊಂಡರು. ಗಾಂಧೀಜಿಯ ಅಹಿಂಸಾ ಮಾರ್ಗದ ಬದಲು ಕೆಲವರು ಕ್ರಾಂತಿಕಾರಿ ಮಾರ್ಗವನ್ನು ಸ್ವೀಕರಿಸಿದರು. ಇವರಲ್ಲಿ ಹೆಚ್ಚಿನವರೂ ಯುವಕರಾಗಿದ್ದರು.

ರಷ್ಯಾದ ಕ್ರಾಂತಿಯ ಯಶಸ್ಸು ಮತ್ತು ಅಸಹಕಾರ ಚಳುವಳಿಯನ್ನು ಅರ್ಧದಲ್ಲೇ ಕೊನೆಗೊಳಿಸಿದ್ದು ಇವರನ್ನು ಕ್ರಾಂತಿಯ ಕಡೆಗೆ ಪ್ರೇರೇಪಿಸಿತು. ಇದರ ಭಾಗವಾಗಿ 1924 ರಲ್ಲಿ 'ಹಿಂದೂಸ್ಥಾನ್ ರಿಪಬ್ಲಿಕನ್ ಅಸೋಸಿಯೇಶನ್' (HRA) ಎಂಬ ಕ್ರಾಂತಿಕಾರಿ ಸಂಘಟನೆಯು ರೂಪುಗೊಂಡಿತು. ಕ್ರಾಂತಿಕಾರಿ ಚಟುವಟಿಕೆಗಳಿಗೆ ಹಣವನ್ನು ಸಂಗ್ರಹಿಸುವ ಉದ್ದೇಶದಿಂದ ಉತ್ತರ ಪ್ರದೇಶದ ಕಾಕೋರಿಯಲ್ಲಿ ರೈಲ್ವೆಯ ಹಣವನ್ನು ದರೋಡೆಗೆಯ್ಯಲು ಪ್ರಯತ್ನವನ್ನು ಮಾಡಿದ ಕ್ರಾಂತಿಕಾರಿಗಳಲ್ಲಿ ಕೆಲವರು ಸೆರೆಹಿಡಿಯಲ್ಪಟ್ಟರು.

## ಕಾಕೋರಿ ಘಟನೆ

ಆಯುಧಗಳನ್ನು ಕೊಂಡುಕೊಳ್ಳಲು ಹಣಕ್ಕಾಗಿ 1925 ಆಗಸ್ಟ್ 9 ರಂದು ಕ್ರಾಂತಿಕಾರಿಗಳು ಉತ್ತರ ಪ್ರದೇಶದ ಲಕ್ನೋದ ಸಮೀಪ ಕಾಕೋರಿಯಲ್ಲಿ 8 ಡೌನ್ ಟ್ರೈನ್ (8 down train) ನ್ನು ತಡೆದು ರೈಲ್ವೆಯ ಹಣವನ್ನು ಲಪಟಾಯಿಸಿದರು. ಈ ಪ್ರಕರಣದಲ್ಲಿ ಅನೇಕರು ಬಂಧಿತರಾದರು. ರಾಂಪ್ರಸಾದ್ ಬಿಸ್ಮಿಲ್, ಅಶ್ಫಾಖುಲ್ಲಾ ಖಾನ್, ರಾಜೇಂದ್ರ ಲಾಹಿರಿ, ರೋಷನ್ ಸಿಂಗ್ ಎಂಬಿವರಿಗೆ ಈ ಕೇಸಿನಲ್ಲಿ ಮರಣದಂಡನೆಯನ್ನು ವಿಧಿಸಿದರು. 4 ಜನರನ್ನು ಅಂಡಮಾನ್ ನಿಕೋಬಾರ್‌ಗೆ ಗಡೀಪಾರು ಮಾಡಿದರು. 17 ಜನರಿಗೆ ಜೈಲು ಶಿಕ್ಷೆಯನ್ನು ವಿಧಿಸಿದರು.

## ಭಗತ್‌ಸಿಂಗ್‌ನ ಆಹ್ವಾನ



ಭಗತ್ ಸಿಂಗ್

1931 ರಲ್ಲಿ ಯುವ ರಾಷ್ಟ್ರೀಯ ಕಾರ್ಯಕರ್ತರಿಗೆ ನೀಡಿದ ಸಂದೇಶದಲ್ಲಿ ಭಗತ್ ಸಿಂಗ್ ಹೀಗೆ ಹೇಳಿದರು. 'ವಾಸ್ತವದಲ್ಲಿ ನಾನೊಬ್ಬ ಭಯೋತ್ಪಾದಕನಂತೆ ಕಾರ್ಯನಿರ್ವಹಿಸಿದ್ದೇನೆ. ಆದರೆ ನಾನು ಭಯೋತ್ಪಾದಕನಲ್ಲ. ನನ್ನೆಲ್ಲಾ ಸಾಮರ್ಥ್ಯಗಳನ್ನು ಒಗ್ಗೂಡಿಸಿಕೊಂಡು ನಾನು ಘೋಷಿಸುತ್ತೇನೆ ನಾನೋರ್ವ ಭಯೋತ್ಪಾದಕನಲ್ಲ. ಆದರೆ ನನ್ನ ರಾಜಕೀಯ ಚಟುವಟಿಕೆಗಳ ಆರಂಭದ ಕೆಲವೊಂದು ದಿನಗಳನ್ನು ಬಿಟ್ಟರೆ, ನಾನು ಆ ರೀತಿಯಲ್ಲಿ ಕಾರ್ಯನಿರ್ವಹಿಸಿಲ್ಲ. ಆ ವಿಧಾನಗಳ ಮೂಲಕ ನಾವೇನನ್ನೂ ಸಾಧಿಸಲಾರೆವು ಎಂದು ನನಗೆ ಖಾತರಿಯಿದೆ'. ಧಾರ್ಮಿಕ ಕೋಮುವಾದವು ರಾಷ್ಟ್ರೀಯ ಚಳುವಳಿ ಮತ್ತು ದೇಶದ ಮೇಲೆ ಬೀರುವ ಅಪಾಯದ ಕುರಿತು ಭಗತ್‌ಸಿಂಗ್ ಗೆ ಅರಿವಿತ್ತು. ವಸಾಹತೀಕರಣದಂತೆಯೇ ಕೋಮು ವಾದವೂ ಅಪಾಯಕಾರಿಯಾಗಿದೆ ಎಂದು ಅವರು ನೆನಪಿಸಿದರು.

ಕಾಕೋರಿ ಘಟನೆಯ ನಂತರ ಹಿನ್ನೆಡೆ ಅನುಭವಿಸಿದ ಕ್ರಾಂತಿಕಾರಿ ಚಟುವಟಿಕೆಗಳು ಭಗತ್ ಸಿಂಗ್ ನ ನೇತೃತ್ವದಲ್ಲಿ ಪುನಃ ಬಲಗೊಂಡಿತು. 1928 ರಲ್ಲಿ ಭಗತ್ ಸಿಂಗ್ ಮತ್ತು ಸಹಚರರು ಹಿಂದುಸ್ತಾನ್ ಸೋಶಿಯಲಿಸ್ಟ್ ರಿಪಬ್ಲಿಕ್ ಅಸೋಸಿಯೇಶನನ್ನು (HSRA) ರೂಪಿಸಿದರು. ಭಗತ್ ಸಿಂಗ್ ನ ನೇತೃತ್ವದಲ್ಲಿ ಕ್ರಾಂತಿಕಾರಿಗಳು ಕೈಗೊಂಡ ಎರಡು ಮುಖ್ಯ ಚಟುವಟಿಕೆಗಳು;

- ಲಾಲಾ ಲಜಪತ್ ರಾಯ್ ರ ಮರಣಕ್ಕೆ ಕಾರಣವಾದ ಲಾಠಿ ಚಾರ್ಜ್‌ನಲ್ಲಿ ಭಾಗಿಯಾಗಿದ್ದ ಸ್ಯಾಂಡರ್‌ಸನ್ ಎಂಬ ಪೋಲೀಸ್ ಅಧಿಕಾರಿಯನ್ನು ಗುಂಡಿಕ್ಕಿ ಕೊಂದರು.
- ಕೇಂದ್ರ ಶಾಸಕಾಂಗ ಸಭೆಗೆ ಬಾಂಬೆಸೆದರು.

ಈ ಕಾರಣದಿಂದ ಬಂಧಿಸಲ್ಪಟ್ಟ ಭಗತ್ ಸಿಂಗ್, ರಾಜ್ ಗುರು, ಸುಖ್ ದೇವ್ ಎಂಬೀ ಧೀರ ಕ್ರಾಂತಿಕಾರಿಗಳನ್ನು ವಿಚಾರಣೆಯ ನಂತರ 1931 ಮಾರ್ಚ್ 23 ರಂದು ಗಲ್ಲಿಗೇರಿಸಲಾಯಿತು.

ಆ ಕಾಲದಲ್ಲಿ ಬಂಗಾಳದಲ್ಲಿ ಕ್ರಾಂತಿಕಾರಿ ಚಟುವಟಿಕೆಗಳು ಸಕ್ರಿಯವಾದವು. ಸೂರ್ಯಸೇನರ ನೇತೃತ್ವದಲ್ಲಿ ಕ್ರಾಂತಿಕಾರಿಗಳು ಚಿತ್ತಗಾಂಗಿನಲ್ಲಿ ಶಸ್ತ್ರಾಗಾರವನ್ನು ಆಕ್ರಮಿಸಿ ಲೂಟಿಗೈದುದು ಆಡಳಿತ ಒಕ್ಕೂಟವನ್ನೂ ಚಕಿತಗೊಳಿಸಿತು. ಕ್ರಾಂತಿಕಾರಿ ಚಳುವಳಿಯಲ್ಲಿ ಮಹಿಳೆಯರ ಭಾಗವಹಿಸುವಿಕೆಯೂ ಗಮನಾರ್ಹವಾಗಿತ್ತು. ಪ್ರೀತಿಲತಾ ವಡೇದಾರ್, ಕಲ್ಪನಾ ದತ್, ಬೀನಾದಾಸ್ ಇವರಲ್ಲಿ ಪ್ರಮುಖ ರಾಗಿದ್ದರು.

## ಕಾಂಗ್ರೆಸ್ ಸೋಶಿಯಲಿಸ್ಟ್ ಪಾರ್ಟಿ (ಸಿ.ಎಸ್.ಪಿ.)

1917 ರ ರಷ್ಯಾದ ಕ್ರಾಂತಿಯ ಯಶಸ್ಸು ಮತ್ತು ಸೋಶಿಯಲಿಸ್ಟ್ ಆಶಯಗಳ ವ್ಯಾಪಿಸುವಿಕೆಯು ಕಾಂಗ್ರೆಸ್ ಸೋಶಿಯಲಿಸ್ಟ್ ಪಾರ್ಟಿಯ ಆವಿರ್ಭಾವಕ್ಕೆ ಕಾರಣವಾಯಿತು. ಕಾಂಗ್ರೆಸ್ ನೊಳಗೆ ಸೋಶಿಯಲಿಸ್ಟ್ ಆಶಯಗಳ ಕಡೆಗೆ ಒಲವನ್ನು ಹೊಂದಿದ್ದವರು ಸಿ.ಎಸ್.ಪಿ.ಯನ್ನು ರೂಪಿಸಿದರು. ಜಯಪ್ರಕಾಶ್ ನಾರಾಯಣ್ ಇದರ ಮೊದಲ ಕಾರ್ಯದರ್ಶಿಯಾಗಿದ್ದರು. ಬಂಡವಾಳಶಾಹಿತ್ವ ಮತ್ತು ಜಮೀನ್ದಾರಿತ್ವಕ್ಕೆದುರಾಗಿ ಸಮಾಜವಾದೀ ಸಮಾಜವನ್ನು ರೂಪಿಸುವುದು ಪಕ್ಷದ ಉದ್ದೇಶವಾಗಿತ್ತು. ಕೃಷಿಕರನ್ನು ಮತ್ತು ಕಾರ್ಮಿಕರನ್ನು ಸಂಘಟಿಸಿ ಅವರ ಸಮಸ್ಯೆಗಳನ್ನು ಚರ್ಚಿಸಲು ಕಾಂಗ್ರೆಸ್ ಸೋಶಿಯಲಿಸ್ಟ್ ಪಾರ್ಟಿಗೆ ಸಾಧ್ಯವಾಯಿತು.

## ಕಮಲಾದೇವಿ ಚಟ್ಟೋಪಾಧ್ಯಾಯ


ಕಮಲಾದೇವಿ ಚಟ್ಟೋಪಾಧ್ಯಾಯ

ಕಾಂಗ್ರೆಸ್ ಸೋಶಿಯಲಿಸ್ಟ್ ಪಾರ್ಟಿ (ಸಿ.ಎಸ್.ಪಿ.)ಯ ರೂಪೀಕರಣದಿಂದ ತೊಡಗಿ ಅದರ ಕಾರ್ಯಚಟುವಟಿಕೆಗಳಲ್ಲಿ ಕಮಲಾದೇವಿ ಚಟ್ಟೋಪಾಧ್ಯಾಯರು ಸಕ್ರಿಯವಾಗಿ ಭಾಗವಹಿಸಿದರು. ಸಿ.ಎಸ್.ಪಿ. ಯ ಅಧ್ಯಕ್ಷೆಯೂ ಆಗಿ ಕಾರ್ಯ ನಿರ್ವಹಿಸಿದ ಅವರು ಕಾನೂನು ಉಲ್ಲಂಘನಾ ಮತ್ತು ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಬಂಧಿಸಲ್ಪಟ್ಟು ಜೈಲುವಾಸವನ್ನು ಅನುಭವಿಸಿದರು.

1944ರಲ್ಲಿ ಮುಂಬೈಯಲ್ಲಿ ನಡೆದ ವನಿತಾ ಸಮ್ಮೇಳನದಲ್ಲಿ ನಡೆಸಿದ ಭಾಷಣದಲ್ಲಿ ಅವರು ಹೀಗೆ ನುಡಿದರು : ಮಹಿಳಾ ಚಳುವಳಿಯ ಉದ್ದೇಶವು, 'ಮಹಿಳೆಯರು ಪುರುಷರ ವಿರುದ್ಧ ಹೋರಾಡುವಂತೆ ಮಾಡುವುದೋ, ಪುರುಷರನ್ನು ಮಹಿಳೆಯರು ಅನುಕರಿಸುವಂತೆ ಮಾಡುವುದೋ ಅಲ್ಲ. ಸ್ವಂತ ಸಾಮರ್ಥ್ಯದ ಕುರಿತು, ಜವಾಬ್ದಾರಿಗಳ ಕುರಿತು ಇತರ ಲಿಂಗ ವಿಭಾಗಗಳೊಂದಿಗೆ ಮಹಿಳೆಯರಲ್ಲಿ ಜಾಗೃತಿಯನ್ನುಂಟುಮಾಡುವುದು, ಗೌರವವನ್ನು ಬೆಳೆಸುವುದು ಎಂಬಿವುಗಳು ಅದರ ಗುರಿಗಳಾಗಿವೆ'.

*Source:* Ramachandra Guha, *Makers of Modern India,*

## ಕೃಷಿಕ ಚಳುವಳಿ

ಸ್ವಾತಂತ್ರ್ಯ ಹೋರಾಟವನ್ನು ಬಲಗೊಳಿಸಲು ಕೃಷಿಕರ ಪಾಲ್ಗೊಳ್ಳುವಿಕೆಯು ಅನಿವಾರ್ಯವೆಂದು ಗಾಂಧೀಜಿಯವರನ್ನು ಒಳಗೊಂಡ ನೇತಾರರು ತಿಳಿದುಕೊಂಡಿದ್ದರು. ಕೃಷಿಕರು ಆ ಕಾಲದಲ್ಲಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದರು. ಕೆಳಗಿನವುಗಳು ಅವುಗಳಲ್ಲಿ ಪ್ರಮುಖವಾದವುಗಳಾಗಿವೆ.

- ಅಮಿತವಾದ ತೆರಿಗೆ
- ಜಮೀನ್ದಾರರ ಶೋಷಣೆ
- ಒಕ್ಕಲೆಬ್ಬಿಸುವುದು

1920 ರ ವೇಳೆಗೆ 'ಕಿಸಾನ್ ಸಭೆ'ಗಳನ್ನು ರೂಪಿಸುವ ಮೂಲಕ ಕೃಷಿಕರು ಸಂಘಟಿತರಾದರು. ಆ ಕಾಲದಲ್ಲಿ ಉತ್ತರ ಪ್ರದೇಶದ ಅವಧ್‌ನಲ್ಲಿ ನಡೆದ ಕೃಷಿ ಚಳುವಳಿಯನ್ನು 'ಐಕ್ಯಚಳುವಳಿ' ಎಂದು ಕರೆಯುತ್ತಾರೆ. 1936 ರಲ್ಲಿ 'ಅಖಿಲ ಭಾರತ ಕಿಸಾನ್ ಸಭೆ'ಯ ರೂಪೀಕರಣವು ಕೃಷಿಕ ಚಳುವಳಿಗಳ ಚರಿತ್ರೆಯ ಮೈಲುಗಲ್ಲಾಗಿದೆ. 1940 ರ ದಶಕದಲ್ಲಿ ನಡೆದ ಕೃಷಿಕರ ಚಳವಳಿಗಳು ಸ್ವಾತಂತ್ರ್ಯ ಎಂಬ ಉದ್ದೇಶದೆಡೆಗೆ ತಲುಪಲು ಸಹಾಯ ಮಾಡಿದ ಪ್ರಮುಖ ಘಟಕಗಳಾಗಿವೆ. ಬಂಗಾಳದ ತೇಭಾಗ ಹೋರಾಟ, ಆಂಧ್ರದ ತೆಲಂಗಾಣ ಹೋರಾಟವು ನಂತರದ ಕಾಲಗಳಲ್ಲಿ ನಡೆದ ಪ್ರಧಾನ ಕೃಷಿ ಚಳುವಳಿಗಳಾಗಿದ್ದವು.

### 'ತೇಭಾಗ ಚಾಯ್'

1946-47 ರಲ್ಲಿ ಅಖಿಲಭಾರತ ಕಿಸಾನ್ ಸಭೆಯ ನೇತೃತ್ವದಲ್ಲಿ ತೇಭಾಗ ಹೋರಾಟವು ನಡೆಯಿತು. ಭೂಮಾಲೀಕರಾದ ಜೋತ್ತೇದಾರರ ವಿರುದ್ಧ ಕೃಷಿಕರು ಹೋರಾಟವನ್ನು ನಡೆಸಿದರು. ಕೊಯ್ಲನ್ನು ಎರಡಾಗಿ ವಿಭಜಿಸಿ ಒಂದು ಭಾಗವನ್ನು ಜೋತ್ತೇದಾರರಿಗೆ ನೀಡುವುದು ವಾಡಿಕೆಯಾಗಿತ್ತು. ಕೊಯ್ಲನ್ನು ಮೂರಾಗಿ ವಿಭಜಿಸಿ ಅದರಲ್ಲಿ ಎರಡು ಭಾಗವನ್ನು ನಮಗೆ ನೀಡಬೇಕೆಂಬ (We want two third share) ಬೇಡಿಕೆಯೊಂದಿಗೆ ಕೃಷಿಕರು ನಡೆಸಿದ ಚಳುವಳಿಯ ಘೋಷಣೆಯು ತೇಭಾಗ ಚಾಯ್ ಆಗಿದೆ.

## ಕಾರ್ಮಿಕರು ಸಂಘಟಿತರಾಗುತ್ತಿದ್ದಾರೆ

ಆಧುನಿಕ ಕಾರ್ಖಾನೆಗಳ ಆವಿರ್ಭಾವದೊಂದಿಗೆ, ಆಧುನಿಕ ಕಾರ್ಮಿಕ ವರ್ಗವೊಂದು ಭಾರತದಲ್ಲಿ ರೂಪುಗೊಂಡಿತು. ಈ ಕೆಳಗಿನವುಗಳು ಕಾರ್ಮಿಕರ ಪ್ರಮುಖ ಸಮಸ್ಯೆಗಳಾಗಿದ್ದುವು;

### ನಾವಿಕ ದಂಗೆ

ರಾಯಲ್ ಇಂಡಿಯನ್ ನೇವಿಯು ಬ್ರಿಟಿಷ್ ಭಾರತದ ನಾವಿಕ ಸೈನ್ಯವಾಗಿತ್ತು. 1946 ಫೆಬ್ರವರಿಯಲ್ಲಿ ರಾಯಲ್ ಇಂಡಿಯನ್ ನೇವಿಯ ನಾವಿಕರು ಬ್ರಿಟಿಷರ ಆಡಳಿತಕ್ಕೆ ವಿರುದ್ಧವಾಗಿ ದಂಗೆಯೆದ್ದರು. 1946 ಫೆಬ್ರವರಿ 18 ರಂದು ಮುಂಬಯಿಯಲ್ಲಿ 'ತಲ್‌ವಾರ್' ಎಂಬ ಹಡಗಿನಲ್ಲಿ ಆರಂಭವಾದ ದಂಗೆಯನ್ನು ಆರ್.ಐ.ಎನ್. ದಂಗೆ ಎಂದು ಕರೆಯುತ್ತಾರೆ. ದಂಗೆಗಾರರು ಬ್ರಿಟಿಷ್ ಧ್ವಜಗಳನ್ನು ಕೆಳಗಿಳಿಸಿ, ಅದರ ಬದಲಿಗೆ ಕಾಂಗ್ರೆಸ್, ಕಮ್ಯೂನಿಸ್ಟ್ ಮತ್ತು ಮುಸ್ಲಿಂ ಲೀಗ್ ಪಕ್ಷಗಳ ಧ್ವಜಗಳನ್ನು ಏರಿಸಿದರು. ಇತರ ನಾವಿಕ ಕೇಂದ್ರಗಳಿಗೂ ವ್ಯಾಪಿಸಿದ ದಂಗೆಯನ್ನು ಸೈನಿಕ ಬಲದಿಂದ ದಮನಿಸಿದರು.

- ಕಡಿಮೆ ಕೂಲಿ
- ಅಧಿಕ ಕೆಲಸದ ಸಮಯ
- ಮಹಿಳೆಯರು ಮತ್ತು ಬಾಲಕಾರ್ಮಿಕರ ಮೇಲಿನ ಶೋಷಣೆ ಮೊದಲಾದವುಗಳು

ಎ.ಐ.ಟಿ.ಯು.ಸಿ. (All India Trade Union Congress) ಯು ರಾಷ್ಟ್ರೀಯ ಮಟ್ಟದಲ್ಲಿ ರೂಪುಗೊಂಡ ಭಾರತದ ಮೊದಲ ಕಾರ್ಮಿಕ ಸಂಘಟನೆಯಾಗಿತ್ತು. ಎರಡನೆಯ ಜಾಗತಿಕ ಯುದ್ಧದ ನಂತರ ನಡೆದ ರೈಲ್ವೇ, ಟೆಲಿಗ್ರಾಫ್ ಕಾರ್ಮಿಕರ ಮುಷ್ಕರವು ಭಾರತವನ್ನು ಅಲ್ಲೋಲ ಕಲ್ಲೋಲಗೊಳಿಸಿತು. 1946ರಲ್ಲಿ 'ರೋಯಲ್ ಇಂಡಿಯನ್ ನೇವಿ' (RIN) ಯ ದಂಗೆಗೆ ಬೆಂಬಲ ಸೂಚಿಸಿ ಮುಂಬೈಯಲ್ಲಿ ಕಾರ್ಮಿಕರು ನಡೆಸಿದ ಮುಷ್ಕರವು ಹಿಂಸಾತ್ಮಕ ಸಂಘರ್ಷದೊಂದಿಗೆ ಕೊನೆಗೊಂಡಿತು.

ಬ್ರಿಟಿಷರ ಆಡಳಿತ ಕಾಲದಲ್ಲಿ ಭಾರತದ ಕೃಷಿಕರು ಮತ್ತು ಕಾರ್ಮಿಕರು ಎದುರಿಸಿದ ಸಮಸ್ಯೆಗಳು, ಅದಕ್ಕೆದುರಾಗಿ ಅವರು ನಡೆಸಿದ ಹೋರಾಟಗಳು, ಪ್ರತಿಭಟನೆಗಳನ್ನು ಒಳಗೊಂಡಿರುವ ಡಿಜಿಟಲ್ ಪ್ರಸೆಂಟೇಷನ್ ತಯಾರಿಸಿ ತರಗತಿಯಲ್ಲಿ ಮಂಡಿಸಿರಿ.

## ಬ್ರಿಟಿಷರೇ ಭಾರತ ಬಿಟ್ಟು ತೊಲಗಿರಿ

ದ್ವಿತೀಯ ಜಾಗತಿಕ ಯುದ್ಧವು ಕೊನೆಗೊಳ್ಳುವುದರೊಂದಿಗೆ ಭಾರತದ ಬೆಂಬಲವು ಬ್ರಿಟನಿಗೆ ಅನಿವಾರ್ಯವಾಯಿತು. ಇದಕ್ಕಾಗಿ ಸರ್ ಸ್ಟಫೋರ್ಡ್ ಕ್ರಿಪ್ಸ್ ಭಾರತವನ್ನು ತಲುಪಿದನು. ಆದರೆ ಭಾರತದ ನೇತಾರರನ್ನು ಚರ್ಚೆಯ ಮೂಲಕ ಸಮಾಧಾನ ಪಡಿಸುವಲ್ಲಿ ಸ್ಟಫೋರ್ಡ್ ಕ್ರಿಪ್ಸ್ ಪರಾಜಯಗೊಂಡನು. ಇದು ಗಾಂಧೀಜಿಯ ನೇತೃತ್ವದ ಕೊನೆಯ ಸಾರ್ವಜನಿಕ ಹೋರಾಟದ ಆರಂಭಕ್ಕೆ ಕಾರಣವಾಯಿತು.

*"ಇದೋ ಒಂದು ಮಂತ್ರ, ಒಂದು ಕಿರು ಮಂತ್ರ, ನಾನು ನಿಮಗೆ ನೀಡುವೆನು. ಅದನ್ನು ನೀವು ನಿಮ್ಮ ಹೃದಯದಲ್ಲಿ ತುಂಬಿಕೊಳ್ಳಬೇಕು. ಪ್ರತಿಯೊಂದು ಉಸಿರಿನಲ್ಲಿಯೂ ಅದನ್ನು ಆವರ್ತಿಸಬೇಕು. 'ಮಾಡು ಅಥವಾ ಮಡಿ' **(Do or Die)** ಎಂಬುದೇ ಆ ಮಂತ್ರ. ನಾವು ಒಂದೋ ಭಾರತವನ್ನು ಸ್ವತಂತ್ರಗೊಳಿಸುವೆವು ಅಥವಾ ಆ ಪ್ರಯತ್ನದಲ್ಲಿ ಸಾವನ್ನಪ್ಪುವೆವು. ಶಾಶ್ವತ ಗುಲಾಮತನವನ್ನು ನೋಡಲು ನಾವು ಜೀವಂತವಾಗಿ ಬಾಕಿ ಇರುವುದಿಲ್ಲ."*

ಇದು ಗಾಂಧೀಜಿಯು 1942 ಆಗಸ್ಟ್ 8 ರಂದು ಮುಂಬೈಯಲ್ಲಿ ನಡೆದ ಸಾರ್ವಜನಿಕ ಸಮ್ಮೇಳನವನ್ನು ಉದ್ದೇಶಿಸಿ ಮಾಡಿದ ಭಾಷಣದ ಆಯ್ದ ಭಾಗವಾಗಿದೆ. ಇದರೊಂದಿಗೆ ಕ್ವಿಟ್ ಇಂಡಿಯಾ ಹೋರಾಟವು ಆರಂಭಗೊಂಡಿತು. ಗಾಂಧೀಜಿ ಒಳಗೊಂಡಂತೆ ಹಲವು ನೇತಾರರು ಬಂಧನಕ್ಕೊಳಗಾದರೂ ಚಳುವಳಿಯು ದೇಶದಾದ್ಯಂತ ವ್ಯಾಪಿಸಿತು.

- ವಿದ್ಯಾರ್ಥಿಗಳು, ಯುವಕರು, ಕಾರ್ಮಿಕರು, ಮಹಿಳೆಯರು, ಹೋರಾಟವನ್ನು ಕೈಗೆತ್ತಿಕೊಂಡು ಮುನ್ನಡೆಸಿದರು.
- ಅಂಚೆ-ತಂತಿ ಕಚೇರಿಗಳು, ರೈಲು ನಿಲ್ದಾಣಗಳು ಆಕ್ರಮಿಸಲ್ಪಟ್ಟವು.
- ಜಯಪ್ರಕಾಶ್ ನಾರಾಯಣ್, ರಾಮ್ ಮನೋಹರ್ ಲೋಹಿಯಾ, ಅರುಣಾ ಅಸಫ್ ಅಲಿ, ಸುಚೇತ ಕೃಪಲಾನಿ ಮುಂತಾದವರು ಭೂಗತರಾಗಿದ್ದುಕೊಂಡು ಹೋರಾಟವನ್ನು ಮುನ್ನಡೆಸಿದರು. ಬೋಂಬೆ ನಗರದಿಂದ ರಹಸ್ಯವಾಗಿ ಪ್ರಸಾರವಾದ ಕಾಂಗ್ರೆಸ್ ರೇಡಿಯೋ ಮೂಲಕ ನೇತಾರರು ಹೋರಾಟಗಾರರೊಂದಿಗೆ ಸಮಾಲೋಚಿಸಿದ್ದರು.


ಕ್ವಿಟ್ ಇಂಡಿಯಾ ಹೋರಾಟ ಕಾಲದಲ್ಲಿ ಬೊಂಬಾಯಿಯಲ್ಲಿ (ಇಂದಿನ ಮುಂಬೈ) ನಡೆದ ಮಹಿಳೆಯರ ಮೆರವಣಿಗೆ

ಹಲವೆಡೆಗಳಲ್ಲಿ ಹೋರಾಟವು ಹಿಂಸಾತ್ಮಕ ರೂಪವನ್ನು ತಾಳಿದರೂ ಗಾಂಧೀಜಿ ಆ ಬಗ್ಗೆ ಖೇದ ವ್ಯಕ್ತಪಡಿಸಲು ತಯಾರಾಗಲಿಲ್ಲ. ಆಡಳಿತ ಒಕ್ಕೂಟದ ಹಿಂಸಾಚಾರವೇ ಜನರನ್ನು ಪ್ರಚೋದಿಸಿತು ಎಂಬುದು ಗಾಂಧೀಜಿಯ ನಿಲುವಾಗಿತ್ತು. ಹಿಂಸಾಚಾರವನ್ನು ಖಂಡಿಸಬೇಕೆಂಬ ಸರಕಾರದ ಒತ್ತಡಕ್ಕೆ ಮಣಿಯದ ಗಾಂಧೀಜಿ ಜೈಲಿನಲ್ಲಿ 21 ದಿವಸಗಳ ನಿರಾಹಾರ ಹೋರಾಟವನ್ನು ಘೋಷಿಸಿದರು. ಗಾಂಧೀಜಿಯನ್ನು ಜೈಲಿನಿಂದ ಬಿಡುಗಡೆಗೊಳಿಸಬೇಕೆಂದು ಅಂತಾರಾಷ್ಟ್ರೀಯ ಮಾಧ್ಯಮಗಳು ಒತ್ತಡ ಹೇರಿದವು. ಆದರೆ ಎಲ್ಲವನ್ನೂ ಮೀರಿ ನಿಂತ ಗಾಂಧೀಜಿ ನಿರಾಹಾರ ಸತ್ಯಾಗ್ರಹವನ್ನು ಪೂರ್ತಿಗೊಳಿಸಿದರು.

ಕ್ವಿಟ್ ಇಂಡಿಯಾ ಹೋರಾಟದ ಕಾಲದಲ್ಲಿ ಕೆಲವೊಂದು ಪ್ರದೇಶಗಳು ಬ್ರಿಟಿಷ್ ಅಧಿಕಾರಿಗಳ ನಿಯಂತ್ರಣದಿಂದ ಬಿಡುಗಡೆಗೊಂಡವು. ಅಲ್ಲಿ ತಾತ್ಕಾಲಿಕ ಆಡಳಿತ ಒಕ್ಕೂಟಗಳು ಸ್ಥಾಪಿಸಲ್ಪಟ್ಟವು.

**ಬಲ್ಲಿಯಾ**

“ಉತ್ತರ ಪ್ರದೇಶದ ಬಲ್ಲಿಯಾದಲ್ಲಿ ಚಿಟ್ಟು ಪಾಂಡೆಯ ನೇತೃತ್ವದಲ್ಲಿ ಸಮಾಂತರ ಆಡಳಿತವು ಸ್ಥಾಪನೆಗೊಂಡಿತು.”

**ಸತಾರ**

“ಮಹಾರಾಷ್ಟ್ರದ ಸತಾರದಲ್ಲಿ ನಾನಾ ಪಾಟೀಲರ ನೇತೃತ್ವದಲ್ಲಿ ಸ್ಥಾಪನೆಯಾದ ಆಡಳಿತ ಒಕ್ಕೂಟವು 1945 ರ ವರೆಗೆ ಅಸ್ತಿತ್ವದಲ್ಲಿತ್ತು.”

**ತಾಂಲೂಕ್**

“ಬಂಗಾಳದ ತಾಂಲೂಕ್‌ನಲ್ಲಿ ಸ್ಥಾಪನೆಯಾದ ಆಡಳಿತ ಒಕ್ಕೂಟವು ಒಂದು ವರ್ಷದ ವರೆಗೆ ಮುಂದುವರಿಯಿತು. ವಿದ್ಯಾಲಯಗಳಿಗೆ ಸಹಾಯ, ನ್ಯಾಯಾಲಯದ ಸ್ಥಾಪನೆ, ಮಿಗತೆಯಾದ ಧಾನ್ಯಗಳನ್ನು ಬಡವರಿಗೆ ಹಂಚುವ ಮೂಲಕ ಆಡಳಿತ ಒಕ್ಕೂಟವು ಉತ್ತಮ ಚಟುವಟಿಕೆಗಳನ್ನು ಮಾಡಿತು.”

ಸ್ವಾತಂತ್ರ್ಯವನ್ನು ಪ್ರಮುಖ ಗುರಿಯಾಗಿ ಬದಲಾಯಿಸಿದುದು ಕ್ವಿಟ್ ಇಂಡಿಯಾ ಹೋರಾಟದ ಪ್ರಾಮುಖ್ಯತೆಯಾಗಿದೆ. ಅಧಿಕಾರ ಹಸ್ತಾಂತರವು ಅನಿವಾರ್ಯವಾಯಿತು. ನಂತರದ ಘಟನೆಗಳು ಈ ಆಶಯಕ್ಕೆ ಒತ್ತುಕೊಟ್ಟವು.

ಕ್ವಿಟ್ ಇಂಡಿಯಾ ಹೋರಾಟವು ಹಿಂದಿನ ಹೋರಾಟಗಳಿಗಿಂತ ಹೇಗೆ ಭಿನ್ನವಾಗಿದೆ ಎಂದು ಚರ್ಚಿಸಿ ಟಿಪ್ಪಣಿ ತಯಾರಿಸಿರಿ.

## 'ದಿಲ್ಲಿ ಚಲೋ'

> "ಭಾರತದ ಸ್ವಾತಂತ್ರ್ಯಕ್ಕಿರುವ ಕೊನೆಯ ಯುದ್ಧವು ಆರಂಭಗೊಂಡಿದೆ..... ರಾಷ್ಟ್ರಪಿತರೇ, ಭಾರತದ ವಿಮೋಚನೆಗಾಗಿರುವ ಈ ಪವಿತ್ರ ಯುದ್ಧದಲ್ಲಿ ನಾವು ನಿಮ್ಮ ಅನುಗ್ರಹವನ್ನು ಯಾಚಿಸುತ್ತಿದ್ದೇವೆ."

1944 ಜುಲೈ 6 ರಂದು "ಅಜಾದ್ ಹಿಂದ್" ರೇಡಿಯೋದ ಮೂಲಕ ಸುಭಾಷ್ ಚಂದ್ರ ಬೋಸರು ಗಾಂಧೀಜಿಯನ್ನು ಉದ್ದೇಶಿಸಿ ನಡೆಸಿದ ಭಾಷಣದ ಭಾಗಗಳನ್ನು ಮೇಲೆ ನೀಡಲಾಗಿದೆ. ಸುಭಾಷ್ ಚಂದ್ರ ಬೋಸರು ಭಾರತದ ಸ್ವಾತಂತ್ರ್ಯಕ್ಕಾಗಿ ತೀರಾ ಭಿನ್ನವಾದ ಹಾದಿಯನ್ನು ಆಯ್ಕೆ ಮಾಡಿದ ನೇತಾರರಾಗಿದ್ದಾರೆ. ಎರಡು ಬಾರಿ ಕಾಂಗ್ರೆಸ್‌ನ ಅಧ್ಯಕ್ಷರಾದ ಸುಭಾಷ್ ಚಂದ್ರ ಬೋಸರು ಗಾಂಧೀಜಿಯೊಂದಿಗಿನ ಭಿನ್ನಾಭಿಪ್ರಾಯದಿಂದಾಗಿ ಕಾಂಗ್ರೆಸ್‌ಗೆ ರಾಜೀನಾಮೆಯನ್ನಿತ್ತು 'ಫಾರ್ವರ್ಡ್ ಬ್ಲಾಕ್' ಎಂಬ ಪಕ್ಷವನ್ನು ರೂಪಿಸಿದರು.

### ಇಂಡಿಯನ್ ನ್ಯಾಶನಲ್ ಆರ್ಮಿ (INA)


ಸುಭಾಷ್ ಚಂದ್ರಬೋಸ್ ಮತ್ತು ಕ್ಯಾಪ್ಟನ್ ಲಕ್ಷ್ಮಿ

ಬ್ರಿಟಿಷ್ ಭಾರತದ ಸೈನ್ಯದಲ್ಲಿ ಅಧಿಕಾರಿಯಾಗಿದ್ದ ಮೋಹನ್ ಸಿಂಗ್ ಇಂಡಿಯನ್ ನ್ಯಾಶನಲ್ ಆರ್ಮಿಯ ರೂಪೀಕರಣಕ್ಕೆ ನೇತೃತ್ವವನ್ನು ವಹಿಸಿದರು. ನಂತರ ಸುಭಾಷ್ ಚಂದ್ರ ಬೋಸರು ಐ.ಎನ್.ಎ. ಯ ನೇತೃತ್ವವನ್ನು ವಹಿಸಿದರು. ಐ.ಎನ್.ಎ. ಯ ಕಾರ್ಯಚಟುವಟಿಕೆಗಳಲ್ಲಿ ಮಹಿಳೆಯರ ಪಾಲು ಹಿರಿದಾಗಿತ್ತು.

'ರಾಣಿ ಝಾನ್ಸಿ ರೆಜಿಮೆಂಟ್' ಎಂಬ ಹೆಸರಿನಲ್ಲಿ ಮಹಿಳಾ ವಿಭಾಗವೂ ಅಸ್ತಿತ್ವದಲ್ಲಿತ್ತು. ಇದಕ್ಕೆ ಮಲಯಾಳಿಯಾಗಿದ್ದ ಕ್ಯಾಪ್ಟನ್ ಲಕ್ಷ್ಮೀ ಸಹಗಲ್ ನೇತೃತ್ವವನ್ನು ನೀಡಿದ್ದರು. ವಕ್ಕಂ ಅಬ್ದುಲ್ ಖಾದರ್ ಐ.ಎನ್.ಎ. ಯಲ್ಲಿದ್ದ ಇನ್ನೋರ್ವ ಮಲಯಾಳಿಯಾಗಿದ್ದರು. ಅವರನ್ನು ಬ್ರಿಟಿಷರು ಬಂಧಿಸಿ ಗಲ್ಲಿಗೇರಿಸಿದರು.

ದ್ವಿತೀಯ ಜಾಗತಿಕ ಯುದ್ಧದ ವೇಳೆ ಸಿಂಗಾಪುರಕ್ಕೆ ತಲುಪಿದ ಸುಭಾಷ್ ಚಂದ್ರ ಬೋಸರು ಇಂಡಿಯನ್ ನೇಶನಲ್ ಆರ್ಮಿ (ಐ.ಎನ್.ಎ.)ಯ ನೇತೃತ್ವವನ್ನು ವಹಿಸಿದರು. ಐ.ಎನ್.ಎ.ಯನ್ನು ಪುನಃ ಸಂಘಟಿಸಿದ ಅವರು ಜಪಾನಿನ ಸೈನ್ಯದೊಂದಿಗೆ ಭಾರತಕ್ಕೆ ದಂಡೆತ್ತಿ ಬಂದರು. ಆದರೆ ಬ್ರಿಟಿಷ್ ಸೈನ್ಯದ ಪ್ರಬಲ ಪ್ರತಿರೋಧವನ್ನು ಎದುರಿಸಲು ಅವರ ಪ್ರಯತ್ನಗಳಿಗೆ ಸಾಧ್ಯವಾಗಲಿಲ್ಲ.

ತನ್ನ ಗುರಿಗಳನ್ನು ಸಾಧಿಸುವಲ್ಲಿ ಅದು ಹೆಚ್ಚು ಯಶಸ್ವಿಯಾಗದಿದ್ದರೂ ಸ್ವಾತಂತ್ರ್ಯ ಹೋರಾಟದ ಅಂತಿಮ ಹಂತದಲ್ಲಿ ಜನರಲ್ಲಿ ಸ್ವಾತಂತ್ರ್ಯದ ಆವೇಶವನ್ನು ಹುಟ್ಟುಹಾಕಲು ಐ.ಎನ್.ಎ.ಗೆ ಸಾಧ್ಯವಾಯಿತು. ದ್ವಿತೀಯ ಜಾಗತಿಕ ಯುದ್ಧ ಕೊನೆಗೊಂಡ ನಂತರ ಐ.ಎನ್.ಎ. ಸೈನಿಕರನ್ನು ಸೆರೆಹಿಡಿದ ಬ್ರಿಟಿಷರು ಅವರನ್ನು ದೆಹಲಿಯ ಕೆಂಪು ಕೋಟೆಯಲ್ಲಿ ವಿಚಾರಣೆ ನಡೆಸಿದರು. ಕರ್ನಲ್ ಪ್ರೇಂ ಸಹಗಲ್, ಕರ್ನಲ್ ಜಿ.ಎಸ್. ಧಿಲ್ಲನ್, ಶಾನವಾಸ್‌ಖಾನ್ ಮೊದಲಾದವರನ್ನು

ವಿಚಾರಣೆ ಮಾಡುವುದರ ವಿರುದ್ಧ ಪ್ರಬಲ ಪ್ರತಿಭಟನೆಗಳಿಗೆ ದೇಶವು ಸಾಕ್ಷಿಯಾಯಿತು. ಜವಾಹರ್‌ಲಾಲ್ ನೆಹರು ಸೇರಿದಂತೆ ಕಾಂಗ್ರೆಸ್‌ನ ಅನೇಕ ನಾಯಕರು ವಿಚಾರಣೆಯ ಸಮಯದಲ್ಲಿ ನ್ಯಾಯಾಲಯಕ್ಕೆ ಆಗಮಿಸಿದರು. 'ದೇಶದ್ರೋಹಿಗಳಲ್ಲ, ದೇಶಪ್ರೇಮಿಗಳು' ಎಂಬ ಕಿರುಲೇಖನವನ್ನು ಹಂಚಿದರು. ಐ.ಎನ್.ಎ. ಸೈನಿಕರ ವಿಚಾರಣೆಯ ಸಂದರ್ಭದಲ್ಲಿ ಉಂಟಾದ ಪ್ರತಿಭಟನೆಗಳು ಯುದ್ಧಾನಂತರದ ಕಾಲದಲ್ಲಿ ಬ್ರಿಟಿಷರು ಎದುರಿಸಿದ ಅತಿ ದೊಡ್ಡ ಸವಾಲಾಗಿದೆ.

## ಸ್ವಾತಂತ್ರ್ಯದ ಕಡೆಗೆ

ದ್ವಿತೀಯ ಜಾಗತಿಕ ಯುದ್ಧ ಮತ್ತು ಬದಲಾದ ಅಂತಾರಾಷ್ಟ್ರೀಯ ಸನ್ನಿವೇಶಗಳು ಸ್ವಾತಂತ್ರ್ಯದ ಕಡೆಗಿನ ಯಾತ್ರೆಯನ್ನು ತ್ವರಿತಗೊಳಿಸಿದವು. ಅಂದಿನ ವೈಸರಾಯಿಯಾಗಿದ್ದ ವೇವಲ್ ಪ್ರಭು ಭಾರತದ ನೇತಾರರೊಂದಿಗೆ ಚರ್ಚಿಸಿ ಕೆಲವು ಸಲಹೆಗಳನ್ನು ಮುಂದಿರಿಸಿದರು. ಈ ಸಲಹೆಗಳ ಕುರಿತು ಮತ್ತಷ್ಟು ಚರ್ಚಿಸಲು 1945 ಜೂನ್ ತಿಂಗಳಲ್ಲಿ ಶಿಮ್ಲಾದಲ್ಲಿ ಸಭೆಯೊಂದನ್ನು ಕರೆದರೂ ಅದು ಸಾಕಷ್ಟು ಪರಿಣಾಮಕಾರಿಯಾಗಲಿಲ್ಲ. ಶಿಮ್ಲಾ ಸಮ್ಮೇಳನದ ನಂತರ ನಡೆದ ಪ್ರಮುಖ ಘಟನೆಗಳನ್ನು ಕೆಳಗೆ ನೀಡಲಾಗಿದೆ.

**ಕ್ಯಾಬಿನೆಟ್ ಮಿಷನ್ (1946 ಮಾರ್ಚ್)**



- ಅಧಿಕಾರ ಹಸ್ತಾಂತರದ ಕುರಿತು ಚರ್ಚಿಸಲು ಭಾರತವನ್ನು ತಲುಪಿದ ಬ್ರಿಟಿಷ್ ಮಂತ್ರಿಮಂಡಲದ ಮೂವರು ಸದಸ್ಯರನ್ನು ಒಳಗೊಂಡ ಸಮಿತಿ. ಸ್ಟಾಫೋರ್ಡ್ ಕ್ರಿಪ್ಸ್, ಪೆಥಿಕ್ ಲೋರೆನ್ಸ್, ಎ.ವಿ. ಅಲೆಕ್ಸಾಂಡರ್ ಈ ಸಮಿತಿಯಲ್ಲಿ ಸದಸ್ಯರಾಗಿದ್ದರು.
- ಅಧಿಕಾರ ಹಸ್ತಾಂತರಿಸುವವರೆಗೆ ಮಧ್ಯಂತರ ಸರಕಾರವನ್ನು ರೂಪಿಸುವುದು, ಭಾರತದ ಸಂವಿಧಾನವನ್ನು ರಚಿಸಲು ಸಂವಿಧಾನ ನಿರ್ಮಾಣ ಸಮಿತಿಯನ್ನು ರೂಪಿಸುವುದು ಮೊದಲಾದವುಗಳು ಈ ಸಮಿತಿಯ ಪ್ರಮುಖ ಶಿಫಾರಸ್ಸುಗಳಾಗಿದ್ದವು.

**ಮೌಂಟ್ ಬ್ಯಾಟನ್ ಯೋಜನೆ (1947 ಜೂನ್ 3)**

- ಕೊನೆಯ ವೈಸರಾಯಿ ಆಗಿದ್ದ ಮೌಂಟ್ ಬ್ಯಾಟನ್ ಪ್ರಭು ಮುಂದಿರಿಸಿದ ಯೋಜನೆ.
- ದೇಶವನ್ನು ಭಾರತ, ಪಾಕಿಸ್ತಾನ ಎಂದು ಎರಡಾಗಿ ವಿಭಜಿಸಿ ಸ್ವಾತಂತ್ರ್ಯ ನೀಡಬೇಕೆಂದು ನಿರ್ದೇಶಿಸಿದರು.

**ಭಾರತದ ಸ್ವಾತಂತ್ರ್ಯ (1947 ಆಗಸ್ಟ್ 15)**

- ಬ್ರಿಟಿಷ್ ಪಾರ್ಲಿಮೆಂಟ್ ಅಂಗೀಕರಿಸಿದ ಭಾರತದ ಸ್ವಾತಂತ್ರ್ಯ ಕಾಯಿದೆಯ ಪ್ರಕಾರ 1947 ಆಗಸ್ಟ್ 15ರಂದು ಭಾರತವು ಸ್ವತಂತ್ರವಾಯಿತು.
- ಜವಾಹರ್ ಲಾಲ್ ನೆಹರು ಸ್ವತಂತ್ರ ಭಾರತದ ಮೊದಲ ಪ್ರಧಾನಮಂತ್ರಿ ಯಾದರು.

## ಬ್ರಿಟಿಷ್ ಆಡಳಿತದ ಕೊನೆ

**1947** ಜುಲೈ **18** ಶುಕ್ರವಾರ

ಬ್ರಿಟಿಷ್ ಪಾರ್ಲಿಮೆಂಟಿನ ಮೇಲ್ಮನೆಯಾದ ಪ್ರಭು ಸಭೆಯ ದೊಡ್ಡದಾದ ಮೇಜಿನಲ್ಲಿ, ರಾಜ ಜೋರ್ಜ್ VI-ನ ಅನುಮತಿಗಾಗಿ ಮಸೂದೆಗಳನ್ನು ಒಂದರ ಮೇಲೆ ಒಂದರಂತೆ ಇಡಲಾಗಿತ್ತು. ಮೇಜಿನ ಒಂದು ಭಾಗದಲ್ಲಿ ರಾಜನ ಪ್ರತಿನಿಧಿಯಾದ ಗುಮಾಸ್ತ, ಇನ್ನೊಂದು ಭಾಗದಲ್ಲಿ ಪಾರ್ಲಿಮೆಂಟಿನ ಪ್ರತಿನಿಧಿಗಳು ಆಸೀನರಾಗಿದ್ದರು. ಪ್ರಧಾನಮಂತ್ರಿ ಕ್ಲೆಮೆಂಟ್ ಅಟ್ಲೀಯ ನೇತೃತ್ವದಲ್ಲಿ ಹೌಸ್ ಆಫ್ ಕಾಮನ್ಸ್‌ನ 30 ಸದಸ್ಯರು ಅಲ್ಲಿ ಹಾಜರಿದ್ದರು. ಪಾರ್ಲಿಮೆಂಟಿನ ಪ್ರತಿನಿಧಿಯಾದ ಗುಮಾಸ್ತ ಒಂದು ಮಸೂದೆಯನ್ನು ಕೈಗೆತ್ತಿಕೊಂಡು ಈ ರೀತಿಯಾಗಿ ಓದಿದನು. 'ಸೌತ್ ಮೆಟ್ರೋ ಪೊಲಿಟನ್ ಗ್ಯಾಸ್ ಬಿಲ್'

ರಾಜನ ಪ್ರತಿನಿಧಿ ಉತ್ತರಿಸಿದನು 'Le Roile Veult' (ರಾಜನು ಇದನ್ನು ಅಂಗೀಕರಿಸುವನು)

ಪಾರ್ಲಿಮೆಂಟ್ ಪ್ರತಿನಿಧಿ ನಂತರದ ಮಸೂದೆಯನ್ನು ಕೈಗೆತ್ತಿಕೊಂಡನು.

'ದಿ ಫೆಲಿಕ್ಸ್‌ಸ್ಟೋವ್ ಪಿಯರ್ ಬಿಲ್'

ರಾಜನ ಪ್ರತಿನಿಧಿ, 'Le Roile Veult'

ಪಾರ್ಲಿಮೆಂಟ್ ಪ್ರತಿನಿಧಿ ಇನ್ನೊಂದು ಬಿಲ್ ಕೈಗೆತ್ತಿಕೊಂಡನು.

'ಇಂಡಿಯನ್ ಇಂಡಿಪೆಂಡೆನ್ಸ್ ಬಿಲ್'

'Le Roile Veult' ರಾಜನ ಪ್ರತಿನಿಧಿಯ ಶಬ್ದ ಹಾಲ್ ನಲ್ಲಿ ಮೊಳಗಿತು.

ಭಾರತವು ಸ್ವತಂತ್ರಗೊಂಡಿತು. ಬ್ರಿಟಿಷ್ ಆಡಳಿತವು ಚರಿತ್ರೆಯ ಭಾಗವಾಯಿತು.

*Source:* Dominique Lapierre & Larry Collins, *Freedom at Midnight*

ಭಾರತದ ಸ್ವಾತಂತ್ರ್ಯ ಚಳುವಳಿಯು ಆಧುನಿಕ ಜಗತ್ತು ಕಂಡ ಅತ್ಯಂತ ದೊಡ್ಡ ಜನಪರ ಚಳವಳಿಗಳಲ್ಲಿ ಒಂದಾಗಿದೆ. ಹಲವು ವರ್ಷಗಳವರೆಗೆ ಮುಂದುವರಿದ ಬ್ರಿಟಿಷ್ ಆಡಳಿತದ ವಿರುದ್ಧದ ಚಳುವಳಿ ಯಾವತ್ತೂ ಕೆಲವೊಂದು ಮೌಲ್ಯಗಳನ್ನು ಎತ್ತಿಹಿಡಿದಿರುವುದನ್ನು ಕಾಣಬಹುದು. ಅಹಿಂಸೆ, ಪ್ರಜಾಪ್ರಭುತ್ವ, ರಾಷ್ಟ್ರೀಯತೆ, ಏಕತೆ, ಜಾತ್ಯತೀತತೆ, ವಿವಿಧತೆ, ಸಾಮಾಜಿಕ ನ್ಯಾಯ, ಆರ್ಥಿಕ ಸ್ವಾವಲಂಬನೆ ಎಂಬಿವುಗಳು ಭಾರತದ ಸ್ವಾತಂತ್ರ್ಯ ಹೋರಾಟವು ಮುಂದಿರಿಸಿದ ಕೆಲವು ಮೌಲ್ಯಗಳಾಗಿವೆ. ನಾವು ಪ್ರತಿಯೊಬ್ಬರೂ ಈ ಮೌಲ್ಯಗಳನ್ನು ಎತ್ತಿಹಿಡಿದುಕೊಂಡು ರಾಷ್ಟ್ರ ಪುನರ್ ನಿರ್ಮಾಣದಲ್ಲಿ ಪಾಲ್ಗೊಳ್ಳಬೇಕಾಗಿದೆ.

## ಮುಂದುವರಿದ ಚಟುವಟಿಕೆಗಳು

- 1919 ರ ನಂತರದ ಭಾರತದ ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಅಳವಡಿಸಿಕೊಂಡು ಐ.ಸಿ.ಟಿ.ಯ ಸಹಾಯದಿಂದ ಸಮಾಜ ವಿಜ್ಞಾನ ಲ್ಯಾಬ್‌ನಲ್ಲಿ ಪ್ರದರ್ಶನವೊಂದನ್ನು ಆಯೋಜಿಸಿರಿ.
- 'ಗಾಂಧೀಜಿ ಮತ್ತು ಭಾರತದ ಸ್ವಾತಂತ್ರ್ಯ ಹೋರಾಟ' ಎಂಬ ವಿಷಯದಲ್ಲಿ ಡಿಜಿಟಲ್ ರಸಪ್ರಶ್ನೆಯನ್ನು ತಯಾರಿಸಿರಿ.
- ಭಾರತದ ಸ್ವಾತಂತ್ರ್ಯ ಹೋರಾಟದ ಪ್ರಮುಖ ಸ್ಥಳಗಳನ್ನು ಸೇರಿಸಿಕೊಂಡು ವರ್ಚುವಲ್ ಟೂರ್ ಆಯೋಜಿಸಿರಿ.

# 7

# ಸ್ವತಂತ್ರ ಭಾರತದ ವರ್ತಮಾನ ಕಾಲ



ನವದೆಹಲಿಯಲ್ಲಿ ಒಟ್ಟು ಸೇರುತ್ತಿರುವ ಲಕ್ಷ ಗಟ್ಟಲೆ ಜನರು..... ಎಲ್ಲಾ ಭಾಗಗಳಿಂದಲೂ ಅವರು ಬಂದು ಸೇರುತ್ತಿದ್ದಾರೆ... ಸಂತೋಷದಿಂದ ಮಣಿಗಳನ್ನು ಆಡಿಸುತ್ತಾ ಸಾಲು ಸಾಲಾಗಿ ಬರುತ್ತಿರುವ ಕುದುರೆ ಗಾಡಿಗಳು, ಮರದ ಚಕ್ರಗಳಿಗೆ ಜೋಡಿಸಿದ ತಟ್ಟುಗಳಲ್ಲಿ ತುಂಬಾ ಜನರನ್ನು ಎಳೆದುಕೊಂಡು ಬರುತ್ತಿರುವ, ಕೋಡು, ಗೊರಸುಗಳನ್ನು ಕೇಸರಿ, ಹಸಿರು, ಬಿಳಿ ಬಣ್ಣಗಳಿಂದ ಅಲಂಕರಿಸಿದ ಎತ್ತುಗಳು, ಬಣ್ಣ ಬಳಿದ ಮೇಲ್ತಟ್ಟು ಮತ್ತು ಪಾರ್ಶ್ವಗಳುಳ್ಳ ಟ್ರಕ್ಕುಗಳಲ್ಲಿ ತುಂಬಿ ತುಳುಕುತ್ತಿರುವ ಜನರು... ಕತ್ತೆಯ ಮೇಲೆ, ಕುದುರೆಯ ಮೇಲೆ, ಸೈಕಲ್ಲಿನಲ್ಲಿ, ನಡೆದು, ಓಡಿ ಜನರು ಬಂದರು. ಮುಂಡಾಸು ಕಟ್ಟಿದ ಗ್ರಾಮವಾಸಿಗಳು, ಹಬ್ಬದುತ್ಸಾಹದಲ್ಲಿ ಹೊಳೆಯುವ ಸೀರೆಯುಟ್ಟು, ತಮ್ಮಲ್ಲಿರುವ ಎಲ್ಲ ಆಭರಣಗಳನ್ನು ಕೈಗಳಲ್ಲಿಯೂ ಕಾಲುಗಳಲ್ಲಿಯೂ ಬೆರಳುಗಳಲ್ಲಿಯೂ ಮೂಗಿನಲ್ಲಿಯೂ ಧರಿಸಿದ ಅವರ ಮನೆಯ ಸ್ತ್ರೀಯರೊಂದಿಗೆ ಬಂದು ಸೇರಿದರು... ಅವರು ಕೂಗಿ ಹೇಳಿದರು... ಬ್ರಿಟಿಷರು ಹೋಗುವ ಸಮಯವಾಯಿತು.. ನೆಹರು ಒಂದು ಹೊಸ ಧ್ವಜಾರೋಹಣಕ್ಕೆ ಸಿದ್ಧರಾಗುತ್ತಿದ್ದಾರೆ... ನಾವು ಸ್ವತಂತ್ರರಾಗಿದ್ದೇವೆ...

*Source:* Dominique Lapierre & Larry Collins, *Freedom at Midnight*

ಬ್ರಿಟಿಷ್ ಆಧಿಪತ್ಯದಿಂದ ಭಾರತವು ಸ್ವಾತಂತ್ರ್ಯಗಳಿಸಿದ 1947 ಆಗಸ್ಟ್ 15 ರಂದು ಬೆಳಿಗ್ಗೆ ದೆಹಲಿ ನಗರದಲ್ಲಿ ಕಂಡ ವಿವಿಧ ದೃಶ್ಯಗಳನ್ನು ಮೇಲೆ ನೀಡಲಾಗಿದೆ.



ಸ್ವಾತಂತ್ರ್ಯ ನಕ್ಷತ್ರ ಅಸ್ತಮಿಸದಿರಲಿ

ಸ್ವತಂತ್ರ ಭಾರತದ ಪ್ರಧಾನ ಮಂತ್ರಿಯ ಸಂದೇಶ

ಒಂದು ಹೊಸ ನಕ್ಷತ್ರ --- ಪೌರಾತ್ಯ ದೇಶದ ಸ್ವಾತಂತ್ರ್ಯ ನಕ್ಷತ್ರ --- ಉದಯಿಸುತ್ತಿದೆ. ಒಂದು ಹೊಸ ಭರವಸೆ ಮೂಡುತ್ತಿದೆ. ದೀರ್ಘಕಾಲದ ಪ್ರಾರ್ಥನೆಯಾದ ಒಂದು ಕನಸು ನನಸಾಗುತ್ತಿದೆ. ಆ ನಕ್ಷತ್ರವು ಅಸ್ತಮಿಸದಿರಲಿ. ಆ ಭರವಸೆ ವಂಚನೆಗೊಳಗಾಗದಿರಲಿ.

ನವದೆಹಲಿ - ಜವಾಹರ್‌ಲಾಲ್ ನೆಹರು

ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದುದಕ್ಕೆ ಸಂಬಂಧಿಸಿ ಪ್ರಮುಖ ಪತ್ರಿಕೆಯಲ್ಲಿ ಬಂದ ವಾರ್ತೆ

- ಯಾವ ಯಾವ ವಿಚಾರಗಳನ್ನು ಇದರಿಂದ ತಿಳಿದುಕೊಳ್ಳಬಹುದು?
- ಭಾರತದ ಪ್ರಥಮ ಸ್ವಾತಂತ್ರ್ಯ ದಿನಾಚರಣೆಯು ಕೇವಲ ಸಂತೋಷವನ್ನು ಮಾತ್ರ ನೀಡಿದ ಸಂದರ್ಭವಾಗಿತ್ತೆ?

ಭಾರತವು ಸ್ವತಂತ್ರವಾದ ದಿನವನ್ನು ಆಚರಿಸಲು ಸುತ್ತಲಿರುವ ಪ್ರದೇಶಗಳಿಂದ ಜನರು ದೆಹಲಿಯತ್ತ ಹರಿದು ಬಂದರು. ನಮ್ಮ ದೇಶವು ಸ್ವತಂತ್ರವಾಗುವುದರೊಂದಿಗೆ ಭಾರತ ಮತ್ತು ಪಾಕಿಸ್ತಾನ ಎಂಬ ಎರಡು ಸ್ವತಂತ್ರ ದೇಶಗಳಾಗಿ ವಿಭಜನೆಯಾಯಿತು. ಆದುದರಿಂದ ಭಾರತದ ಪ್ರಥಮ ಸ್ವಾತಂತ್ರ್ಯ ದಿನವು ಸಂತೋಷದೊಂದಿಗೆ ದುಃಖವೂ ಕೂಡಿದ ಸಂದರ್ಭವಾಗಿ ಬದಲಾಯಿತು.

## ವಿಭಜನೆಯ ನಂತರದ ಭಾರತ

ಭೂಪಟ 7.1 ನ್ನು ನಿರೀಕ್ಷಿಸಿರಿ. ಇದರಲ್ಲಿ ಭಾರತ ಮತ್ತು ಪಾಕಿಸ್ತಾನದ ಸ್ಥಾನವನ್ನು ತಿಳಿದುಕೊಳ್ಳಿರಿ. ಈ ಭೂಪಟದ ವಿಶೇಷತೆಗಳು ಯಾವುವು? ಭಾರತದ ವಿಭಜನೆಯ ಕುರಿತಾದ ಯಾವ ಯಾವ ವಿಚಾರಗಳನ್ನು ನಿಮಗೆ ಈ ಭೂಪಟದಿಂದ ಕಂಡುಕೊಳ್ಳಬಹುದು?




ಭೂಪಟ 7.1

-

ಭಾರತದ ವಿಭಜನೆಯ ವಿವರವಾದ ಭೂಪಟವನ್ನು ತಯಾರಿಸಲು ಲಂಡನಿನ ಪ್ರಸಿದ್ಧ ವಕೀಲರಾಗಿದ್ದ ಸಿರಿಲ್ ರಾಡ್ ಕ್ಲಿಫ್ ರಿಗೆ ಜವಾಬ್ದಾರಿಯನ್ನು ನೀಡಲಾಗಿತ್ತು. ವಿಭಜನೆಯ ನಂತರ ಬ್ರಿಟಿಷ್ ಭಾರತದ ಕೆಲವು ಪ್ರದೇಶಗಳು ಪಾಕಿಸ್ತಾನದ ಭಾಗವಾಗಿ ಬದಲಾದರೂ ಹೆಚ್ಚಿನ ಪ್ರದೇಶಗಳು ಭಾರತದಲ್ಲಿಯೇ ನೆಲೆನಿಂತಿತ್ತು ಎನ್ನುವುದನ್ನು ನೀವು ಭೂಪಟದಿಂದ ತಿಳಿದುಕೊಂಡಿರಲ್ಲವೇ. ಆದರೆ ಬಂಗಾಳ, ಪಂಜಾಬ್ ಎಂಬೀ ಪ್ರದೇಶಗಳು ಮಾತ್ರ ವಿಭಜನೆಯಾದವು. ಪಶ್ಚಿಮಬಂಗಾಳ ಭಾರತದಲ್ಲಿ ಉಳಿದಾಗ ಪೂರ್ವ ಬಂಗಾಳವು ಪೂರ್ವ ಪಾಕಿಸ್ತಾನವಾಗಿ ಬದಲಾಯಿತು. ಅದೇ ರೀತಿಯಲ್ಲಿ ಪೂರ್ವ ಪಂಜಾಬ್ ಭಾರತದ ಮತ್ತು ಪಶ್ಚಿಮ ಪಂಜಾಬ್ ಪಾಕಿಸ್ತಾನದ

ಭಾಗವಾಯಿತು. ಅಲ್ಲದೆ ಅಸ್ಸಾಂನಲ್ಲಿ ನಡೆಸಿದ ಜನಾಭಿಪ್ರಾಯ ಸಂಗ್ರಹದ ಪರಿಣಾಮವಾಗಿ ಸಿಲ್‌ಹೆಟ್ ಪೂರ್ವ ಪಾಕಿಸ್ತಾನದ ಭಾಗವಾಯಿತು.

ವಿಭಜನೆಯ ನಂತರ ಪಾಕಿಸ್ತಾನದ ಭಾಗವಾದ ಪಶ್ಚಿಮ ಪಂಜಾಬಿನಿಂದ ಹಿಂದೂಗಳು ಮತ್ತು ಸಿಖ್ಖರು ಭಾರತದ ಕಡೆಗೆ ಪಲಾಯನ ಪ್ರಾರಂಭಿಸಿದರು. ಅದೇ ಸಮಯದಲ್ಲಿ ಭಾರತದ ಪಂಜಾಬಿನಿಂದ ಮುಸ್ಲಿಮರು ಪಾಕಿಸ್ತಾನದತ್ತ ಸಾಗಿದರು. ಬಂಗಾಳ ವಿಭಜನೆಯಾದರೂ ಪಂಜಾಬಿನಲ್ಲಿ ಉಂಟಾದಂತೆ ಒಂದು ಸಾಮೂಹಿಕ ವಲಸೆ ಅಲ್ಲಿ ನಡೆಯಲಿಲ್ಲ. ಇದಕ್ಕೆ ಕಾರಣವಾದ ಪ್ರಧಾನ ವಿಚಾರಗಳನ್ನು ಕೆಳಗೆ ನೀಡಲಾಗಿದೆ.

- 1905ರ ಬಂಗಾಳ ವಿಭಜನೆಗೆ ವಿರುದ್ಧವಾದ ಹೋರಾಟಗಳೊಂದಿಗೆ ಪ್ರಬಲಗೊಂಡ ಜಾತ್ಯತೀತತೆಯಿಂದ ಕೂಡಿದ ರಾಷ್ಟ್ರೀಯತೆ.
- ಬಂಗಾಳದ ಜನತೆಯ ಭಾಷಿಕವಾದ ಏಕತೆ.
- ಬ್ರಹ್ಮಪುತ್ರಾ ನದಿ ಮತ್ತು ಅದರ ಉಪನದಿಗಳು ಎರಡು ರಾಷ್ಟ್ರಗಳಿಗೆ ಇರುವ ತಕ್ಷಣದ ವಲಸೆಗೆ ಅಡ್ಡಿಯಾಯಿತು.

ಭಾರತ-ಪಾಕಿಸ್ತಾನದ ವಿಭಜನೆಗೆ ಸಂಬಂಧಿಸಿದ ಒಂದು ಪತ್ರಿಕಾ ವರದಿಯನ್ನು ತಯಾರಿಸಿರಿ.

### ಸಿಲ್‌ಹೆಟ್ ಮತ್ತು ಜನಾಭಿಪ್ರಾಯ ಸಂಗ್ರಹ

ಬ್ರಿಟಿಷ್ ಆಡಳಿತ ಕಾಲದಲ್ಲಿ ಸಿಲ್‌ಹೆಟ್ ಅಸ್ಸಾಂ ಪ್ರದೇಶದ ಭಾಗವಾಗಿತ್ತು. 1947 ರ ಮೌಂಟ್ ಬ್ಯಾಟನ್ ಯೋಜನೆಯು ಪಂಜಾಬನ್ನು ಮತ್ತು ಬಂಗಾಳವನ್ನು ವಿಭಜಿಸುವುದರೊಂದಿಗೆ ಸಿಲ್‌ಹೆಟ್‌ನಲ್ಲಿ ಜನಾಭಿಪ್ರಾಯ ಸಂಗ್ರಹವನ್ನು ನಡೆಸಲು ಶಿಫಾರಸು ಮಾಡಿತು. ನಂತರ ಬಂದ ಜನಾಭಿಪ್ರಾಯ ಸಂಗ್ರಹದ ಪರಿಣಾಮವಾಗಿ ಸಿಲ್‌ಹೆಟ್‌ನಲ್ಲಿರುವ ಹೆಚ್ಚಿನ ಪ್ರದೇಶಗಳು ಪೂರ್ವ ಪಾಕಿಸ್ತಾನದೊಂದಿಗೆ ಸೇರಲು ಅನುಕೂಲವಾದ ತೀರ್ಮಾನವನ್ನು ಸ್ವೀಕರಿಸಿದುವು. ಸಿಲ್‌ಹೆಟ್‌ನ ಕರೀಂಗಂಜ್ ಪ್ರದೇಶ ಮಾತ್ರ ಅಸ್ಸಾಂ ಪ್ರದೇಶದ ಭಾಗವಾಗಿ ಭಾರತಕ್ಕೆ ಸೇರ್ಪಡೆಯಾಯಿತು.




'ಚರಿತ್ರೆಯ ಅತ್ಯಂತ ದೊಡ್ಡ ಬಂಧನ ವಿಮೋಚನೆ' ಎಂದು ಭಾರತದ ಸ್ವಾತಂತ್ರ್ಯ ಪ್ರಾಪ್ತಿಯ ಕುರಿತು ಅಂದಿನ ಪ್ರಸಿದ್ಧ ದಿನಪತ್ರಿಕೆಯಾದ 'ಮ್ಯಾಂಚೆಸ್ಟರ್ ಗಾರ್ಡಿಯನ್' ಬರೆಯಿತು.

### ರಾಡ್ ಕ್ಲಿಫ್ ರಚಿಸಿದ ಗಡಿರೇಖೆ

ಭಾರತ -ಪಾಕಿಸ್ತಾನ ವಿಭಜನೆಯ ಭಾಗವಾಗಿ ಗಡಿರೇಖೆಯನ್ನು ತಯಾರಿಸಿದ ಸಿರಿಲ್ ರಾಡ್ ಕ್ಲಿಫ್ ಅದಕ್ಕೂ ಮೊದಲು ಭಾರತವನ್ನು ಸಂದರ್ಶಿಸಿರಲಿಲ್ಲ ಮತ್ತು ಭಾರತದ ಭೌಗೋಳಿಕ ವಿಶೇಷತೆಗಳನ್ನು ತಿಳಿದುಕೊಂಡಿರಲಿಲ್ಲ. ಭಾರತದ ಕುರಿತು ಯಾವುದೇ ಪೂರ್ವ ಮಾಹಿತಿ ಇಲ್ಲದೆ ಕೇವಲ ಐದು ವಾರಗಳಲ್ಲಿ ಅವರು 'ರಾಡ್ ಕ್ಲಿಫ್ ರೇಖೆ' ಯನ್ನು ತಯಾರಿಸಿದರು.



## ವಿಭಜನೆಯು ನೋವಾಗಿ ಬದಲಾದಾಗ...

"ಇತ್ತೀಚೆಗೆ ಉಂಟಾದ ಗಲಭೆಯ ಮಧ್ಯೆ ರಾವಲ್ಪಿಂಡಿ ಜಿಲ್ಲೆಯ ತೋವಾಖಲ್ಸ್ ಗ್ರಾಮದ ತೊಂಬತ್ತು ಮಹಿಳೆಯರು ಬಾವಿಗೆ ಹಾರಿ ಪ್ರಾಣತ್ಯಾಗ ಮಾಡಿದ ಘಟನೆಯು ಪಂಜಾಬಿನ ಜನರ ಊಹೆಗೂ ಮೀರಿದ ಆತ್ಮಾಭಿಮಾನಕ್ಕೆ ಸಾಕ್ಷಿಯಾಗಿತ್ತು. ಪುರುಷರಿಗೆ ಅವರನ್ನು ರಕ್ಷಿಸಲು ಅಸಾಧ್ಯವಾದಾಗ ಆತ್ಮಹತ್ಯೆ ಮಾಡಿದ ರಾಜಸ್ಥಾನಿ ಮಹಿಳೆಯರ ಸಂಪ್ರದಾಯಕ್ಕೆ ಇಲ್ಲಿ ಪುನರ್ಜನ್ಮ ಉಂಟಾಯಿತು.... ಒಂದು ತಿಂಗಳ ಹಿಂದೆ ಬೆತ್ತ, ಬಂದೂಕುಗಳು ಮತ್ತು ಕೈಬಾಂಬುಗಳನ್ನು ಹಿಡಿದುಕೊಂಡು ಶಸ್ತ್ರಸಜ್ಜಿತವಾದ ಕೋಮುವಾದಿಗಳ ಗುಂಪೊಂದು ಆ ಗ್ರಾಮವನ್ನು ಸುತ್ತುವರಿಯಿತು. ಗ್ರಾಮಸ್ಥರು ತಮ್ಮಿಂದ ಸಾಧ್ಯವಾಗುವಷ್ಟು ವಿಧದಲ್ಲಿ ಪ್ರತಿಭಟಿಸಿದರು. ಕೊನೆಗೆ ಅವರಿಗೆ ಶರಣಾಗಬೇಕಾಯಿತು. ಅನಂತರ ನಡೆಸಿದ ಮಾತುಕತೆಯಲ್ಲಿ ಧಾಳಿಕೋರರು ಹತ್ತು ಸಾವಿರ ರೂಪಾಯಿಗಳನ್ನು ನೀಡುವಂತೆ ಬೇಡಿಕೆ ಇಟ್ಟರು. ಕೂಡಲೇ ಅಷ್ಟು ರೂಪಾಯಿಗಳನ್ನು ಅವರಿಗೆ ನೀಡಿದರು. ಇನ್ನು ನಾವು ಹಿಂತಿರುಗಿ ಬರಲಾರೆವು ಎಂದು ಭರವಸೆ ಕೊಟ್ಟು ಅವರು ಹೊರಟು ಹೋದರು. ಮರುದಿನವೇ ಅವರು ಆ ಭರವಸೆಯನ್ನು ಉಲ್ಲಂಘಿಸಿ ಪುನಃ ಬಂದರು. ಅಧಿಕ ಹಣವನ್ನು ನೀಡುವಂತೆ ಬೇಡಿಕೆಯೊಡ್ಡಿದರು. ವಾದ ವಿವಾದಗಳ ಮಧ್ಯೆ ಅವರನ್ನು ವಿರೋಧಿಸಿದ ನಲುವತ್ತು ಜನರನ್ನು ಅವರು ಕೊಂದರು. ಹೆಚ್ಚಿನ ಸಂಖ್ಯೆಯಲ್ಲಿದ್ದ ಶತ್ರುಗಳ ಅಕ್ರಮಣವನ್ನು ತಡೆಗಟ್ಟಲು ಆ ಗ್ರಾಮಸ್ಥರಿಗೆ ಸಾಧ್ಯವಾಗಲಿಲ್ಲ. ಗ್ರಾಮದಲ್ಲಿದ್ದ ಅವರ ಮಹಿಳೆಯರು ಅವಸರದಿಂದ ಒಟ್ಟುಗೂಡಿದರು. ಅವರು ತಮ್ಮ ಸ್ವಾಭಿಮಾನವನ್ನು ಬಿಟ್ಟು ಉಳಿದೆಲ್ಲವನ್ನು ಕಳೆದುಕೊಳ್ಳುತ್ತೇವೆ ಎಂದು ಅರಿತುಕೊಂಡಾಗ ತೊಂಬತ್ತು ಮಹಿಳೆಯರು ಒಂದು ಸಣ್ಣ ಬಾವಿಗೆ ಹಾರಿದರು. ಮೂವರನ್ನು ರಕ್ಷಿಸಲಾಯಿತು. ಎಲ್ಲರಿಗೂ ಮುಳುಗಿ ಸಾಯಲು ಅಗತ್ಯವಿರುವಷ್ಟು ನೀರು ಆ ಬಾವಿಯಲ್ಲಿರಲಿಲ್ಲ."

*Source:* Urvashi Butalia, *The Other Side of Silence*

ಊರ್ವಶಿ ಬುಟಾಲಿಯ ಅವರ 'ದಿ ಅದರ್ ಸೈಡ್ ಆಫ್ ಸೈಲೆನ್ಸ್' (ಮೌನದ ಇನ್ನೊಂದು ಬದಿ) ಎಂಬ ಪುಸ್ತಕದಲ್ಲಿ ಉಲ್ಲೇಖಿಸಿರುವ ಸುದ್ದಿಯನ್ನು (1947 ಏಪ್ರಿಲ್ 15ರಂದು ಸ್ಟೇಟ್ಸ್ ಮನ್‌ನಲ್ಲಿ ಪ್ರಕಟಗೊಂಡ ವಾರ್ತೆ) ಮೇಲೆ ಕೊಡಲಾಗಿದೆ. ವಿಭಜನೆಯ ಸಂದರ್ಭದಲ್ಲಿ ಪಂಜಾಬಿನ ಜನರು ಇದೇ ರೀತಿಯ ಅನೇಕ ಕಷ್ಟ, ನಷ್ಟಗಳನ್ನು ಎದುರಿಸಬೇಕಾಯಿತು. ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡ ನೆನಪುಗಳನ್ನು ಇಂದು ಕೂಡ ಆ ಪ್ರದೇಶದಲ್ಲಿ ಜೀವಿಸುತ್ತಿರುವ ಜನರಲ್ಲಿ ಕಾಣಬಹುದು. ಈ ನೆನಪುಗಳು ಇಂದಿಗೂ ಅವರ ಮನೋಭಾವ ಮತ್ತು ಅಭಿಪ್ರಾಯ ರೂಪೀಕರಣದ ಮೇಲೆ ಪ್ರಭಾವ ಬೀರುತ್ತಲೇ ಇವೆ.



ಗಡಿ ಪ್ರದೇಶಗಳಿಂದ ಭಾರತ ಮತ್ತು ಪಾಕಿಸ್ತಾನಕ್ಕೆ ಪಲಾಯನ ಮಾಡುತ್ತಿರುವ ಜನರ ಚಿತ್ರಗಳು

ವಿಭಜನೆಯು ಇಂತಹ ಅನೇಕ ಸಮಸ್ಯೆಗಳನ್ನು ಸೃಷ್ಟಿಸಿತು. ಅವು ಯಾವುವೆಂದು ನೋಡೋಣ.

- ಲಕ್ಷಾಂತರ ನಿರಾಶ್ರಿತರು ಭಾರತದಿಂದ ಪಾಕಿಸ್ತಾನಕ್ಕೆ ಮತ್ತು ಪಾಕಿಸ್ತಾನದಿಂದ ಭಾರತಕ್ಕೆ ಪಲಾಯನ ಮಾಡಿದರು.
- ವ್ಯಾಪಕವಾದ ಆಕ್ರಮಣಗಳಿಂದಾಗಿ ಸಾವಿರಾರು ಜನರು ಸಾವನ್ನಪ್ಪಿದ್ದರು.
- ಕೊಲ್ಕತ್ತಾ, ದೆಹಲಿ, ಲಾಹೋರ್ ಮುಂತಾದ ಸ್ಥಳಗಳಲ್ಲಿ ಕೋಮು ಗಲಭೆಗಳು ಭುಗಿಲೆದ್ದವು.
- ಅನೇಕ ಮಹಿಳೆಯರು ಮಾನಹಾನಿಗೊಳಗಾದರು.
- ಅನೇಕ ಮಹಿಳೆಯರನ್ನು ಮತ್ತು ಮಕ್ಕಳನ್ನು ಅಪಹರಿಸಲಾಯಿತು.

ವಿಭಜನೆಯ ನಂತರ ಭಾರತ ಮತ್ತು ಪಾಕಿಸ್ತಾನದ ಜನರು ಎದುರಿಸಿದ ವಿವಿಧ ಸಮಸ್ಯೆಗಳನ್ನೊಳಗೊಂಡ ಒಂದು ಡಿಜಿಟಲ್ ಪ್ರಸೆಂಟೇಶನನ್ನು ಗುಂಪಿನಲ್ಲಿ ತಯಾರಿಸಿ ಅದನ್ನು ತರಗತಿಯಲ್ಲಿ ಪ್ರಸ್ತುತಪಡಿಸಿರಿ.

## ರಾಷ್ಟ್ರಪಿತ ಹುತಾತ್ಮರಾದರು

**"ನಮ್ಮ ಜೀವನದಿಂದ ಬೆಳಕು ಕಣ್ಮರೆಯಾಗಿದೆ. ಎಲ್ಲೆಡೆ ಕತ್ತಲೆ ಆವರಿಸಿದೆ. ಬೆಳಕು ಆರಿ ಹೋಗಿದೆ ಎಂದು ನಾನು ಹೇಳಿದ್ದೇನೆಯೇ....? ನಾನು ತಪ್ಪು ಮಾಡಿದೆ. ಪ್ರಕಾಶಿಸುತ್ತಿದ್ದುದು ಕೇವಲ ಒಂದು ದೀಪವಾಗಿರಲಿಲ್ಲ.... ಸಾವಿರಾರು ವರ್ಷಗಳ ನಂತರವೂ ಅದು ಇಲ್ಲಿ ಪ್ರಕಾಶಿಸಬಲ್ಲುದು. ಶತಮಾನಗಳವರೆಗೆ ಸಾವಿರಾರು ಹೃದಯಗಳಿಗೆ ಅದು ಸಾಂತ್ವನ ನೀಡುತ್ತಲೇ ಇರಬಹುದು."**

ಮೇಲೆ ನೀಡಿರುವುದು ಅಂದಿನ ಪ್ರಧಾನಮಂತ್ರಿಯಾಗಿದ್ದ ಜವಾಹರಲಾಲ್ ನೆಹರೂರವರು ಮಹಾತ್ಮ ಗಾಂಧಿಯವರು ಹುತಾತ್ಮರಾದುದನ್ನು ಘೋಷಿಸಿ ರಾಷ್ಟ್ರವನ್ನು ಉದ್ದೇಶಿಸಿ ಮಾಡಿದ ಭಾಷಣದ ಆಯ್ದ ಒಂದು ಭಾಗವಾಗಿದೆ.

ಹಿಂದೂ - ಮುಸ್ಲಿಂ ಏಕತೆಗಾಗಿ ಶ್ರಮಿಸಿದ ಗಾಂಧೀಜಿಯವರು 1948 ಜನವರಿ 30 ರಂದು ನವದೆಹಲಿಯ ಬಿರ್ಲಾ ಹೌಸ್ ಅಂಗಣದಲ್ಲಿ ಕೋಮುವಾದಿ ನಾಥುರಾಮ್ ವಿನಾಯಕ ಗೋಡ್ಸೆಯ ಗುಂಡೇಟಿಗೆ ಬಲಿಯಾದರು.

ಮಹಾತ್ಮಾ ಗಾಂಧೀಜಿಯವರ ಬಲಿದಾನಕ್ಕೆ ಸಂಬಂಧಿಸಿದ ಪತ್ರಿಕಾ ವಾರ್ತೆಗಳನ್ನು ಮತ್ತು ಚಿತ್ರಗಳನ್ನು ಸಂಗ್ರಹಿಸಿ ಒಂದು ಸಂಚಿಕೆಯನ್ನು ತಯಾರಿಸಿ ತರಗತಿಯಲ್ಲಿ ಮಂಡಿಸಿರಿ.



ಗಾಂಧೀಜಿಯವರ ಪಾರ್ಥಿವ ಶರೀರವನ್ನು ಸಾಗಿಸುತ್ತಿರುವ ಅಂತಿಮ ಯಾತ್ರೆ

### ಸಂವಿಧಾನದೆಡೆಗಿನ ಹೆಜ್ಜೆಗಳು




ಸಂವಿಧಾನ ರಚನೆಯ ಮೂಲಕ ಆಧುನಿಕ ಭಾರತದ ನಿರ್ಮಾಣಕ್ಕೆ ಅಡಿಪಾಯ ಹಾಕಲಾಯಿತು. 1946 ರ ಡಿಸೆಂಬರ್ 13 ರಂದು ಸಂವಿಧಾನ ರಚನಾ ಸಭೆಯ ಕಾರ್ಯಚಟುವಟಿಕೆಗಳು ಔಪಚಾರಿಕವಾಗಿ ಪ್ರಾರಂಭವಾದವು. ಜವಾಹರಲಾಲ್ ನೆಹರು ಮಂಡಿಸಿದ ಗುರಿ ನಿರ್ಣಯ ಗೊತ್ತುವಳಿಯನ್ನು 1947 ಜನವರಿ 22 ರಂದು ಸಂವಿಧಾನ ರಚನಾ ಸಭೆಯು ಅಂಗೀಕರಿಸಿತು. ನಂತರ 1949 ನವೆಂಬರ್ 26 ರಂದು ಸಂವಿಧಾನ ರಚನಾ ಸಭೆಯು ಹೊಸ ಸಂವಿಧಾನವನ್ನು ಅಂಗೀಕರಿಸಿತು. 1950 ಜನವರಿ 26 ರಂದು ಭಾರತದ ಸಂವಿಧಾನವು ಜಾರಿಗೆ ಬಂತು ಹಾಗೂ ಭಾರತವು ಒಂದು ಸಾರ್ವಭೌಮ ಪ್ರಜಾಪ್ರಭುತ್ವ ಗಣರಾಜ್ಯವಾಗಿ ಬದಲಾಯಿತು. 1951-1952 ರಲ್ಲಿ ಸಂವಿಧಾನದ ಪ್ರಕಾರ ನಡೆದ ಸ್ವತಂತ್ರ ಭಾರತದ ಮೊದಲ ಸಾರ್ವತ್ರಿಕ ಚುನಾವಣೆಗಳ ಆಧಾರದಲ್ಲಿ ಭಾರತದಲ್ಲಿ ಒಂದು ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯು ಜಾರಿಗೆ ಬಂತು.

## ಸ್ವತಂತ್ರ ಭಾರತವು ಎದುರಿಸಿದ ಸವಾಲುಗಳು

ವಸಾಹತುಶಾಹಿಯ ಪರಿಣಾಮಗಳನ್ನು ಅನುಭವಿಸಿದ್ದ ಭಾರತವು ಸ್ವತಂತ್ರವಾದಾಗ ಅನೇಕ ಸವಾಲುಗಳನ್ನು ಎದುರಿಸಬೇಕಾಯಿತು. ಅವುಗಳಲ್ಲಿ ಪ್ರಮುಖವಾದವುಗಳು ಯಾವುವೆಂದು ಪರಿಶೀಲಿಸೋಣ.

- ನಿರಾಶ್ರಿತರ ಪುನರ್ವಸತಿ
- ದೇಶಿಯ ರಾಜ್ಯಗಳ ವಿಲೀನ
- ಪೋರ್ಚುಗೀಸ್ - ಫ್ರೆಂಚ್ ಅಧೀನದಲ್ಲಿದ್ದ ಪ್ರದೇಶಗಳ ಸ್ವಾಧೀನಪಡಿಸುವಿಕೆ
- ಭಾಷೆಯ ಆಧಾರದಲ್ಲಿ ರಾಜ್ಯಗಳ ಪುನರ್ವಿಂಗಡಣೆ
- ಭಾರತದ ಆರ್ಥಿಕತೆಯ ಬಲಪಡಿಸುವಿಕೆ
- ಸ್ವತಂತ್ರ ವಿದೇಶಾಂಗ ನೀತಿಯ ರೂಪೀಕರಣ

ಈ ಸವಾಲುಗಳನ್ನು ಎದುರಿಸುವುದಕ್ಕಾಗಿ ಭಾರತ ಸರಕಾರವು ಕೈಗೊಂಡ ಕ್ರಮಗಳನ್ನು ವಿವರವಾಗಿ ಪರಿಶೀಲಿಸೋಣ.

## ನಿರಾಶ್ರಿತರ ಪುನರ್ವಸತಿ

### ಬಾಂಗ್ಲಾದೇಶದ ರಚನೆ

1947 ಆಗಸ್ಟ್ 15 ರಂದು ಭಾರತದಲ್ಲಿ ಬ್ರಿಟಿಷರ ಆಳ್ವಿಕೆ ಕೊನೆಗೊಂಡಾಗ ಇಂದಿನ ಬಾಂಗ್ಲಾದೇಶವನ್ನು ಒಳಗೊಂಡಿರುವ ಪ್ರದೇಶವನ್ನು ಪೂರ್ವ ಪಾಕಿಸ್ತಾನವೆಂದು ಕರೆಯುತ್ತಿದ್ದರು. ಪಶ್ಚಿಮ ಪಾಕಿಸ್ತಾನದಿಂದ ಸದಾ ತಾರತಮ್ಯವನ್ನು ಎದುರಿಸುತ್ತಿದ್ದ ಪೂರ್ವ ಪಾಕಿಸ್ತಾನವು 1971ರಲ್ಲಿ ಸ್ವಾತಂತ್ರ್ಯ ಗಳಿಸಿ ಬಾಂಗ್ಲಾದೇಶ ಎಂಬ ದೇಶವಾಗಿ ಬದಲಾಯಿತು.

ವಿಭಜನೆಯ ನಂತರ ಪಾಕಿಸ್ತಾನದಿಂದ ಬಂದ ಸುಮಾರು 60 ಲಕ್ಷಕ್ಕಿಂತಲೂ ಅಧಿಕ ಜನರು ಭಾರತದಲ್ಲಿ ನಿರಾಶ್ರಿತರಾದರು. ಈ ನಿರಾಶ್ರಿತರಿಗೆ ಪುನರ್ವಸತಿಯನ್ನು ಒದಗಿಸುವ ಕಾರ್ಯ ಚಟುವಟಿಕೆಗಳನ್ನು ಸರಕಾರವು ಕೈಗೆತ್ತಿಕೊಂಡಿತು. 1951ರ ಹೊತ್ತಿಗೆ ಪಶ್ಚಿಮ ಪಾಕಿಸ್ತಾನದಿಂದ ನಿರಾಶ್ರಿತರಾಗಿ ಬಂದವರ ಸಮಸ್ಯೆಗಳನ್ನು ಸಂಪೂರ್ಣವಾಗಿ ಪರಿಹರಿಸಲು ಸಾಧ್ಯವಾಯಿತು. ವಿಭಜನೆಯ ನಂತರ ಪೂರ್ವ ಪಾಕಿಸ್ತಾನದಿಂದ ನಿರಾಶ್ರಿತರ ಪ್ರವಾಹವು ತುಲನಾತ್ಮಕವಾಗಿ ಕಡಿಮೆಯಾಗಿದ್ದರೂ ನಂತರದ ಕಾಲದಲ್ಲಿ ಪೂರ್ವ ಪಾಕಿಸ್ತಾನ ಮತ್ತು ಪಶ್ಚಿಮ ಪಾಕಿಸ್ತಾನಗಳೊಳಗೆ ನಡೆದ

ಘರ್ಷಣೆಗಳಿಂದಾಗಿ ಪೂರ್ವ ಪಾಕಿಸ್ತಾನದಿಂದ ಭಾರತಕ್ಕೆ ನಿರಂತರವಾಗಿ ನಿರಾಶ್ರಿತರ ಪ್ರವಾಹವು ಹರಿದುಬರಲಾರಂಭಿಸಿತು. 1971ರಲ್ಲಿ ಬಾಂಗ್ಲಾದೇಶದ ರೂಪೀಕರಣದೊಂದಿಗೆ ಈ ನಿರಾಶ್ರಿತರ ಸಮಸ್ಯೆಯನ್ನು ತಾತ್ಕಾಲಿಕವಾಗಿ ಪರಿಹರಿಸಲು ಸಾಧ್ಯವಾಯಿತು.

## ದೇಶೀಯ ರಾಜ್ಯಗಳ ವಿಲೀನ

1947ರ ಭಾರತದ ಸ್ವಾತಂತ್ರ್ಯ ಕಾಯಿದೆಯ ಪ್ರಕಾರ ಭಾರತದಲ್ಲಿದ್ದ 565 ದೇಶೀಯ ರಾಜ್ಯಗಳಿಗೆ ಸ್ವತಂತ್ರಭಾರತದೊಂದಿಗೆ ಅಥವಾ ಪಾಕಿಸ್ತಾನದೊಂದಿಗೆ ಸೇರುವ ಅಥವಾ ಸ್ವತಂತ್ರ ರಾಜ್ಯಗಳಾಗಿಯೇ ಉಳಿಯುವ ಅಧಿಕಾರವಿತ್ತು. ದೇಶಿಯ ರಾಜ್ಯಗಳನ್ನು ಭಾರತದ ಒಕ್ಕೂಟದೊಂದಿಗೆ ಸೇರಿಸುವುದು ಅತ್ಯಂತ ಕಷ್ಟಕರವಾದ ಒಂದು ಕೆಲಸವಾಗಿತ್ತು. ಈ ಕಾರ್ಯಾಚರಣೆಯನ್ನು ಗೃಹ ಸಚಿವರಾಗಿದ್ದ ಸರ್ದಾರ್ ವಲ್ಲಭಭಾಯಿ ಪಟೇಲ್ ಹಾಗೂ ವಿದೇಶಾಂಗ ಇಲಾಖೆಯ ಕಾರ್ಯದರ್ಶಿಯಾಗಿದ್ದ ವಿ.ಪಿ. ಮೆನೋನ್‌ರವರ ನೇತೃತ್ವದ ತಂಡವು ಯಶಸ್ವಿಯಾಗಿ ಪೂರ್ತಿಗೊಳಿಸಿತು. ವಿಲೀನ ಒಪ್ಪಂದಕ್ಕೆ (Instrument of Accession) ಸಹಿ ಹಾಕಿ ಭಾರತದ ಒಕ್ಕೂಟದೊಂದಿಗೆ ಸೇರಲು ಅವರು ಎಲ್ಲ ದೇಶೀಯ ರಾಜ್ಯಗಳನ್ನು ಆಹ್ವಾನಿಸಿದರು. ಆದರೆ ಜುನಾಘಡ್, ಕಾಶ್ಮೀರ, ತಿರುವಿದಾಂಕೂರು ಮತ್ತು ಹೈದರಾಬಾದ್ ಎಂಬೀ ದೇಶಿಯ ರಾಜ್ಯಗಳ ಆಡಳಿತಾಧಿಕಾರಿಗಳು ಭಾರತದೊಂದಿಗೆ ಸೇರಲು ಒಪ್ಪಲಿಲ್ಲ. ಈ ದೇಶಿಯ ರಾಜ್ಯಗಳನ್ನು ಸಮನ್ವಯದ ಮಾತುಕತೆಗಳ ಮೂಲಕ ಮತ್ತು ಸೈನಿಕ ಕಾರ್ಯಾಚರಣೆಯ ಮೂಲಕ ಭಾರತದ ಒಕ್ಕೂಟದೊಂದಿಗೆ ವಿಲೀನಗೊಳಿಸಲಾಯಿತು. ಭಾರತದ ಒಕ್ಕೂಟದೊಂದಿಗೆ ವಿಲೀನಗೊಂಡ ದೇಶೀಯ ರಾಜ್ಯಗಳ ಆಡಳಿತಾಧಿಕಾರಿಗಳಿಗೆ ರಾಜಧನವನ್ನು ನೀಡಿದರು.


ಸರ್ದಾರ್ ವಲ್ಲಭಭಾಯಿ ಪಟೇಲ್


ವಿ ಪಿ ಮೆನೋನ್

### ರಾಜಧನ (Privy purse)

ಭಾರತದ ಒಕ್ಕೂಟದೊಂದಿಗೆ ವಿಲೀನಗೊಳಿಸುವುದರ ಅಂಗವಾಗಿ ದೇಶೀಯ ರಾಜ್ಯಗಳ ರಾಜರೊಂದಿಗೆ ಕೆಲವು ಒಪ್ಪಂದಗಳಿಗೆ ಭಾರತ ಸರಕಾರವು ಸಹಿ ಹಾಕಿತು. ಇದರಿಂದಾಗಿ ರಾಜರುಗಳಿಗೆ ತಮ್ಮ ಅಧಿಕಾರ ಮತ್ತು ಆದಾಯವು ನಷ್ಟವಾಯಿತು. ಇದನ್ನು ಪರಿಹರಿಸಲು ಈ ದೇಶೀಯ ರಾಜ್ಯಗಳ ರಾಜಕುಟುಂಬಗಳಿಗೆ ಭಾರತ ಸರಕಾರವು ಒಂದು ನಿರ್ದಿಷ್ಟ ಪ್ರಮಾಣದ ಆರ್ಥಿಕ ಸಹಾಯವನ್ನು ಒದಗಿಸಿತು. ಇದನ್ನು ರಾಜಧನ(Privy purse) ಎಂದು ಕರೆಯುತ್ತಾರೆ. ಇದಕ್ಕಾಗಿ ಸರಕಾರವು ಅಪಾರ ಹಣವನ್ನು ಖರ್ಚು ಮಾಡಬೇಕಾಯಿತು. 1971ರಲ್ಲಿ ಇಂದಿರಾಗಾಂಧಿ ಪ್ರಧಾನಮಂತ್ರಿಯಾಗಿದ್ದ ಕಾಲದಲ್ಲಿ ಸಂವಿಧಾನದ 26 ನೇ ತಿದ್ದುಪಡಿಯ ಪ್ರಕಾರ ರಾಜಧನ ನೀಡುವುದನ್ನು ನಿಲ್ಲಿಸಲಾಯಿತು.

'ಭಾರತದ ಒಕ್ಕೂಟದೊಂದಿಗೆ ದೇಶೀಯ ರಾಜ್ಯಗಳ ವಿಲೀನ' ಎಂಬ ವಿಷಯದ ಆಧಾರದಲ್ಲಿ ತರಗತಿಯಲ್ಲಿ ಒಂದು ಚರ್ಚಾಗೋಷ್ಠಿಯನ್ನು ಆಯೋಜಿಸಿರಿ.

## ಫ್ರೆಂಚರ ಮತ್ತು ಪೋರ್ಚುಗೀಸರ ಅಧೀನದಲ್ಲಿದ್ದ ಪ್ರದೇಶಗಳ ವಿಮೋಚನೆ

1947ರಲ್ಲಿ ಭಾರತವು ಬ್ರಿಟಿಷರಿಂದ ಸ್ವತಂತ್ರಗೊಂಡ ನಂತರವೂ ನಮ್ಮ ದೇಶದ ಕೆಲವು ಪ್ರದೇಶಗಳು ವಿದೇಶೀ ಶಕ್ತಿಗಳಾದ ಪೋರ್ಚುಗೀಸರು ಮತ್ತು ಫ್ರೆಂಚರ ಆಳ್ವಿಕೆಗೆ ಒಳಪಟ್ಟಿತ್ತು. ಇದಕ್ಕೆದುರಾಗಿ ಆಯಾ ಪ್ರದೇಶಗಳಲ್ಲಿ ಜನಪರ ಹೋರಾಟಗಳು ತೀವ್ರಗೊಂಡವು. ನಂತರ ಭಾರತ ಸರ್ಕಾರದ ಕೋರಿಕೆಯ ಮೇರೆಗೆ ಫ್ರಾನ್ಸ್ 1954 ರಲ್ಲಿ ಭಾರತವನ್ನು ಬಿಟ್ಟು ಹೋಗಲು




ಭೂಪಟ 7.2

ಒಪ್ಪಿಕೊಂಡಿತು. ತರುವಾಯ ಪಾಂಡಿಚೇರಿ, ಮಾಹೆ, ಯಾನಂ, ಕಾರೈಕಲ್, ಚಂದ್ರನಗರ್ ಎಂಬೀ ಫ್ರೆಂಚ್ ಅಧೀನ ಪ್ರದೇಶಗಳು ಕೇಂದ್ರ ಸರಕಾರದ ನೇರ ಆಡಳಿತಕ್ಕೊಳಪಟ್ಟವು. ಆದರೆ ಪೋರ್ಚುಗೀಸರು ತಮ್ಮ ಅಧೀನ ದಲ್ಲಿದ್ದ ಭಾರತದ ಪ್ರದೇಶಗಳಾದ ಗೋವಾ, ದಾಮನ್, ದಿಯು ಎಂಬಿವುಗಳನ್ನು ಬಿಟ್ಟು ಕೊಡಲು ಒಪ್ಪಲಿಲ್ಲ. 1954ರ ಜನಪರ ಹೋರಾಟದ ನಂತರ ದಾದ್ರಾ, ನಗರ್ ಹವೇಲಿ ಪ್ರದೇಶಗಳಲ್ಲಿದ್ದ ಪೋರ್ಚುಗೀಸರ ಆಳ್ವಿಕೆಯು ಕೊನೆಗೊಂಡಿತು. ಅನಂತರ 1961ರಲ್ಲಿ ಗೋವಾ, ದಾಮನ್, ದಿಯು ಎಂಬೀ ಪ್ರದೇಶಗಳನ್ನು ಸೈನಿಕ ಕಾರ್ಯಾಚರಣೆಯ ಮೂಲಕ ವಿಮೋಚನೆಗೊಳಿಸಿ ಅವುಗಳನ್ನು ಭಾರತ ಒಕ್ಕೂಟದೊಂದಿಗೆ ವಿಲೀನ ಗೊಳಿಸಲಾಯಿತು.

ಭೂಪಟ 7.2 ರಿಂದ ಫ್ರೆಂಚ್ -ಪೋರ್ಚುಗೀಸರ ಅಧೀನದಲ್ಲಿದ್ದ ಪ್ರದೇಶಗಳನ್ನು ಕಂಡುಹಿಡಿದು ಪಟ್ಟಿ ಮಾಡಿರಿ.

## ಭಾಷೆಯ ಆಧಾರದಲ್ಲಿ ರಾಜ್ಯಗಳ ಪುನರ್ವಿಂಗಡಣೆ

*ಭಾಷಾಪ್ರದೇಶಗಳು ರೂಪುಗೊಂಡರೆ ಅದು ಪ್ರಾದೇಶಿಕ ಭಾಷೆಗಳಿಗೆ ಪ್ರೋತ್ಸಾಹಕವಾಗಬಹುದು...*

**ಮಹಾತ್ಮ ಗಾಂಧಿ**

- ನಮ್ಮ ದೇಶದ ಹೆಚ್ಚಿನ ರಾಜ್ಯಗಳೂ ಯಾವುದರ ಆಧಾರದಲ್ಲಿ ರೂಪುಗೊಂಡವುಗಳಾಗಿವೆ?
- ನಮ್ಮ ನೆರೆಯ ರಾಜ್ಯಗಳ ಅಧಿಕೃತ ಭಾಷೆ ಯಾವುವು?

ಇಂದಿನ ನಮ್ಮ ಹೆಚ್ಚಿನ ರಾಜ್ಯಗಳು ಭಾಷೆಯ ಆಧಾರದಲ್ಲಿ ರೂಪುಗೊಂಡವುಗಳಾಗಿವೆ ಎಂದು ನಿಮಗೆ ತಿಳಿಯಿತಲ್ಲವೇ. ಆದರೆ ಸ್ವಾತಂತ್ರ್ಯ ಲಭಿಸುವುದಕ್ಕಿಂತ ಮೊದಲು ದೇಶದ ಆಡಳಿತ ಪ್ರದೇಶಗಳ ಗಡಿಗಳನ್ನು ನಿರ್ಣಯಿಸಿರುವುದು ಇಂತಹ ಮಾನದಂಡಗಳ ಆಧಾರದಲ್ಲಾಗಿರಲಿಲ್ಲ. ಭಾಷೆಯು ಆಶಯ ವಿನಿಮಯ ಮತ್ತು ಸಂಸ್ಕೃತಿಯ ರೂಪೀಕರಣದಲ್ಲಿ ಪ್ರಬಲವಾದ ಪ್ರಭಾವ ಬೀರುವುದರಿಂದ ಭಾಷೆಯ ಆಧಾರದಲ್ಲೇ ಆಡಳಿತ ಪ್ರದೇಶಗಳನ್ನು ನಿರ್ಧರಿಸಬೇಕೆಂಬ ಬಲವಾದ ಅಭಿಪ್ರಾಯವು ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಮೂಡಿಬಂದಿತ್ತು. ರಾಷ್ಟ್ರೀಯ ಚಳುವಳಿಯ ಕಡೆಗೆ ಜನರನ್ನು ಆಕರ್ಷಿಸುವುದಕ್ಕಾಗಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಮಾತೃಭಾಷೆಗೆ ಆದ್ಯತೆಯನ್ನು ನೀಡಿ ಆಶಯಗಳನ್ನು ಪ್ರಚಾರ ಮಾಡಿತು. 1920 ರ ನಾಗಪುರ ಕಾಂಗ್ರೆಸ್

ಸಮ್ಮೇಳನದಲ್ಲಿ ಭಾಷೆಯ ಆಧಾರದಲ್ಲಿ ಕಾಂಗ್ರೆಸ್ ಸಮಿತಿಗಳನ್ನು ರೂಪಿಸಲು ತೀರ್ಮಾನಿಸಿದರು.

ಸ್ವಾತಂತ್ರ್ಯ ನಂತರ ಭಾಷೆಯ ಆಧಾರದಲ್ಲಿ ಆದ ರಾಜ್ಯಗಳ ಪುನರ್ವಿಂಗಡಣೆಗೆ ಸಂಬಂಧಿಸಿದ ಪ್ರಮುಖ ಹಂತಗಳನ್ನು ಕೆಳಗೆ ಕೊಡಲಾಗಿದೆ.

- ರಾಜ್ಯಗಳ ಪುನರ್ವಿಂಗಡಣೆಯ ಕುರಿತು ಅಧ್ಯಯನ ಮಾಡಲು ಸಂವಿಧಾನ ರಚನಾ ಸಮಿತಿಯು 1948ರಲ್ಲಿ ಎಸ್.ಕೆ. ಧರ್ ಅವರ ಅಧ್ಯಕ್ಷತೆಯಲ್ಲಿ ಭಾಷಾವಾರು ಪ್ರಾಂತ್ಯ ಆಯೋಗವನ್ನು ನೇಮಿಸಿತು.
- ಭಾಷಾವಾರು ರಾಜ್ಯಗಳು ಬೇಕೆಂಬ ಬಲವಾದ ಬೇಡಿಕೆಯನ್ನು ಪರಿಶೀಲಿಸಿ ವರದಿಯನ್ನು ಸಲ್ಲಿಸಲು ಜವಾಹರಲಾಲ್ ನೆಹರು, ಸರ್ದಾರ್ ವಲ್ಲಭಭಾಯಿ ಪಟೇಲ್, ಪಟ್ಟಾಭಿ ಸೀತಾರಾಮಯ್ಯ ಎಂಬವರನ್ನೊಳಗೊಂಡ (ಜೆ.ವಿ.ಪಿ) ಸಮಿತಿಯನ್ನು 1948ರಲ್ಲಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ನೇಮಿಸಿತು.
- ತೆಲುಗು ಭಾಷೆ ಮಾತನಾಡುವವರಿಗೆ ಪ್ರತ್ಯೇಕ ಆಂಧ್ರ ರಾಜ್ಯ ಬೇಕೆಂಬ ಬೇಡಿಕೆ ತೀವ್ರಗೊಂಡು 1952 ರಲ್ಲಿ ಪೋಟ್ಟಿ ಶ್ರೀರಾಮುಲು ಈ ಬೇಡಿಕೆಗಾಗಿ ಉಪವಾಸ ಸತ್ಯಾಗ್ರಹ ಮಾಡಿ ಮರಣವನ್ನಪ್ಪಿದರು. ಅನಂತರ ನಡೆದ ಆಂದೋಲನದ ಪರಿಣಾಮವಾಗಿ 1953 ಅಕ್ಟೋಬರ್ 1 ರಂದು ಆಂಧ್ರಪ್ರದೇಶ ಎಂಬ ರಾಜ್ಯವು ಅಸ್ತಿತ್ವಕ್ಕೆ ಬಂತು.
- ಕೇಂದ್ರ ಸರಕಾರವು 1953ರಲ್ಲಿ ನ್ಯಾಯಮೂರ್ತಿ ಫಜಲ್ ಅಲಿಯವರ ನೇತೃತ್ವದಲ್ಲಿ ಸರ್ದಾರ್ ಕೆ.ಎಂ. ಪಣಿಕ್ಕರ್, ಎಚ್.ಎನ್. ಕುಂಜ್ರು ಎಂಬವರನ್ನೊಳಗೊಂಡ ರಾಜ್ಯ ಪುನರ್ ವಿಂಗಡಣಾ ಆಯೋಗವನ್ನು (State Reorganisation Commission) ನೇಮಿಸಿತು.
- ರಾಜ್ಯಗಳ ಪುನರ್ ವಿಂಗಡಣಾ ಕಾನೂನನ್ನು 1956ರಲ್ಲಿ ಸಂಸತ್ತು ಅಂಗೀಕರಿಸಿದ ಆಧಾರದಲ್ಲಿ 1956 ನವೆಂಬರ್ 1 ರಂದು 14 ಭಾಷಾವಾರು ರಾಜ್ಯಗಳು ಮತ್ತು 6 ಕೇಂದ್ರಾಡಳಿತ ಪ್ರದೇಶಗಳು ರೂಪುಗೊಂಡವು.



ಪಟ್ಟಾಭಿ ಸೀತಾರಾಮಯ್ಯ



ನ್ಯಾಯಮೂರ್ತಿ ಫಜಲ್ ಅಲಿ



ಸರ್ದಾರ್ ಕೆ.ಎಂ. ಪಣಿಕ್ಕರ್



ಎಚ್.ಎನ್. ಕುಂಜ್ರು

1956 ರಲ್ಲಿ ರೂಪುಗೊಂಡ ರಾಜ್ಯಗಳು ಯಾವುವು? ಪ್ರತಿಯೊಂದು ರಾಜ್ಯದ ಭಾಷೆಗಳನ್ನು ಕಂಡುಹಿಡಿದು ಪಟ್ಟಿ ಮಾಡಿರಿ.

## ಭಾರತದ ಆರ್ಥಿಕತೆಯನ್ನು ಬಲಪಡಿಸುವಿಕೆ

> **'ನಾವು ರಾಜಕೀಯವಾಗಿ ಸ್ವತಂತ್ರರಾಗಿರಬಹುದು ಆದರೆ ನಮ್ಮ ಸ್ವಾತಂತ್ರ್ಯಕ್ಕಾಗಿರುವ ಹೋರಾಟವು ಆ ಪದದ ಯಾವುದೇ ಸರಿಯಾದ ಅರ್ಥ ಮತ್ತು ತಿರುಳಿನ ಪ್ರಕಾರ ಕೊನೆಗೊಳ್ಳಲಿಲ್ಲ, ಅದರ ಆರ್ಥಿಕ ಅರ್ಥ ಇನ್ನೂ ಪೂರ್ಣಗೊಂಡಿಲ್ಲ...'**
>
> **(1949ರಲ್ಲಿ ಜವಾಹರಲಾಲ್ ನೆಹರು ಮುಖ್ಯಮಂತ್ರಿಗಳಿಗೆ ಬರೆದ ವಿಶೇಷ ಪತ್ರ)**
> Aditya Mukherjee, *Nehru's India*

### ಭಾರತದ ಯೋಜನೆಯ ಮೈಲುಗಲ್ಲುಗಳು

- 1938ರಲ್ಲಿ ರೂಪಿಸಿದ ರಾಷ್ಟ್ರೀಯ ಯೋಜನಾ ಸಮಿತಿ (National Planning Committee)
- 1944ರಲ್ಲಿ ತಯಾರಿಸಿದ ಬಾಂಬೆ ಪ್ಲಾನ್
- ಭಾರತದ ಭವಿಷ್ಯದ ಅರ್ಥ ವ್ಯವಸ್ಥೆಯ ಕುರಿತಾದ ದೃಷ್ಟಿಕೋನಗಳನ್ನು ಪ್ರಸ್ತುತಪಡಿಸಿದ ಎಂ.ಎನ್. ರಾಯ್‌ರ ಜನಪರ ಯೋಜನೆ.
- ಗಾಂಧೀಜಿಯ ಆಶಯಾಧರಿತ ಜೆ.ಸಿ. ಕುಮರಪ್ಪನ ಯೋಜನೆ,
- ನೆಹರೂರವರ ಅಧ್ಯಕ್ಷತೆಯಲ್ಲಿ 1950 ಮಾರ್ಚ್ 15ರಂದು ನೇಮಕಗೊಂಡ ರಾಷ್ಟ್ರೀಯ ಯೋಜನಾ ಆಯೋಗ (National Planning Commission)
- 1951 ರಿಂದ ಆರಂಭಿಸಿದ ಪಂಚವಾರ್ಷಿಕ ಯೋಜನೆಗಳು
- 2015ರಲ್ಲಿ ಜಾರಿಗೆ ಬಂದ ನೀತಿ ಆಯೋಗ

**‘ಅಣೆಕಟ್ಟುಗಳು - ಆಧುನಿಕ ಭಾರತದ ಕ್ಷೇತ್ರಗಳು’**
**(ಜವಾಹರ್‌ಲಾಲ್ ನೆಹರು)**



ಭಾರತದ ಪ್ರಧಾನಮಂತ್ರಿಯಾಗಿದ್ದ ಜವಾಹರ್ ಲಾಲ್ ನೆಹರೂರವರ ನೇತೃತ್ವದಲ್ಲಿ 1959ರಲ್ಲಿ ದಾಮೋದರ ನದಿಗೆ ಕಟ್ಟಿದ ಪಾಂಜೇತ್ ಅಣೆಕಟ್ಟನ್ನು (ಇಂದಿನ ಜಾರ್ಖಂಡ್) ಸಂತಾಳ ಬುಡಕಟ್ಟಿನ ಬುಧಿನಿ ಮೆಜ್ ಹಾನೆಯಿಂದ ಉದ್ಘಾಟನೆ ಮಾಡಿಸುತ್ತಿದ್ದಾರೆ.

ಬ್ರಿಟಿಷರ ಆಳ್ವಿಕೆಯ ಪರಿಣಾಮವಾಗಿ ನಾಶವಾದ ಭಾರತದ ಆರ್ಥಿಕತೆಯನ್ನು ಪುನರುಜ್ಜೀವನ ಗೊಳಿಸಬೇಕಾದುದರ ಅನಿವಾರ್ಯತೆಯನ್ನು ನೆಹರೂರವರ ಪತ್ರವು ಸೂಚಿಸುತ್ತದೆ.

1947ರಲ್ಲಿಯೇ ನಾವು ಸ್ವಾತಂತ್ರ್ಯವನ್ನು ಪಡೆದಿದ್ದರೂ ಭಾರತವು ಪರಿಹರಿಸಬೇಕಾಗಿದ್ದ ಅನೇಕ ಆರ್ಥಿಕ ಸಮಸ್ಯೆಗಳಿದ್ದುವು. ಅವುಗಳನ್ನು ಹೇಗೆ ಬಗೆಹರಿಸಿದೆವೆಂಬುದನ್ನು ನೋಡೋಣ. ಸೋವಿಯತ್ ಯೂನಿಯನ್ನಿನ ಆರ್ಥಿಕ ಯೋಜನೆಯ ಮಾದರಿಯಲ್ಲಿ ಭಾರತದಲ್ಲಿ ಯೋಜನಾ ಆಯೋಗವನ್ನು ರೂಪೀಕರಿಸಲು ನೆಹರು ನೇತೃತ್ವ ವಹಿಸಿದರು. ಪರಿಣಾಮವಾಗಿ ಸ್ವಾತಂತ್ರ್ಯಾ ನಂತರದ ಭಾರತವು ಸಾರ್ವಜನಿಕ ವಲಯಕ್ಕೆ ಒತ್ತು ನೀಡುವ ಒಂದು ಮಿಶ್ರ ಆರ್ಥಿಕ ವ್ಯವಸ್ಥೆಯನ್ನು ಸ್ವೀಕರಿಸಿಕೊಂಡಿತು.

ಆಹಾರದ ಕೊರತೆ ಮತ್ತು ಬಡತನವು ಸ್ವಾತಂತ್ರ್ಯಾ ನಂತರದ ಭಾರತವು ಎದುರಿಸಿದ ಪ್ರಮುಖ ಸಮಸ್ಯೆಗಳಾಗಿದ್ದವು. ಈ ಸಮಸ್ಯೆಗಳನ್ನು ಪರಿಹರಿಸುವುದಕ್ಕಾಗಿ ಒಂದನೇ ಪಂಚವಾರ್ಷಿಕ ಯೋಜನೆಯಲ್ಲಿ ಕೃಷಿಯ ಅಭಿವೃದ್ಧಿಗೆ ಒತ್ತು ನೀಡಲಾಯಿತು. ಕೃಷಿ ಮತ್ತು ಕೈಗಾರಿಕಾ ವಲಯಗಳ ಪ್ರಗತಿಗಾಗಿ ನೀರಾವರಿ ಸೌಕರ್ಯಗಳು ಮತ್ತು ಚೈತನ್ಯದ ಉತ್ಪಾದನೆಯು ಅತ್ಯಗತ್ಯವಾಗಿದ್ದವು. ಇದಕ್ಕಾಗಿ ದೇಶದ ವಿವಿಧೆಡೆಗಳಲ್ಲಿ ಅಣೆಕಟ್ಟುಗಳನ್ನು ನಿರ್ಮಿಸುವ ಪ್ರಯತ್ನಗಳನ್ನು ಆರಂಭಿಸಲಾಯಿತು. ಸಟ್ಲೆಜ್ ನದಿಯಲ್ಲಿರುವ ಭಕ್ರಾನಂಗಲ್, ದಾಮೋದರ ನದಿ ಕಣಿವೆ ಯೋಜನೆ, ಮಹಾನದಿಯಲ್ಲಿರುವ ಹಿರಾಕುಡ್ ಎಂಬಿವುಗಳು ಆ ಕಾಲದಲ್ಲಿ ನಿರ್ಮಾಣಗೊಂಡ ಪ್ರಮುಖ ನದಿ ಕಣಿವೆ ಯೋಜನೆಗಳಾಗಿವೆ.

ಆರ್ಥಿಕ ಬೆಳವಣಿಗೆಯನ್ನು ಖಚಿತಪಡಿಸಲು ಮತ್ತು ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಲು ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಕೈಗಾರಿಕಾ ವಲಯದ ಅಭಿವೃದ್ಧಿಗೆ ಪ್ರಾಮುಖ್ಯ ನೀಡಲಾಯಿತು. ಪಂಚವಾರ್ಷಿಕ ಯೋಜನೆಗಳ ಮೂಲಕ ಸಾರ್ವಜನಿಕ ವಲಯವನ್ನು ಬಲಪಡಿಸುವುದರೊಂದಿಗೆ ದೇಶದ ಪ್ರಗತಿಯನ್ನು ತ್ವರಿತ ಗೊಳಿಸುವುದು ಭಾರತದ ಗುರಿಯಾಗಿದೆ.

ವಿದೇಶೀ ರಾಷ್ಟ್ರಗಳ ಆರ್ಥಿಕ - ತಾಂತ್ರಿಕ ಸಹಾಯದೊಂದಿಗೆ ಸಾರ್ವಜನಿಕ ವಲಯದಲ್ಲಿ ಕಬ್ಬಿಣ - ಉಕ್ಕು ಕೈಗಾರಿಕೆಗಳನ್ನು ಆರಂಭಿಸಲಾಯಿತು ಅವುಗಳಲ್ಲಿ ಪ್ರಮುಖವಾದವುಗಳನ್ನು ಕೆಳಗೆ ಕೊಡಲಾಗಿದೆ.

| ಕಬ್ಬಿಣ - ಉಕ್ಕು ಕೈಗಾರಿಕೆ | ಇರುವ ರಾಜ್ಯ | ನೆರವು ನೀಡಿದ ದೇಶ |
|---|---|---|
| • ರೂರ್ಕೆಲಾ ಕಬ್ಬಿಣ-ಉಕ್ಕು ಕೈಗಾರಿಕೆ | • ಒಡಿಶಾ | • ಜರ್ಮನಿ |
| • ಭಿಲಾಯ್ ಕಬ್ಬಿಣ-ಉಕ್ಕು ಕೈಗಾರಿಕೆ | • ಛತ್ತೀಸ್ ಘಡ | • ಸೋವಿಯತ್ ಯೂನಿಯನ್ |
| • ದುರ್ಗಾಪುರ್ ಕಬ್ಬಿಣ-ಉಕ್ಕು ಕೈಗಾರಿಕೆ | • ಪಶ್ಚಿಮ ಬಂಗಾಳ | • ಯುನೈಟೆಡ್ ಕಿಂಗ್‌ಡಂ (ಇಂಗ್ಲೆಂಡ್) |
| • ಬೊಕಾರೋ ಕಬ್ಬಿಣ-ಉಕ್ಕು ಕೈಗಾರಿಕೆ | • ಜಾರ್ಖಂಡ್ | • ಸೋವಿಯತ್ ಯೂನಿಯನ್ |

ನಂತರದ ಯೋಜನೆಗಳಲ್ಲಿ ಬಡತನ ನಿರ್ಮೂಲನೆ, ಆಹಾರ ಸ್ವಾವಲಂಬನೆ, ಶಿಕ್ಷಣ, ಚೈತನ್ಯದ ಉತ್ಪಾದನೆ ಎಂಬೀ ವಲಯಗಳಿಗೆ ಪ್ರಾಧಾನ್ಯವನ್ನು ನೀಡಲಾಯಿತು. ಸ್ವತಂತ್ರ ಭಾರತದಲ್ಲಿ ಭೂ ಸುಧಾರಣೆ, ಕೃಷಿ ಮತ್ತು ಬ್ಯಾಂಕಿಂಗ್ ಕ್ಷೇತ್ರಗಳಲ್ಲಿಯೂ ಗಮನಾರ್ಹವಾದ ಬದಲಾವಣೆಗಳು ಉಂಟಾದವು.

ಪಂಚವಾರ್ಷಿಕ ಯೋಜನೆಗಳ ಮೂಲಕ ಸ್ವತಂತ್ರ ಭಾರತದ ಆರ್ಥಿಕತೆಯನ್ನು ಭದ್ರಗೊಳಿಸಲು ಸಾಧ್ಯವಾಯಿತೇ? ತರಗತಿಯಲ್ಲಿ ಒಂದು ಪ್ಯಾನಲ್ ಚರ್ಚೆ ಆಯೋಜಿಸಿರಿ.

## ಭೂ ಸುಧಾರಣೆ (Land Reforms)

ಭೂ ಸುಧಾರಣೆಯು ಸ್ವತಂತ್ರ ಭಾರತದಲ್ಲಿ ಕೃಷಿ ವಲಯದಲ್ಲಿ ಗಮನಾರ್ಹವಾದ ಬದಲಾವಣೆಗೆ ನಾಂದಿ ಹಾಡಿದ ಚಳುವಳಿಯಾಗಿತ್ತು. ವ್ಯಕ್ತಿಗಳಿಗೆ ತಮ್ಮ ವಶದಲ್ಲಿರಿಸಿಕೊಳ್ಳಬಹುದಾದ ಭೂಮಿಗೆ ಮಿತಿಯನ್ನು ನಿಶ್ಚಯಿಸುವುದು ಇದರ ಮುಖ್ಯ ಗುರಿಯಾಗಿತ್ತು. ಸ್ವಾತಂತ್ರ್ಯ ಪೂರ್ವದಲ್ಲಿ ಭಾರತದಲ್ಲಿ ಭೂಸುಧಾರಣೆ ಎಂಬ ಆಶಯವು ರೂಪುಗೊಂಡಿತ್ತು. ನೆಹರೂರವರ ಅಧ್ಯಕ್ಷತೆಯಲ್ಲಿ ಸೇರಿದ ಸಮಿತಿಯ ಶಿಫಾರಸಿನ ಮೇರೆಗೆ ಆರ್ಥಿಕ ಬೆಳವಣಿಗೆಯನ್ನು ಉದ್ದೇಶವಾಗಿರಿಸಿಕೊಂಡು ಜೆ.ಸಿ ಕುಮರಪ್ಪನ ನೇತೃತ್ವದಲ್ಲಿ ಒಂದು ಕೃಷಿ ಸುಧಾರಣಾ ಸಮಿತಿಯನ್ನು (Agrarian Reforms Committee) ನೇಮಿಸಲಾಯಿತು. ಈ ಸಮಿತಿಯ ವರದಿಯ ಆಧಾರದಲ್ಲಿ ಭೂ ಒಡೆಯರಿಗೆ ತಮ್ಮ ವಶದಲ್ಲಿರಿಸಬಹುದಾದ ಭೂಮಿಯ ಮಿತಿಯನ್ನು

### ಭೂದಾನ ಚಳುವಳಿ (Bhoodan Movement)



ವಿನೋಬಾ ಭಾವೆ

ಭೂದಾನ ಚಳುವಳಿಯು ಕಾನೂನು ನಿರ್ಮಾಣದ ಮೂಲಕವಲ್ಲದೆ ನೇರವಾಗಿ ಭೂ ಸುಧಾರಣೆಯನ್ನು ಜಾರಿಗೊಳಿಸುವುದಕ್ಕಾಗಿ ವಿನೋಬಾ ಭಾವೆಯ ನೇತೃತ್ವದಲ್ಲಿ ಆರಂಭಿಸಿದ ಚಳುವಳಿಯಾಗಿದೆ. ಇದಕ್ಕಾಗಿ ವಿನೋಬಾಭಾವೆ ಮತ್ತು ಅನುಯಾಯಿಗಳು ಗ್ರಾಮ ಗ್ರಾಮಗಳಲ್ಲಿ ಪಾದಯಾತ್ರೆಯನ್ನು ನಡೆಸಿದರು. ಧಾರಾಳ ಭೂಪ್ರದೇಶಗಳನ್ನು ಹೊಂದಿದ್ದ ಒಡೆಯರನ್ನು ಸಂಪರ್ಕಿಸಿ ಅವರ ವಶದಲ್ಲಿರುವ ಭೂಮಿಯ ಆರರಲ್ಲಿ ಒಂದು ಭಾಗವನ್ನು ಭೂದಾನವಾಗಿ ನೀಡುವಂತೆ ಪ್ರೇರೇಪಿಸಿದರು. ಹೀಗೆ ಲಭಿಸಿದ ಭೂಮಿಯನ್ನು ಭೂರಹಿತರಿಗೆ ವಿತರಣೆ ಮಾಡಿದರು. ಭೂಸುಧಾರಣಾ ಕಾನೂನು ಜಾರಿಗೆ ಬರುವುದರೊಂದಿಗೆ ಭೂದಾನ ಚಳುವಳಿಯ ಪ್ರಾಮುಖ್ಯವು ನಷ್ಟವಾಯಿತು.

ನಿಶ್ಚಯಿಸಿ ಹೆಚ್ಚುವರಿ ಭೂಮಿಯನ್ನುಅವರ ಕೈಯಿಂದ ವಶಪಡಿಸಿ ಭೂರಹಿತರಾದ ಕೃಷಿಕರಿಗೆ ವಿತರಣೆ ಮಾಡುವ ಕಾನೂನನ್ನು ಜಾರಿಗೊಳಿಸಲಾಯಿತು. ಇದು ಒಂದು ಹಂತದವರೆಗೆ ಬಡತನ ನಿರ್ಮೂಲನೆಗೂ ಆಹಾರ ಧಾನ್ಯಗಳ ಉತ್ಪಾದನೆಯನ್ನು ಹೆಚ್ಚಿಸಲೂ ಸಹಾಯಕ ವಾಯಿತು.



ಡಾ. ಎಂ ಎಸ್ ಸ್ವಾಮಿನಾಥನ್

## ಕ್ರಾಂತಿಗಳ ಮೂಲಕ ಆಹಾರೋತ್ಪಾದನೆ

ಆಹಾರೋತ್ಪಾದನಾ ವಲಯದಲ್ಲಿ ಸ್ವಾವಲಂಬನೆಯನ್ನು ಗಳಿಸುವುದಕ್ಕಾಗಿ 1960 ರ ನಂತರ ಭಾರತವು ಜಾರಿಗೊಳಿಸಿದ ಯೋಜನೆಗಳು ಗಮನಾರ್ಹವಾದ ಬದಲಾವಣೆಗಳನ್ನುಂಟುಮಾಡಿದ ಕಾರಣ ಇವುಗಳನ್ನು ಕ್ರಾಂತಿಗಳೆಂದು ಕರೆಯುತ್ತಾರೆ. ನಮ್ಮ ದೇಶದ ನಾಯಕರ ಮತ್ತು ವಿಜ್ಞಾನಿಗಳ ಒಗ್ಗಟ್ಟಿನ ಪ್ರಯತ್ನವೂ ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನುಗಳಿಸಲು ಭಾರತಕ್ಕೆ ಸಹಾಯಕವಾಯಿತು. ಕೃಷಿ ವಲಯದ ಅಭಿವೃದ್ಧಿ ಹಾಗೂ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಸ್ವಯಂ ಪರ್ಯಾಪ್ತತೆಯನ್ನು ಗುರಿಯಾಗಿರಿಸಿಕೊಂಡು ಹಸಿರು ಕ್ರಾಂತಿಯನ್ನು (Green Revolution) ಆರಂಭಿಸಲಾಯಿತು. ಅತ್ಯುತ್ಪಾದನಾ ಸಾಮರ್ಥ್ಯವಿರುವ ಬೀಜದ ತಳಿಗಳು, ನೀರಾವರಿ ಸೌಕರ್ಯಗಳು, ರಾಸಾಯನಿಕ ಗೊಬ್ಬರಗಳು, ಕೀಟನಾಶಕಗಳು, ಆಧುನಿಕ ಯಂತ್ರೋಪಕರಣಗಳು ಇತ್ಯಾದಿಗಳನ್ನು ಉಪಯೋಗಿಸಿಕೊಂಡು ಅಲ್ಪಾವಧಿಯಲ್ಲಿ ಕೃಷಿ ವಲಯದಲ್ಲಿ ಗಳಿಸಿದ ಪ್ರಗತಿಯನ್ನುಹಸಿರು ಕ್ರಾಂತಿ ಎಂದು ಕರೆಯುತ್ತಾರೆ. 1960 ರಿಂದ 1970ರ ವರೆಗೆ ಮತ್ತು 1970 ರಿಂದ 1980 ರ ವರೆಗಿನ ಎರಡು ಹಂತಗಳಲ್ಲಿ ಹಸಿರು ಕ್ರಾಂತಿ ನಡೆಯಿತು. ಡಾ. ಎಂ.ಎಸ್. ಸ್ವಾಮಿನಾಥನ್‌ರವರನ್ನು ಭಾರತದ ಹಸಿರು ಕ್ರಾಂತಿಯ ಪಿತ ಎಂದು ಕರೆಯುತ್ತಾರೆ.

ಹಸಿರು ಕ್ರಾಂತಿಯ ನಂತರ ಹಾಲು ಮತ್ತು ಹಾಲು ಉತ್ಪನ್ನಗಳ ಉತ್ಪಾದನೆಯನ್ನು ಹೆಚ್ಚಿಸುವ ಗುರಿಯನ್ನು ಇಟ್ಟುಕೊಂಡು ಜಾರಿಗೊಳಿಸಿದ ಧವಳ ಕ್ರಾಂತಿ (White Revolution) ಮತ್ತು ಮತ್ಸ್ಯೋದ್ಯಮದ ಪ್ರಗತಿಯನ್ನು ಗುರಿಯಾಗಿಟ್ಟುಕೊಂಡು ಜಾರಿಗೊಳಿಸಿದ ನೀಲಕ್ರಾಂತಿಯನ್ನು (Blue Revoution) ಭಾರತದಲ್ಲಿ ಯಶಸ್ವಿಯಾಗಿ ಜಾರಿಗೊಳಿಸಲಾಯಿತು. ಆ ಮೂಲಕ ದೇಶದಲ್ಲಿ ಅನೇಕ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಮತ್ತು ದೇಶದ ಆರ್ಥಿಕ ಬೆಳವಣಿಗೆಯನ್ನು ಖಚಿತಪಡಿಸಲು ಸಾಧ್ಯವಾಯಿತು.

### ಧವಳ ಕ್ರಾಂತಿ



ಡಾ. ವರ್ಗೀಸ್ ಕುರಿಯನ್

ಮಲಯಾಳಿಯಾದ ಡಾ. ವರ್ಗೀಸ್ ಕುರಿಯನ್ ರ ನೇತೃತ್ವದಲ್ಲಿ ಭಾರತದಲ್ಲಿ ಹಾಲು ಉತ್ಪಾದನಾ ಕ್ಷೇತ್ರದಲ್ಲಿ ಆಮೂಲಾಗ್ರ ಬದಲಾವಣೆಗಳನ್ನುಂಟುಮಾಡಲು ಧವಳ ಕ್ರಾಂತಿಯನ್ನು ಆರಂಭಿಸಲಾಯಿತು. ಗುಜರಾತಿನ ಆನಂದ್ ಎಂಬ ನಗರದಲ್ಲಿ 'ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘ' (District Co-oparative Milk Producers Union Ltd) ಎಂಬ ಹೆಸರಿನಲ್ಲಿ ಒಂದು ಕ್ಷೀರೋತ್ಪಾದನಾ ಸಂಘವು ಕಾರ್ಯಾರಂಭಗೊಂಡಿತು. ಕ್ರಮೇಣ ಇದು ಅಮುಲ್ (Anand Milk Union Limited) ಎಂಬ ಪ್ರಸಿದ್ಧವಾದ ಕ್ಷೀರೋತ್ಪಾದನ ಸಂಘವಾಗಿ ಬದಲಾಯಿತು.

ಕೃಷಿ ವಲಯದಲ್ಲಿ ಉಂಟಾದ ಕ್ರಾಂತಿಯು ಆಹಾರ ಉತ್ಪಾದನೆಯನ್ನು ಹೆಚ್ಚಿಸಲು ಹೇಗೆ ಸಹಾಯಕವಾಯಿತು?

## ಬ್ಯಾಂಕುಗಳ ರಾಷ್ಟ್ರೀಕರಣ (Nationalisation of Banks)

ಸ್ವತಂತ್ರ ಭಾರತದ ಬ್ಯಾಂಕುಗಳು ಬೃಹತ್ ಕೈಗಾರಿಕೋದ್ಯಮಿಗಳ ಮತ್ತು ಶ್ರೀಮಂತರಾದ ವ್ಯಕ್ತಿಗಳ ಒಡೆತನದಲ್ಲಿದ್ದು ಬ್ಯಾಂಕುಗಳು ಶ್ರೀಮಂತರಿಗೆ ಪರಿಗಣನೆಯನ್ನು ನೀಡುತ್ತಿದ್ದುದರಿಂದ ಕೃಷಿಕರಿಗೂ ಜನಸಾಮಾನ್ಯರಿಗೂ ಸಾಲ ಮತ್ತು ಬ್ಯಾಂಕಿಂಗ್ ಸೇವೆಗಳು

ಲಭ್ಯವಾಗಲಿಲ್ಲ. ನಂತರ 1969ರಲ್ಲಿ ಇಂದಿರಾಗಾಂಧಿಯ ನೇತೃತ್ವದ ಭಾರತ ಸರಕಾರವು ಹದಿನಾಲ್ಕು ಪ್ರಮುಖ ಬ್ಯಾಂಕುಗಳ ಒಡೆತನವನ್ನು ಕೈಗೆತ್ತಿಕೊಂಡಿತು. ಇದನ್ನು ಬ್ಯಾಂಕುಗಳ ರಾಷ್ಟ್ರೀಕರಣ ಎನ್ನುತ್ತಾರೆ. ಅನಂತರದ ಕಾಲದಲ್ಲಿ ಇನ್ನೂ ಆರು ಬ್ಯಾಂಕುಗಳ ಒಡೆತನವನ್ನು ಸರಕಾರವು ಕೈಗೆತ್ತಿಕೊಂಡಿತು.

ಸ್ವಾತಂತ್ರ್ಯ ನಂತರ ಭಾರತವು ಯೋಜನಾಬದ್ಧವಾದ ಒಂದು ಆರ್ಥಿಕ ನೀತಿಯನ್ನು ಅನುಸರಿಸುತ್ತಿದೆ ಎಂದು ನಾವು ತಿಳಿದಿದ್ದೇವೆ. ಈ ಆರ್ಥಿಕ ನೀತಿಯು ಸಾರ್ವಜನಿಕ ವಲಯವನ್ನು ಬಲಪಡಿಸಲು ಸಹಾಯ ಮಾಡಿತು. ಆದರೆ 1990ರ ದಶಕದಲ್ಲಿ ದೇಶದ ಆರ್ಥಿಕ ನೀತಿಯಲ್ಲಿ ಗಮನಾರ್ಹವಾದ ಬದಲಾವಣೆಗಳುಂಟಾದವು. ಅನಂತರ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣಗಳಂತಹ ಆರ್ಥಿಕ ಧೋರಣೆಗಳು ಪ್ರಾಮುಖ್ಯವನ್ನು ಪಡೆದುಕೊಂಡವು. ಇದರ ಪರಿಣಾಮವಾಗಿ ಸಾರ್ವಜನಿಕ ವಲಯದ ಅನೇಕ ಉದ್ಯಮಗಳು ಖಾಸಗೀಕರಣಗೊಂಡವು.

ಸ್ವಾತಂತ್ರ್ಯಾನಂತರ ಭಾರತದಲ್ಲಿ ಜಾರಿಗೊಳಿಸಲಾದ ಆರ್ಥಿಕ ಸುಧಾರಣೆಗಳ ಒಳಿತು ಕೆಡುಕುಗಳಿಗೆ ಸಂಬಂಧಿಸಿ ತರಗತಿಯಲ್ಲಿ ಒಂದು ಸಂವಾದವನ್ನು ಏರ್ಪಡಿಸಿರಿ.

## ಶಿಕ್ಷಣ

ಬ್ರಿಟಿಷ್ ಆಡಳಿತವು ಭಾರತದಲ್ಲಿ ಆಧುನಿಕ ಶಿಕ್ಷಣಕ್ಕೆ ಅಡಿಪಾಯವನ್ನು ಹಾಕಿತೆಂದು ನೀವು ಹಿಂದಿನ ತರಗತಿಗಳಲ್ಲಿ ಕಲಿತಿದ್ದೀರಲ್ಲವೇ. ಸ್ವಾತಂತ್ರ್ಯ ಲಭಿಸಿದ ನಂತರ ಭಾರತೀಯ ಶಿಕ್ಷಣದ ಕುರಿತು ಅಧ್ಯಯನ ಮಾಡಿ ಶಿಫಾರಸುಗಳನ್ನು ಸಲ್ಲಿಸಲು ಸರಕಾರವು ಹಲವು ಹಂತಗಳಲ್ಲಾಗಿ ವಿವಿಧ ಆಯೋಗಗಳನ್ನು ನೇಮಿಸಿತು.

ಸ್ವತಂತ್ರ ಭಾರತದ ಪ್ರಮುಖ ಶಿಕ್ಷಣ ಆಯೋಗಗಳು ಮತ್ತು ಅವು ಒತ್ತು ನೀಡಿದ ಪ್ರಮುಖ ಕ್ಷೇತ್ರಗಳನ್ನು ಕೆಳಗೆ ಕೊಡಲಾಗಿದೆ.

| ಶಿಕ್ಷಣ ಆಯೋಗಗಳು/ಶಿಕ್ಷಣ ನೀತಿಗಳು | ವರ್ಷ | ಒತ್ತು ನೀಡಿದ ವಲಯಗಳು |
|---|---|---|
| ಡಾ. ರಾಧಾಕೃಷ್ಣನ್ ಆಯೋಗ | 1948 | ವಿಶ್ವವಿದ್ಯಾಲಯ ಶಿಕ್ಷಣ |
| ಡಾ. ಲಕ್ಷ್ಮಣ ಸ್ವಾಮಿ ಮುದಲಿಯಾರ್ ಆಯೋಗ | 1952 | ಸೆಕೆಂಡರಿ ಶಿಕ್ಷಣ |
| ಡಾ. ಡಿ.ಎಸ್. ಕೊಠಾರಿ ಆಯೋಗ | 1964 | ಶಿಕ್ಷಣದ ರಾಷ್ಟ್ರೀಯ ಮಾದರಿ |
| ರಾಷ್ಟ್ರೀಯ ಶಿಕ್ಷಣ ನೀತಿ | 1986 | ಪ್ರಾಥಮಿಕ ಶಿಕ್ಷಣ, ಉದ್ಯೋಗ ಆಧಾರಿತ ಶಿಕ್ಷಣ |
| ರಾಷ್ಟ್ರೀಯ ಶಿಕ್ಷಣ ನೀತಿ | 2020 | ಪ್ರೀ-ಪ್ರೈಮರಿಯಿಂದ ಹೈಯರ್ ಸೆಕೆಂಡರಿವರೆಗಿನ ಶಿಕ್ಷಣ, ಉನ್ನತ ಶಿಕ್ಷಣ |

'ಸ್ವತಂತ್ರಭಾರತದಶೈಕ್ಷಣಿಕಪ್ರಗತಿ' ಎಂಬ ವಿಷಯದಲ್ಲಿ ತರಗತಿಯಲ್ಲಿ ಒಂದು ವಿಚಾರಗೋಷ್ಠಿಯನ್ನು ಆಯೋಜಿಸಿರಿ.

## ವಿಜ್ಞಾನ ಮತ್ತು ತಂತ್ರಜ್ಞಾನದ ಮೂಲಕ ಜ್ಞಾನದ ಕ್ರಾಂತಿ

**"ವಿಜ್ಞಾನವನ್ನು ಪ್ರಗತಿ ಹೊಂದಲು ಅನುವು ಮಾಡಿಕೊಟ್ಟರೆ ಅದರ ಪ್ರಗತಿಗೆ ನಿರ್ದಿಷ್ಟವಾದ ಯಾವುದೇ ಸೀಮೆಯಿಲ್ಲ."**

(**ಜವಾಹರ್ ಲಾಲ್ ನೆಹರು**, *ಡಿಸ್ಕವರಿ ಆಫ್ ಇಂಡಿಯಾ*)


ಹೋಮಿ ಜೆ ಭಾಭಾ


ಮೇಘನಾಥ್ ಸಾಹ

ನೀವು ಈಗ ಓದಿದ ಮಾತುಗಳು ವೈಜ್ಞಾನಿಕ ಅಭಿವೃದ್ಧಿಯು ಭಾರತದ ಭವಿಷ್ಯವನ್ನು ನಿರ್ಧರಿಸುವಲ್ಲಿ ಅವಿಭಾಜ್ಯ ಘಟಕವಾಗಿದೆ ಎಂದು ಗುರುತಿಸಿದ ಜವಾಹರ್ ಲಾಲ್ ನೆಹರೂರವರ ಮಾತುಗಳಾಗಿವೆ. ಭಾರತದ ವಿಜ್ಞಾನ - ತಂತ್ರಜ್ಞಾನ ಕ್ಷೇತ್ರಗಳ ವಿಕಾಸ ಮತ್ತು ಪ್ರಗತಿಗೆ ಅವರು ಪ್ರೋತ್ಸಾಹವನ್ನು ನೀಡಿದರು. ಇದರೊಂದಿಗೆ ವೈಜ್ಞಾನಿಕ ಮನೋಭಾವ (Scientific Temper) ದಲ್ಲಿ ಆಧಾರಿತವಾದ ಸಮಾಜದ ಸೃಷ್ಟಿಯು ತನ್ನ ಧ್ಯೇಯವಾಗಿದೆ ಎಂದು ನಂಬಿದರು. ಇದಕ್ಕಾಗಿ ಹೋಮಿ ಜೆ ಭಾಭಾ, ಮೇಘನಾಥ್ ಸಾಹ ಮೊದಲಾದ ವೈಜ್ಞಾನಿಕ ಸಲಹೆಗಾರರ ಸೇವೆಗಳು ಅವರಿಗೆ ಲಭ್ಯವಾಗಿದ್ದವು.

ಸ್ವತಂತ್ರ ಭಾರತದಲ್ಲಿ ಜ್ಞಾನದ ಕ್ರಾಂತಿಯನ್ನು ಸೃಷ್ಟಿಸಲು ಸಹಾಯಕವಾದ ಅನೇಕ ಸಂಸ್ಥೆಗಳಿಗೆ ಈ ಕಾಲಾವಧಿಯಲ್ಲಿ ಅಡಿಪಾಯ ಹಾಕಲಾಯಿತು. ಅವುಗಳಲ್ಲಿ ಪ್ರಮುಖವಾದವುಗಳನ್ನು ಕೆಳಗೆ ಕೊಡಲಾಗಿದೆ.

- ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (IIT)
- ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ವೈರೋಲಜಿ (NIV)
- ಭಾಭಾ ಆಟೋಮಿಕ್ ರಿಸರ್ಚ್ ಸೆಂಟರ್ (BARC)
- ಆಲ್ ಇಂಡಿಯಾ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸಯನ್ಸಸ್ (AIIMS)
- ಡಿಫೆನ್ಸ್ ರಿಸರ್ಚ್ ಅಂಡ್ ಡೆವಲಪ್ಮೆಂಟ್ ಆರ್ಗನೈಸೇಷನ್ (DRDO)
- ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ (IIM)

### ನಗುತ್ತಿರುವ ಬುದ್ಧ (Smiling Buddha)

ಭಾಭಾ ಆಟೋಮಿಕ್ ಸೆಂಟರ್ ಭಾರತದಲ್ಲಿ ಪರಮಾಣು ಪರೀಕ್ಷೆಗಳಿಗೆ ನೇತೃತ್ವವನ್ನು ನೀಡುತ್ತದೆ. ಭಾರತವು ತನ್ನ ಮೊತ್ತ ಮೊದಲ ಪರಮಾಣು ಪರೀಕ್ಷೆಯನ್ನು 1974 ಮೇ 18ರಂದು ರಾಜಸ್ಥಾನದ ಪೋಖ್ರಾನ್‌ನಲ್ಲಿ ನಡೆಸಿತು. ಈ ಪರಮಾಣು ಪ್ರಯೋಗವನ್ನು 'ನಗುತ್ತಿರುವ ಬುದ್ಧ' ಎಂಬ ಹೆಸರಿನಲ್ಲಿ ಉಲ್ಲೇಖಿಸಲಾಗಿದೆ. ಆ ವರ್ಷದ ಬುದ್ಧ ಪೂರ್ಣಿಮೆಯಂದು ಇದನ್ನು ಪರೀಕ್ಷಿಸಿದ ಕಾರಣ ಅದಕ್ಕೆ ಈ ಹೆಸರು ಬಂತು. ಓಪರೇಷನ್ ಶಕ್ತಿ ಎಂಬುದು 1998ರಲ್ಲಿ ಪೋಖ್ರಾನ್‌ನಲ್ಲಿ ನಡೆಸಿದ ಎರಡನೇ ಪರಮಾಣು ಪರೀಕ್ಷೆಯಾಗಿದೆ.

ಭಾರತದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರಮುಖ ಸಂಸ್ಥೆಗಳ ಚಿತ್ರಗಳನ್ನು ಮತ್ತು ವಿವರಣೆಗಳನ್ನೊಳಗೊಂಡ ಡಿಜಿಟಲ್ ಮ್ಯಾಗಜಿನ್ ತಯಾರಿಸಿರಿ.

## ಬಾಹ್ಯಾಕಾಶ ಸಂಶೋಧನೆ

ಭಾರತವು ಬಾಹ್ಯಾಕಾಶ ರಂಗದಲ್ಲಿ ಪ್ರಗತಿಯನ್ನು ಹೊಂದುತ್ತಿರುವ ದೇಶವಾಗಿದೆ. ರಾಷ್ಟ್ರದ ವಿಕಾಸಕ್ಕೆ ಬಾಹ್ಯಾಕಾಶ ತಂತ್ರಜ್ಞಾನವನ್ನು ಸದುಪಯೋಗಪಡಿಸಬಹುದೆಂಬ ದೃಷ್ಟಿಕೋನವು ಭಾರತೀಯ ಬಾಹ್ಯಾಕಾಶ ಸಂಶೋಧನೆಯ ಅಡಿಪಾಯವಾಗಿದೆ. ಹೋಮಿ ಜೆ. ಭಾಭಾ, ವಿಕ್ರಂ ಸಾರಾಭಾಯಿ ಎಂಬವರು ಬಾಹ್ಯಾಕಾಶ ಸಂಶೋಧನಾ ರಂಗಕ್ಕೆ ಸ್ತುತ್ಯರ್ಹ ಕೊಡುಗೆಗಳನ್ನು ನೀಡಿದ ಭಾರತೀಯ ವಿಜ್ಞಾನಿಗಳಲ್ಲಿ ಪ್ರಮುಖರಾಗಿದ್ದಾರೆ.



ವಿಕ್ರಂ ಸಾರಾಭಾಯಿ

ನಮ್ಮ ದೇಶದಲ್ಲಿ ಬಾಹ್ಯಾಕಾಶ ಪರ್ಯಟನೆಯನ್ನು ಗುರಿಯಾಗಿಟ್ಟುಕೊಂಡು ಕಾರ್ಯಾಚರಿಸುವ ಅನೇಕ ಸಂಸ್ಥೆಗಳಿವೆ. 1969 ರಲ್ಲಿ ಬೆಂಗಳೂರು ಕೇಂದ್ರವಾಗಿ ಸ್ಥಾಪಿಸಲಾದ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ISRO) ಯು ಇಂತಹ ಪ್ರಮುಖ ಸಂಸ್ಥೆಗಳಲ್ಲೊಂದಾಗಿದೆ. ಶ್ರೀಹರಿಕೋಟದಲ್ಲಿರುವ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರ, ಹೈದರಾಬಾದ್ ಕೇಂದ್ರವಾಗಿ ಕಾರ್ಯಾಚರಿಸುತ್ತಿರುವ ನ್ಯಾಷನಲ್ ರಿಮೋಟ್ ಸೆನ್ಸಿಂಗ್ ಸೆಂಟರ್ (NRSC), ತಿರುವನಂತಪುರದಲ್ಲಿರುವ ವಿಕ್ರಂ ಸಾರಾಭಾಯಿ ಸ್ಪೇಸ್ ಸೆಂಟರ್ (VSSC) ಮುಂತಾದವು ಭಾರತೀಯ ಬಾಹ್ಯಾಕಾಶ ಸಂಶೋಧನಾ ಇಲಾಖೆಯ ನಿಯಂತ್ರಣದಲ್ಲಿ ಕಾರ್ಯಾಚರಿಸುತ್ತಿರುವ ಇತರ ಪ್ರಧಾನ ಸಂಸ್ಥೆಗಳಾಗಿವೆ.



ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರ

ಬಾಹ್ಯಾಕಾಶ ಪರ್ಯಟನೆ ಕಾರ್ಯಾಚರಣೆಗಳಲ್ಲಿ ಭಾರತವನ್ನು ವಿಶ್ವದ ಅಗ್ರಸ್ಥಾನಕ್ಕೆ ತಂದ ಹೆಮ್ಮೆಯ ಸಾಧನೆಗಳಲ್ಲಿ ಪ್ರಮುಖವಾದವುಗಳನ್ನು ಕೆಳಗೆ ಕೊಡಲಾಗಿದೆ.

- 1975 ಎಪ್ರಿಲ್ 19 ರಂದು ಭಾರತದ ಮೊದಲ ಕೃತಕ ಉಪಗ್ರಹವಾದ ಆರ್ಯಭಟದ ಉಡಾವಣಾ ಕಾರ್ಯಾಚರಣೆ
- ಚಾಂದ್ರಯಾನ I, ಚಾಂದ್ರಯಾನ II, ಚಾಂದ್ರಯಾನ III ಎಂಬೀ ಚಂದ್ರನ ಅಧ್ಯಯನ ಕಾರ್ಯಾಚರಣೆಗಳು
- 2013ರ ಮಂಗಳಯಾನ ಕಾರ್ಯಾಚರಣೆ
- ಸೌರ ಸಂಶೋಧನಾ ಕಾರ್ಯಾಚರಣೆ, ಬಾಹ್ಯಾಕಾಶ ಹವಾಮಾನ ಅಧ್ಯಯನ ಎಂಬಿವುಗಳನ್ನು ಉದ್ದೇಶವಾಗಿಟ್ಟು ಕೊಂಡಿರುವ ಆದಿತ್ಯ ಎಲ್.ಒನ್ (Adhithya L I) ಉಡಾವಣಾ ಕಾರ್ಯಾಚರಣೆ

ಭಾರತವು ಈಗ ಇವುಗಳ ಹೊರತಾಗಿ ಮಾನವರನ್ನು ಬಾಹ್ಯಾಕಾಶಕ್ಕೆ ಕಳುಹಿಸುವುದಕ್ಕಾಗಿರುವ ಗಗನ್ ಯಾನ್ ಕಾರ್ಯಾಚರಣೆಯನ್ನು ಯಶಸ್ವಿಯಾಗಿ ಪೂರ್ತಿಗೊಳಿಸುವ ಪ್ರಯತ್ನದಲ್ಲಿದೆ.

### ರಾಷ್ಟ್ರೀಯ ಬಾಹ್ಯಾಕಾಶ ದಿನ



ಚಂದ್ರನ ಮೇಲ್ಮೈಯಲ್ಲಿ ಚಾಂದ್ರಯಾನ್ IIIರ ಸಂಶೋಧನ ಪರ್ಯಟನೆಯು ಯಶಸ್ವಿಯಾಗಿ ಪೂರ್ಣಗೊಂಡ ನೆನಪಿಗಾಗಿ ಪ್ರತಿ ವರ್ಷವೂ ಭಾರತದಲ್ಲಿ ಅಗೋಸ್ತು 23ರಂದು ರಾಷ್ಟ್ರೀಯ ಬಾಹ್ಯಾಕಾಶ ದಿನವಾಗಿ ಆಚರಿಸಲಾಗುತ್ತದೆ.

### 'ಮಿಸೈಲ್ ಮ್ಯಾನ್ ಆಫ್ ಇಂಡಿಯಾ'



ಡಾ. ಎ ಪಿ ಜೆ ಅಬ್ದುಲ್ ಕಲಾಂ

ಕ್ಷಿಪಣಿ ತಂತ್ರಜ್ಞಾನ ತಜ್ಞ, ವಿಜ್ಞಾನಿ ಮತ್ತು ಸಂಶೋಧಕರಾದ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರು ಭಾರತದ ಮಾಜಿ ರಾಷ್ಟ್ರಪತಿಗಳೂ ಆಗಿದ್ದರು. ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರ, (DRDO), ಭಾರತೀಯ ಬಾಹ್ಯಾಕಾಶ ಸಂಶೋಧನಾ ಕೇಂದ್ರ (ISRO) ಎಂಬೀ ಸಂಸ್ಥೆಗಳಲ್ಲಿ ಅವರು ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದರು. ಕ್ಷಿಪಣಿ ತಂತ್ರಜ್ಞಾನಕ್ಕೆ ನೀಡಿದ ಕೊಡುಗೆಗಳಿಗಾಗಿ ಅವರನ್ನು ಭಾರತದ ಕ್ಷಿಪಣಿಗಳ ಮನುಷ್ಯ (Missile Man of India) ಎಂದು ಕರೆಯುತ್ತಾರೆ.

ಬಾಹ್ಯಾಕಾಶ ರಂಗದ ನೂತನ ಸಾಧ್ಯತೆಗಳ ಕುರಿತು ಅರ್ಥೈಸಿಕೊಳ್ಳುವುದಕ್ಕಾಗಿ ವಿಜ್ಞಾನಿಗಳೊಂದಿಗೆ ಸಂದರ್ಶನ ನಡೆಸಲು ಅಗತ್ಯವಾದ ಪ್ರಶ್ನಾವಳಿಯನ್ನು ತಯಾರಿಸಿರಿ.

## ಭಾರತದ ವಿದೇಶ ಧೋರಣೆ



ಜಾಗತಿಕ ಶಾಂತಿಯನ್ನು ಗುರಿಯಾಗಿಟ್ಟುಕೊಂಡು ರೂಪೀಕರಿಸಲಾದ ಅಲಿಪ್ತ ಚಳವಳಿಯ ಸ್ಥಾಪಕರ ಚಿತ್ರವನ್ನು ಮೇಲೆ ನೀಡಲಾಗಿದೆ. ಇವರು ಯಾರೆಂದು ತಿಳಿದುಕೊಳ್ಳಲು ಪ್ರಯತ್ನಿಸಿರಿ.

ಭಾರತದ ವಿದೇಶ ಧೋರಣೆಯ ಮುಖ್ಯಶಿಲ್ಪಿಯಾದ ಜವಾಹರ್‌ಲಾಲ್ ನೆಹರುರವರು ನಮ್ಮ ರಾಷ್ಟ್ರೀಯ ಹಿತಾಸಕ್ತಿಗಳನ್ನು ಸಂರಕ್ಷಿಸುವ ರೀತಿಯಲ್ಲಿ ಒಂದು ವಿದೇಶ ಧೋರಣೆಗೆ ರೂಪು ನೀಡಿದರು. ಭಾರತದ ವಿದೇಶ ಧೋರಣೆಯ ಮೂಲಭೂತ ತತ್ವಗಳನ್ನು ನಾವು ಪರಿಚಯಿಸಿಕೊಳ್ಳೋಣ.

- ಶಾಂತಿಯುತ ಸಹಬಾಳ್ವೆ
- ವಸಾಹತು ಶಾಹಿತ್ವ ಹಾಗೂ ವರ್ಣಭೇದಕ್ಕೆದುರಾಗಿ ಕಾರ್ಯಾಚರಿಸುವುದು
- ರಾಷ್ಟ್ರ ಸುರಕ್ಷೆ ಮತ್ತು ಪರಮಾಧಿಕಾರವನ್ನು ಸಂರಕ್ಷಿಸುವುದು.
- ಅಲಿಪ್ತ ಧೋರಣೆ
- ಪಂಚಶೀಲ ತತ್ವಗಳು

## ಪಂಚಶೀಲ ತತ್ವಗಳು

ಪಂಚಶೀಲ ತತ್ವಗಳು ಭಾರತದ ವಿದೇಶ ಧೋರಣೆಯ ಆಧಾರದಲ್ಲಿ ರೂಪುಗೊಂಡಿವೆ. 1954ರಲ್ಲಿ ಭಾರತದ ಪ್ರಧಾನ ಮಂತ್ರಿಯಾಗಿದ್ದ ಜವಾಹರ್ ಲಾಲ್ ನೆಹರು ಮತ್ತು ಚೀನಾದ

ಪ್ರಧಾನಮಂತ್ರಿಯಾಗಿದ್ದ ಚೌ ಎನ್ ಲಾಯ್ ಸಹಿ ಹಾಕಿದ ಪಂಚಶೀಲ ತತ್ವಗಳಲ್ಲಿ ಈ ಕೆಳಗೆ ಸೂಚಿಸಿರುವ ವಿಚಾರಗಳು ಒಳಗೊಂಡಿವೆ.

- ಪರಸ್ಪರ ಪ್ರಾದೇಶಿಕ ಸಮಗ್ರತೆ ಮತ್ತು ಸಾರ್ವಭೌಮತ್ವವನ್ನು ಅಂಗೀಕರಿಸುವುದು
- ಪರಸ್ಪರ ಆಕ್ರಮಿಸದಿರುವುದು
- ಆಂತರಿಕ ವಿಚಾರಗಳಲ್ಲಿ ಪರಸ್ಪರ ಹಸ್ತಕ್ಷೇಪ ಮಾಡದಿರುವುದು
- ಸಮಾನತೆ ಮತ್ತು ಪರಸ್ಪರ ಸಹಾಯವನ್ನು ಮಾಡುವುದು
- ಶಾಂತಿಯುತ ಸಹಬಾಳ್ವೆಯನ್ನು ಪಾಲಿಸುವುದು

## ಅಲಿಪ್ತ ಚಳುವಳಿ (Non Aligned Movement)

ಎರಡನೇ ಜಾಗತಿಕ ಮಹಾಯುದ್ಧದ ಬಳಿಕ ಅಮೆರಿಕ ಮತ್ತು ಸೋವಿಯತ್ ಯೂನಿಯನ್ ಎರಡು ಜಾಗತಿಕ ಶಕ್ತಿಗಳಾಗಿ ಬದಲಾದವು. ಇವರು ತಮ್ಮೊಳಗೆ ಆರಂಭಿಸಿದ ಶೀತಲ ಸಮರವು (Cold War) ವಿಶ್ವಶಾಂತಿಗೆ ಬೆದರಿಕೆಯಾಯಿತು. ಈ ಎರಡು ಪ್ರಬಲ ಶಕ್ತಿಗಳ ಬಣಗಳೊಂದಿಗೆ ಸೇರದೆ ಸ್ವತಂತ್ರವಾಗಿರಲು ಮತ್ತು ದೇಶದ ಹಿತಾಸಕ್ತಿಗಳನ್ನು ಸಂರಕ್ಷಿಸಲು ಭಾರತದ ನೇತೃತ್ವದಲ್ಲಿ ರಚಿಸಿದ ವಿದೇಶ ಧೋರಣೆಯ ಆಧಾರದಲ್ಲಿ ಅಲಿಪ್ತ ಚಳುವಳಿಯನ್ನು ರೂಪಿಸಲಾಯಿತು.



1983 ರಲ್ಲಿ ನವದೆಹಲಿಯಲ್ಲಿ ನಡೆದ 7ನೇ ಅಲಿಪ್ತ ಚಳುವಳಿಯ ಶೃಂಗಸಭೆಯಲ್ಲಿ ಭಾಗವಹಿಸಿದ ಅಂದಿನ ಭಾರತದ ಪ್ರಧಾನ ಮಂತ್ರಿ ಇಂದಿರಾ ಗಾಂಧಿ ಮತ್ತು ಕ್ಯೂಬಾದ ಅಧ್ಯಕ್ಷ ಫಿಡೆಲ್ ಕಾಸ್ಟ್ರೋ ಭಾರತದ ಅಂದಿನ ರಾಷ್ಟ್ರಪತಿಯವರಾದ ಗ್ಯಾನಿ ಜೈಲ್ ಸಿಂಗ್ ಅವರೊಂದಿಗೆ

ವಿಶ್ವದ ಎಲ್ಲ ದೇಶಗಳೊಂದಿಗೆ ಆರೋಗ್ಯಕರವಾದ ಸಂಬಂಧವನ್ನು ಕಾಪಾಡಿಕೊಳ್ಳಲು ಪ್ರಯತ್ನಿಸುವುದರೊಂದಿಗೆ ಜಾಗತಿಕ ರಾಷ್ಟ್ರಗಳೆಡೆಯಲ್ಲಿ ಭಾರತದ ಘನತೆ ಮತ್ತು ಹಿತಾಸಕ್ತಿಗಳನ್ನು ಎತ್ತಿ ಹಿಡಿಯಲು ದೇಶವು ವಿಶೇಷ ಗಮನ ಹರಿಸುತ್ತದೆ.

ಅಲಿಪ್ತ ಚಳುವಳಿಯ ಪ್ರಮುಖ ಶಿಲ್ಪಿಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಸಂಗ್ರಹಿಸಿ ಒಂದು ಪ್ರೊಫೈಲ್ ಆಲ್ಬಂ ತಯಾರಿಸಿರಿ.

ವಸಾಹತುಶಾಹಿ ಆಳ್ವಿಕೆಯ ಪರಿಣಾಮಗಳನ್ನು ಮತ್ತು ಸವಾಲುಗಳನ್ನು ಎದುರಿಸಿ ಅವುಗಳನ್ನು ಮೆಟ್ಟಿನಿಂತು ವಿಶ್ವದ ಪ್ರಮುಖ ಶಕ್ತಿಗಳಲ್ಲಿ ಒಂದಾಗಿ ಬೆಳೆದು ಬರಲು ಸ್ವತಂತ್ರ ಭಾರತಕ್ಕೆ ಸಾಧ್ಯವಾಗಿದೆ. ಆದರೂ ಸಾಮಾಜಿಕ - ಆರ್ಥಿಕ ವಲಯಗಳಲ್ಲಿ ನಾವು ಇನ್ನೂ ಬಹಳಷ್ಟು ದೂರ ಸಾಗಬೇಕಾಗಿದೆ.

ಸ್ವತಂತ್ರ ಭಾರತವು ವಿವಿಧ ಕ್ಷೇತ್ರಗಳಲ್ಲಿ ಸಾಧಿಸಿದ ಪ್ರಗತಿಯನ್ನು ನಾವು ಇದುವರೆಗೆ ಚರ್ಚಿಸಿದೆವು. ಈ ಕಾಲಾವಧಿಯಲ್ಲಿ ನಮ್ಮ ಕೇರಳ ರಾಜ್ಯವೂ ವಿಭಿನ್ನ ಮಾರ್ಗಗಳ ಮೂಲಕ ಸಂಚರಿಸುತ್ತಾ ಮಾದರಿ ಚಟುವಟಿಕೆಗಳ ಮೂಲಕ ವಿಶ್ವದ ಗಮನ ಸೆಳೆದಿದೆ. ಅವು ಯಾವುವೆಂದು ಪರಿಶೀಲಿಸೋಣ.

## ಜಗತ್ತಿನ ಗಮನ ಸೆಳೆದ ಕೇರಳದ ಅಭಿವೃದ್ಧಿ ಅನುಭವಗಳು

**ಸೀಮಿತ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಏನು ಮಾಡಬೇಕೆಂಬುದನ್ನು ಭಾರತದ ನೀತಿ ನಿರೂಪಕರು (ಕೇರಳದಿಂದ) ಕಲಿಯಬೇಕಾಗಿದೆ.**

*Jean Drez and Amartya Sen, An uncertain glory: India and its contradictions (Quoted in Thirthankar Roy and Ravi Raman K; Kerala 1956 to the present India's Miracle State, 2024)*




Map not to scale (ಭೂಪಟ 7.3)

**ಕೇರಳ - ಐಕ್ಯ ಕೇರಳ ರೂಪೀಕರಣಕ್ಕಿಂತ ಮೊದಲು**

ನೀವು ಮೇಲೆ ಓದಿರುವುದು ಕೇರಳ ಅಭಿವೃದ್ಧಿ ಮಾದರಿಯ ಕುರಿತು ಪ್ರಮುಖ ಅರ್ಥಶಾಸ್ತ್ರಜ್ಞನಾದ ಅಮರ್ತ್ಯ ಸೇನ್ ನಡೆಸಿದ ನಿರೀಕ್ಷಣೆಯಾಗಿದೆ. ಇದರಿಂದ ನಿಮಗೆ ಏನನ್ನು ತಿಳಿದುಕೊಳ್ಳಲು ಸಾಧ್ಯ?

•

•

ತಿರುವಿದಾಂಕೂರು, ಕೊಚ್ಚಿ ಮತ್ತು ಮಲಬಾರ್ ಎಂಬ ರೀತಿಯಲ್ಲಿ ಮೂರು ರಾಜಕೀಯ ಭೂ ವಿಭಾಗಗಳಾಗಿ ವಿಂಗಡಿಸಲ್ಪಟ್ಟಿದ್ದ ಪ್ರದೇಶಗಳನ್ನು ಮತ್ತು ದಕ್ಷಿಣ ಕನ್ನಡದಲ್ಲಿ ಒಳಗೊಂಡ ಕಾಸರಗೋಡು ತಾಲೂಕನ್ನೂ ಸೇರಿಸಿಕೊಂಡು 1956 ನವಂಬರ್ 1ರಂದು ಕೇರಳ ರಾಜ್ಯವು ಅಧಿಕೃತವಾಗಿ ಅಸ್ತಿತ್ವಕ್ಕೆ ಬಂತು. 1957ರಲ್ಲಿ ಕೇರಳ ವಿಧಾನಸಭೆಗೆ ಮೊದಲ ಚುನಾವಣೆ ನಡೆಯಿತು. ಇ.ಎಂ.ಎಸ್ ನಂಬೂದಿರಿಪ್ಪಾಡ್ ಕೇರಳದ ಮೊತ್ತ ಮೊದಲ ಮುಖ್ಯಮಂತ್ರಿಯಾಗಿ ಸರಕಾರವನ್ನು ರಚಿಸಿದರು.



**ಇ.ಎಂ.ಎಸ್ ನಂಬೂದಿರಿಪ್ಪಾಡ್**

ಐ.ಸಿ.ಟಿ ಯ ಸಹಾಯದೊಂದಿಗೆ ಕೇರಳ ರಾಜ್ಯ ರಚನೆಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಗಳನ್ನು ಸಂಗ್ರಹಿಸಿ ಅವುಗಳನ್ನು ಸೇರಿಸಿಕೊಂಡು ಒಂದು ಡಿಜಿಟಲ್ ಪ್ರಸಂಟೇಶನ್‌ನ್ನು ತಯಾರಿಸಿರಿ.

ಕೇರಳದಲ್ಲಿ ಜಾರಿಯಲ್ಲಿದ್ದ ಸಾಮಾಜಿಕ-ಆರ್ಥಿಕ ಪರಿಸ್ಥಿತಿಗಳನ್ನು, ಸ್ಥಿತಿಗತಿಗಳನ್ನು ಪರಿಗಣಿಸಿಕೊಂಡು ಸರಕಾರವು ದೀರ್ಘ ವೀಕ್ಷಣೆಯಿಂದ ಅನೇಕ ಸುಧಾರಣೆಗಳನ್ನು ಜಾರಿಗೊಳಿಸಿತು. ಅವುಗಳಲ್ಲಿ ಪ್ರಮುಖವಾದವುಗಳನ್ನು ನಾವು ಪರಿಶೀಲಿಸೋಣ.

## ಭೂಸುಧಾರಣೆ ಕೇರಳದಲ್ಲಿ

### ವಾಯಕ್ಕುಲ

'ವಾಯಕ್ಕುಲ' ಎಂಬುದು ಪ್ರಸಿದ್ಧ ಕವಿ ಚಂಗಂಪುಯ ಕೃಷ್ಣಪಿಳ್ಳೆ ಅವರು 1937 ರಲ್ಲಿ ಗುಲಾಮ-ಮಾಲೀಕ, ಭೂಮಾಲೀಕ-ಒಕ್ಕಲಿಗ ವ್ಯವಸ್ಥೆ ಮತ್ತು ಮೇಲ್ವರ್ಗ-ಕೆಳವರ್ಗ ಎಂಬೀ ವ್ಯವಸ್ಥೆಗಳಿಗೆದುರಾಗಿ ಬರೆದ ಕವಿತೆಯಾಗಿದೆ. ಹಸಿದವರ, ಸೋತವರ ಮತ್ತು ಕಡೆಗಣಿಸಲ್ಪಟ್ಟವರ ನೋವನ್ನು ಹಂಚಿಕೊಳ್ಳುವ ಈ ಕವಿತೆಯು ಆ ಕಾಲದ ಸಾಮಾಜಿಕಆತ್ಮಸಾಕ್ಷಿಗೆ ಹೊಸ ಪ್ರಚೋದನೆಯನ್ನು ನೀಡಿತು.

ಮೇಲ್ವರ್ಗವು ಜಾತಿವ್ಯವಸ್ಥೆಯಲ್ಲಿ ಕೆಳವರ್ಗದಲ್ಲಿರುವವರಲ್ಲಿ ತಮಗೆ ಸೂಕ್ತವೆಂದು ತೋರುವಂತೆ ನಡೆದುಕೊಳ್ಳುವುದಕ್ಕೆ ಅನುವುಮಾಡಿಕೊಡುವ ನ್ಯಾಯವ್ಯವಸ್ಥೆಯನ್ನು ಪ್ರತಿಭಟಿಸುವ ಮತ್ತು ಪ್ರಶ್ನಿಸುವ ಕವಿ, ಅಸ್ತಿತ್ವದಲ್ಲಿರುವ ಅಧಿಕಾರ ವ್ಯವಸ್ಥೆಯನ್ನು ಕಠಿಣವಾದ ಭಾಷೆಯಲ್ಲಿ ಪ್ರಶ್ನಿಸುತ್ತಾನೆ. ಎಲ್ಲವನ್ನೂ ಬಿಟ್ಟು ಮಣ್ಣಿನಲ್ಲಿ ದುಡಿದು ಬೆಳೆಗಳನ್ನು ಉತ್ಪಾದಿಸುವ ಮನುಷ್ಯನ ಅಸಹಾಯಕತೆ ಮತ್ತು ಯಾವುದೇ ನಾಚಿಕೆಯಿಲ್ಲದೆಬೆಳೆಗಳನ್ನು ತಮ್ಮದನ್ನಾಗಿಸುವ ಉನ್ನತ ಕುಲದಲ್ಲಿ ಹುಟ್ಟಿದ ಮೇಲ್ವರ್ಗದ ದುರಹಂಕಾರವನ್ನು 'ವಾಯಕ್ಕುಲ' ಕವನದಲ್ಲಿ ಕವಿ ಚಿತ್ರಿಸಿದ್ದಾರೆ.

(ಚೆಂಗಂಪ್ಪುಯ ಕೃಷ್ಣ ಪಿಳ್ಳೆ- ವಾಯಕ್ಕುಲಂ)

ಚೆಂಗಂಪ್ಪುಯ ಕೃಷ್ಣ ಪಿಳ್ಳೆಯವರ ವಾಯಕ್ಕುಲ ಎಂಬ ಕವಿತೆಯು ಭೂ ಸುಧಾರಣಾ ಕಾನೂನನ್ನು ಜಾರಿಗೊಳಿಸುವುದಕ್ಕಿಂತ ಮೊದಲು ಕೇರಳದ ಕೃಷಿಕರ ಸಾಮಾನ್ಯ ಸ್ಥಿತಿಗತಿಗಳನ್ನು ಸೂಚಿಸುತ್ತದೆ. ಮೇಲೆ ನೀಡಿರುವ ಕವಿತೆಯ ಆಶಯದಿಂದ ಆ ಕಾಲದ ಸಾಮಾಜಿಕ ವ್ಯವಸ್ಥೆಯ ಕುರಿತು ಯಾವ ಯಾವ ಮಾಹಿತಿಗಳು ಲಭಿಸುತ್ತವೆ?

- 

ಇಂತಹ ಸಾಮಾಜಿಕ ಆರ್ಥಿಕ ಸಮಸ್ಯೆಗಳನ್ನು ಪರಿಹರಿಸುವುದಕ್ಕಾಗಿ 1957ರಲ್ಲಿ ಅಧಿಕಾರಕ್ಕೆ ಬಂದ ಕೇರಳ ಸರಕಾರವು ಕೃಷಿ ಸಂಬಂಧಿ ಕಾನೂನನ್ನು ಮಂಡಿಸಿತು, ಅನಂತರ 1970 ಜನವರಿ 1ರಂದು ಜಾರಿಗೆ ಬಂದ ಕೇರಳ ಭೂ ಸುಧಾರಣಾ ತಿದ್ದುಪಡಿ ಕಾನೂನು ಪ್ರಕಾರ ಒಕ್ಕಲಿಗರಿಗೆ ಕೃಷಿ ಭೂಮಿಯ ಸ್ಥಿರವಾದ ಹಕ್ಕು ಲಭಿಸಿತು.

### ಭೂ ಮಿತಿ

ಕೇರಳದ ಭೂ ಸುಧಾರಣಾ ಕಾನೂನು 82ನೇ ವಿಧಿಯ ಪ್ರಕಾರ ಒಬ್ಬ ವ್ಯಕ್ತಿಗೆ ಗರಿಷ್ಠ ತನ್ನ ಅಧೀನದಲ್ಲಿಟ್ಟುಕೊಳ್ಳಬಹುದಾದ ಭೂ ಪರಿಧಿ 7.5 ಎಕ್ರೆ ಹಾಗೂ ಒಂದು ಕುಟುಂಬಕ್ಕೆ 15 ಎಕ್ರೆಯಾಗಿದೆ. ಆದರೆ ಕುಟುಂಬದ ಸದಸ್ಯರ ಸಂಖ್ಯೆ ಐದಕ್ಕಿಂತ ಹೆಚ್ಚಿದ್ದರೆ 20 ಎಕ್ರೆಯವರೆಗೆ ಭೂಮಿಯನ್ನು ತಮ್ಮ ಕೈವಶವಿರಿಸಬಹುದು.

(Department of land revenue, Govt. of Kerala)

### ಕೇರಳದ ಭೂ ಸುಧಾರಣ ಕಾನೂನುಗಳ ಪ್ರಧಾನ ಪರಿಣಾಮಗಳು

- ಅಧೀನದಲ್ಲಿಟ್ಟುಕೊಳ್ಳಬಹುದಾದ ಭೂಮಿಗೆ ಮಿತಿಯನ್ನು ನಿರ್ಣಯಿಸಲಾಯಿತು.
- ಜಮೀನ್ದಾರಿ ವ್ಯವಸ್ಥೆಯನ್ನು ಕೊನೆಗೊಳಿಸಲಾಯಿತು.
- ಕೃಷಿ ಭೂಮಿಯಲ್ಲಿ ಒಕ್ಕಲಿಗರಿಗೆ ಸ್ಥಿರವಾದ ಹಕ್ಕು ಲಭಿಸಿತು.
- ಕೃಷಿ ವಲಯದಲ್ಲಿ ಜಾರಿಯಲ್ಲಿದ್ದ ಶೋಷಣೆ ಮತ್ತು ಅಸಮಾನತೆಯನ್ನು ಒಂದು ಮಿತಿಯವರೆಗೆ ನಿರ್ಮೂಲನೆ ಮಾಡಲು ಸಾಧ್ಯವಾಯಿತು.

ಕೇರಳದ ಸಾಮಾಜಿಕ - ಆರ್ಥಿಕ ವಲಯಗಳಲ್ಲಿ ದೂರ ವ್ಯಾಪಕವಾದ ಅನೇಕ ಬದಲಾವಣೆಗಳಿಗೆ ದಾರಿ ದೀಪವಾದ ಭೂ ಸುಧಾರಣಾ ಕಾನೂನಿನ ಪ್ರಧಾನ ಘಟನೆಗಳನ್ನು ಸೂಚಿಸುವ ಫ್ಲೋ ಚಾರ್ಟ್ ತಯಾರಿಸಿರಿ.

## ಕೇರಳದಲ್ಲಿ ಜ್ಞಾನದ ವ್ಯಾಪಿಸುವಿಕೆ ಮತ್ತು ವಿನಿಮಯ




**ಪಾಠವಿಲ್ಲದಿದ್ದರೆ ಗದ್ದೆಗಿಳಿಯಲಾರೆವು....**

ನಮ್ಮ ಮಕ್ಕಳಿಗೆ ಕಲಿಯುವ ಸೌಕರ್ಯ
ಒದಗಿಸದಿದ್ದರೆ ಕಾಣುವ ಹೊಲಗಳಲ್ಲೆಲ್ಲ
ಕಳೆ ಹುಲ್ಲು ಬೆಳೆಯುವಂತೆ ಮಾಡುವೆವು.'

ಮಹಾತ್ಮಾ ಅಯ್ಯಂಕಾಳಿ

ಕೆಳಜಾತಿಯಲ್ಲಿ ಒಳಗೊಂಡವರೆಂದು ಪರಿಗಣಿಸಲಾದ ಮಕ್ಕಳನ್ನು ಶಾಲೆಗೆ ಸೇರಿಸಿಕೊಳ್ಳುವುದನ್ನು ಖಚಿತಪಡಿಸುವುದಕ್ಕಾಗಿ ತಿರುವಲ್ಲದಲ್ಲಿರುವ ಪುಲ್ಲಾಟ್ ಸರಕಾರಿ ಶಾಲೆಯಲ್ಲಿ ಶೈಕ್ಷಣಿಕ ಮುಷ್ಕರವೊಂದು ನಡೆಯಿತು. ತಮ್ಮ ಮಕ್ಕಳನ್ನು ಅಸ್ಪೃಶ್ಯ ಜಾತಿಯವರೊಂದಿಗೆ ಕುಳಿತುಕೊಂಡು ಕಲಿಯಲು ಬಿಡುವುದಿಲ್ಲವೆಂದು ಮೇಲ್ಜಾತಿಯ ನಾಯಕರು ಘೋಷಿಸಿದುದರಿಂದ ಶಾಲೆಯನ್ನು ಅನಿರ್ದಿಷ್ಟಾವಧಿಗೆ ಮುಚ್ಚಲಾಯಿತು. ಇದನ್ನು ಪ್ರತಿಭಟಿಸಿ ವೆಳ್ಳಿಕ್ಕರ ಚೋದಿ, ಕುರುಂಬನ್ ದೈವತ್ತಾನ್ ಮುಂತಾದವರ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆಗಳು ನಡೆದವು. ಇದರ ಪರಿಣಾಮವಾಗಿ ಕೆಳಜಾತಿಯಲ್ಲಿ ಒಳಗೊಂಡವರೆಂದು ಪರಿಗಣಿಸಲಾದ ಮಕ್ಕಳನ್ನು ಶಾಲೆಗೆ ಸೇರಿಸಲಾಯಿತು.

ಸಮಾಜದ ಎಲ್ಲ ವರ್ಗಗಳಲ್ಲಿರುವ ಮಕ್ಕಳಿಗೆ ಒಟ್ಟಿಗೆ ಇದ್ದುಕೊಂಡು ಶಿಕ್ಷಣ ಪಡೆಯುವ ಅವಕಾಶವನ್ನು ನಿರಾಕರಿಸಲಾಗುತ್ತಿದ್ದ ಒಂದು ಕಾಲ ನಮ್ಮಲ್ಲಿತ್ತು ಎಂಬುದನ್ನು ಮೇಲಿನ ಘಟನೆಯು ಸೂಚಿಸುತ್ತದೆ. ಆದರೆ ನಂತರದ ಕಾಲದಲ್ಲಿ ಕೇರಳದಲ್ಲಿ ಶಿಕ್ಷಣವು ಜನಪರವೂ ಸಾರ್ವತ್ರಿಕವೂ ಆಯಿತು. ಭೂ ಸುಧಾರಣೆ, ಸಮಾಜ ಸುಧಾರಣಾ ಚಳುವಳಿಗಳು, ಮಿಷನರಿಗಳ ಕಾರ್ಯಗಳು, ರಾಷ್ಟ್ರೀಯ ಚಳುವಳಿಯ ಬೆಳವಣಿಗೆ ಎಂಬಿವುಗಳು ಇದಕ್ಕೆ ಕಾರಣವಾದ ಪ್ರಮುಖ ಅಂಶಗಳಾಗಿವೆ. ಇಂದು ಅಸ್ತಿತ್ವದಲ್ಲಿರುವ ಸಾರ್ವತ್ರಿಕ ಮತ್ತು ಉಚಿತ ಶಾಲಾ ಶಿಕ್ಷಣದ ವ್ಯಾಪಿಸುವಿಕೆಯ ಮೇಲೆ ಪ್ರಭಾವ ಬೀರಿದ ಇತರ ಅಂಶಗಳೂ ಇವೆ. ಅವು ಯಾವುವೆಂದು ನೋಡೋಣ.

- ಮುದ್ರಣದ ವ್ಯಾಪಿಸುವಿಕೆ
- ಗ್ರಂಥಾಲಯ ಚಳುವಳಿ
- ಸಾಕ್ಷರತಾ ಚಳುವಳಿ
- ಅನೌಪಚಾರಿಕ ಶೈಕ್ಷಣಿಕ ಚಟುವಟಿಕೆಗಳು
- ಅಧಿಕಾರ ವಿಕೇಂದ್ರೀಕರಣ

### ಗ್ರಂಥಾಲಯ ಚಳುವಳಿ


ಪಿ.ಎನ್. ಪಣಿಕ್ಕರ್

ಕೇರಳ ಗ್ರಂಥಾಲಯ ಚಳುವಳಿಯು ಕೇರಳದ ಅತಿ ದೊಡ್ಡ ಸಂಘಟಿತ ಸಾಂಸ್ಕೃತಿಕ ಚಳುವಳಿಯಾಗಿದೆ. 1829 ರಲ್ಲಿ ತಿರುವಾಂಕೂರು ರಾಜನಾದ ಸ್ವಾತಿ ತಿರುನಾಳ್ ತಿರುವನಂತಪುರದಲ್ಲಿ ಸ್ಥಾಪಿಸಿದ ಸಾರ್ವಜನಿಕ ಗ್ರಂಥಾಲಯವು ತಿರುವಾಂಕೂರಿನ ಮೊದಲ ಗ್ರಂಥಾಲಯವಾಗಿದೆ. 1945 ರಲ್ಲಿ ಪಿ.ಎನ್. ಪಣಿಕ್ಕರ್ ರವರ ನೇತೃತ್ವದಲ್ಲಿ ತಿರುವಾಂಕೂರಿನ ಗ್ರಂಥಾಲಯಗಳ ಸಮ್ಮೇಳನದಲ್ಲಿ ರೂಪುಗೊಂಡ ಒಕ್ಕೂಟವು ಗ್ರಂಥಾಲಯ ಚಳುವಳಿಯನ್ನು ಆರಂಭಿಸಿತು.

## ಐಕ್ಯ ಕೇರಳದ ಶೈಕ್ಷಣಿಕ ಸಾಧನೆಗಳು

ಭೂ ಸುಧಾರಣೆಯ ಮೂಲಕ ರೈತರಿಗೆ ಕೃಷಿ ಭೂಮಿಯು ಲಭ್ಯವಾಗುವುದರೊಂದಿಗೆ ಕೇರಳದಲ್ಲಿ ಶಿಕ್ಷಣವು ಬಲಗೊಂಡಿತು. ಭೂ ಸುಧಾರಣಾ ಕಾನೂನು, 1958ರ ಕೇರಳ ಶಿಕ್ಷಣ ಕಾಯಿದೆ ಇತ್ಯಾದಿಗಳ ಮೂಲಕ ಕೇರಳೀಯರಿಗೆ ಪ್ರಾಥಮಿಕ ಶಿಕ್ಷಣವನ್ನು ಉಚಿತವಾಗಿ ಮತ್ತು ಸಾರ್ವತ್ರಿಕವಾಗಿ ಲಭ್ಯವಾಗುವಂತೆ ಮಾಡಲು ಕೇರಳಕ್ಕೆ ಸಾಧ್ಯವಾಯಿತು. ನಮ್ಮ ರಾಜ್ಯದಲ್ಲಿ ನಡೆದ ಸಾಮೂಹಿಕ ಸಾಕ್ಷರತಾ ಚಟುವಟಿಕೆಗಳ ಪರಿಣಾಮವಾಗಿ 1991ರ ಏಪ್ರಿಲ್ 18 ರಂದು ಕೇರಳವು ಸಂಪೂರ್ಣ ಸಾಕ್ಷರತೆಯನ್ನು ಸಾಧಿಸಿದ ಭಾರತದ ಮೊದಲ ರಾಜ್ಯವಾಯಿತು.

1994 ಏಪ್ರಿಲ್ 23 ರಂದು ಕೇರಳ ಪಂಚಾಯತ್ ರಾಜ್ ಕಾನೂನು ಜಾರಿಗೆ ಬಂದ ನಂತರ ಸ್ಥಳೀಯ ಆಡಳಿತ ಸಂಸ್ಥೆಗಳಿಗೆ ಶೈಕ್ಷಣಿಕ ಕ್ಷೇತ್ರದಲ್ಲಿ ಹೆಚ್ಚಿನ ಅಧಿಕಾರಗಳು ಲಭಿಸಿದವು. ಇದರೊಂದಿಗೆ ಜನರ ಸಹಭಾಗಿತ್ವದೊಂದಿಗೆ ವಿವಿಧ ಶೈಕ್ಷಣಿಕ ಯೋಜನೆಗಳನ್ನು ರೂಪಿಸಲು ಪ್ರಾರಂಭಿಸಲಾಯಿತು.

## ಕೇರಳ ಮತ್ತು ಉನ್ನತ ಶಿಕ್ಷಣ



ಕೇರಳ ಯುನಿವರ್ಸಿಟಿ ಆಫ್ ಡಿಜಿಟಲ್ ಸೈನ್ಸಸ್ ಇನ್ನೋವೇಶನ್ ಅಂಡ್ ಟೆಕ್ನಾಲಜಿ, ತಿರುವನಂತಪುರ

ಪ್ರಾಥಮಿಕ ಶಿಕ್ಷಣ ವಲಯದಲ್ಲಿ ಗಳಿಸಿದ ಪ್ರಗತಿಯು ಕ್ರಮೇಣ ಕೇರಳದ ಉನ್ನತ ಶಿಕ್ಷಣ ವಲಯಗಳಿಗೂ ವ್ಯಾಪಿಸಿತು. ಸಮಾಜದ ಎಲ್ಲಾ ವಲಯಗಳಲ್ಲೂ ಸಮಗ್ರವಾದ ಬದಲಾವಣೆಗಳಿಗೆ ನೇತೃತ್ವವನ್ನು ನೀಡಲು ಸಾಮರ್ಥ್ಯವನ್ನು ಹೊಂದಿರುವ ಯುವ ಪೀಳಿಗೆಯನ್ನು ರೂಪಿಸುವುದು ಉನ್ನತ ಶಿಕ್ಷಣದ ಉದ್ದೇಶವಾಗಿದೆ. ವಿಜ್ಞಾನ-ತಂತ್ರಜ್ಞಾನ ಮತ್ತು ಮಾನವಿಕ ವಿಷಯಗಳಲ್ಲಿ ಪಾಂಡಿತ್ಯವನ್ನು ಗಳಿಸುವುದರೊಂದಿಗೆ ಸಂಶೋಧನೆ ಮತ್ತು ನವೀನ ಆವಿಷ್ಕಾರಗಳನ್ನು ಬೆಳೆಸುವ ಗುರಿಯೊಂದಿಗೆ ಕೇರಳದ ಉನ್ನತ ಶಿಕ್ಷಣ ಸಂಸ್ಥೆಗಳು ಕಾರ್ಯಾಚರಿಸುತ್ತಿವೆ.

ಕೇರಳ ರಾಜ್ಯ ರೂಪೀಕರಣದ ಸಂದರ್ಭದಲ್ಲಿ ಒಂದು ವಿಶ್ವವಿದ್ಯಾಲಯ (ಕೇರಳ ವಿಶ್ವವಿದ್ಯಾಲಯ) ಮಾತ್ರವೇ ಕೇರಳದಲ್ಲಿತ್ತು. ಆದರೆ ಇಂದು ವಿಜ್ಞಾನ, ತಂತ್ರಜ್ಞಾನ, ಕೃಷಿ, ಆರೋಗ್ಯ ಮುಂತಾದ ವಲಯಗಳಿಗೆ ಪ್ರಾಮುಖ್ಯವನ್ನು ನೀಡುತ್ತಿರುವ ವಿವಿಧ ವಿಶ್ವವಿದ್ಯಾಲಯಗಳು ಕೇರಳದಲ್ಲಿ ಕಾರ್ಯಾಚರಿಸುತ್ತಿವೆ. ಇವುಗಳಲ್ಲದೆ ಉದ್ಯೋಗ ನೈಪುಣ್ಯವನ್ನು ಅಭಿವೃದ್ಧಿಪಡಿಸುವುದರ ಭಾಗವಾಗಿ ಪೋಲಿಟೆಕ್ನಿಕ್‌ಗಳು, ಉದ್ಯಮ ತರಬೇತಿ ಸಂಸ್ಥೆಗಳು (ITI) ಮುಂತಾದವುಗಳಲ್ಲಿ ಕೇರಳದಲ್ಲಿ ಕಾರ್ಯಾಚರಿಸುತ್ತಿವೆ. ಹೀಗೆ ಕೇರಳ ರಾಜ್ಯ ರೂಪೀಕರಣದ ನಂತರ ಸಾರ್ವತ್ರಿಕ ಶಿಕ್ಷಣಕ್ಕೆ ಕೊಟ್ಟ ಪ್ರಾಮುಖ್ಯ, ಆ ವಲಯದಲ್ಲಿ ಸಾಧಿಸಿದ ಸಾಧನೆಗಳು ಕೇರಳವನ್ನು ಶೈಕ್ಷಣಿಕ ವಲಯದಲ್ಲಿ ಮಾದರಿ ರಾಜ್ಯವನ್ನಾಗಿ ಅಭಿವೃದ್ಧಿಪಡಿಸಿದ ಪ್ರಧಾನ ಘಟಕಗಳಾಗಿವೆ.

ಕೇರಳದ ಉನ್ನತ ಶಿಕ್ಷಣ ಕ್ಷೇತ್ರವನ್ನು ಇತರ ರಾಜ್ಯಗಳ ಉನ್ನತ ಶಿಕ್ಷಣ ಕ್ಷೇತ್ರಗಳೊಂದಿಗೆ ಹೋಲಿಸಿ ಟಿಪ್ಪಣಿ ತಯಾರಿಸಿರಿ.

ಕೆಳಗೆ ಕೊಟ್ಟಿರುವ ಪಟ್ಟಿಯನ್ನು ವಿಶ್ಲೇಷಿಸಿ ನಮ್ಮ ದೇಶದ ಮತ್ತು ಕೇರಳದ ಸಾಕ್ಷರತಾ ಪ್ರಮಾಣವನ್ನು ಹೋಲಿಸಿ ಟಿಪ್ಪಣಿ ತಯಾರಿಸಿರಿ.

**ಸಾಕ್ಷರತಾ ಪ್ರಮಾಣ (ಶೇಕಡಾಮಾನದಲ್ಲಿ)**

| ವರ್ಷ | ಭಾರತ | ಕೇರಳ |
|---|---|---|
| 1951 | 27 | 47 |
| 1961 | 24 | 55 |
| 1971 | 29 | 70 |
| 1981 | 36 | 79 |
| 1991 | 43 | 90 |
| 2001 | 55 | 91 |
| 2011 | 74 | 94 |
| 2021 | 78 | 94 |

*Source*: Census of India, various years; except for the year 2021, *Economic Review*, Government of Kerala *(Quoted in Thirthankar Roy and Ravi Raman K; Kerala 1956 to the present India's Miracle State, 2024)*

## ಆರೋಗ್ಯ ವಲಯ




ಮೇಲೆ ಕೊಟ್ಟಿರುವ ವಾರ್ತಾ ತುಣುಕುಗಳಿಂದ ಕೇರಳದ ಆರೋಗ್ಯ ವಲಯದ ಕುರಿತು ಯಾವ ಯಾವ ವಿಚಾರಗಳನ್ನು ನಿಮಗೆ ಕಂಡುಕೊಳ್ಳಲು ಸಾಧ್ಯವಿದೆ?

-
-

ಅಭಿವೃದ್ಧಿ ಹೊಂದಿದ ರಾಷ್ಟ್ರಗಳೊಂದಿಗೆ ಸರಿಸಾಟಿಯಾಗುವಂತಹ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯು ಕೇರಳದಲ್ಲಿದೆ. ಕಡಿಮೆ ವೆಚ್ಚದಲ್ಲಿ ಸೀಮಿತ ಸನ್ನಿವೇಶಗಳ ನಡುವೆಯೂ ಅತ್ಯುತ್ತಮ ಆರೋಗ್ಯ ಸೇವೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಆರೋಗ್ಯ ವಲಯವನ್ನು ವಿಶ್ವದ ಗುಣಮಟ್ಟಕ್ಕೇರಿಸಲು ಕೇರಳಕ್ಕೆ ಸಾಧ್ಯವಾಗಿದೆ. ಆರೋಗ್ಯ ವಲಯದಲ್ಲಿ ನಾವು ಮಾಡಿರುವ ಕೆಲವೊಂದು ಸಾಧನೆಗಳ ಪರಿಣಾಮಗಳನ್ನು ಕೆಳಗೆ ನೀಡಲಾಗಿದೆ.

- ಕಡಿಮೆ ಶಿಶು ಮರಣ ಪ್ರಮಾಣ
- ಕಡಿಮೆ ಮಾತೃ ಮರಣ ಪ್ರಮಾಣ
- ಹೆಚ್ಚಿದ ಆಯುಷ್ಯಾವಧಿ
- ಶೀಘ್ರಗತಿಯಲ್ಲಿ ಕಡಿಮೆಯಾಗುತ್ತಿರುವ ಜನಸಂಖ್ಯಾ ಬೆಳವಣಿಗೆಯ ದರ

ನಿಮ್ಮ ಪ್ರದೇಶದ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಂದರ್ಶಿಸಿ ಆರೋಗ್ಯ ವಲಯದಲ್ಲಿ ಸರಕಾರವು ಜಾರಿಗೊಳಿಸಿದ ಪ್ರಮುಖ ಕಾರ್ಯಕ್ರಮಗಳ ಪಟ್ಟಿ ತಯಾರಿಸಿರಿ.

ಕೇರಳದಲ್ಲಿ ತಲಾ ಆದಾಯವು ಕಡಿಮೆಯಾಗಿದ್ದರೂ ಶಿಕ್ಷಣ ಮತ್ತು ಆರೋಗ್ಯ ವಲಯಗಳಲ್ಲಿ ಗಳಿಸಿದ ಸಾಧನೆಗಳ ಮೂಲಕ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಜಾಗತಿಕ ಮಟ್ಟಕ್ಕೆ ಏರಲು ಕೇರಳಕ್ಕೆ ಸಾಧ್ಯವಾಯಿತು. 1965ರಲ್ಲಿ ಜಾರಿಗೊಳಿಸಲಾದ ಸಾರ್ವತ್ರಿಕ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಕೇರಳವು ಬಡತನ ನಿರ್ಮೂಲನೆಯಲ್ಲಿ ಇತರ ರಾಜ್ಯಗಳಿಗೆ ಮಾದರಿಯಾಯಿತು. ಮಾತ್ರವಲ್ಲದೆ ಕುಟುಂಬಶ್ರೀಯ ಮೂಲಕ ಮಹಿಳಾ ಸಬಲೀಕರಣ ಕ್ಷೇತ್ರದಲ್ಲೂ ವಿಕೇಂದ್ರೀಕೃತ ಯೋಜನೆಯ ಮೂಲಕ ಪ್ರಾದೇಶಿಕ ಆಡಳಿತದಲ್ಲೂ ಕೇರಳ ಪ್ರಾಂತ್ಯ ಸಾಕ್ಷರತಾ ಮಿಶನ್ ಅಥೋರಿಟಿ (KSLMA)ಯ ಮೂಲಕ ಸಾಕ್ಷರತಾ ಕ್ಷೇತ್ರದಲ್ಲೂ ಪ್ರಗತಿ ಹೊಂದಲು ಕೇರಳಕ್ಕೆ ಸಾಧ್ಯವಾಗಿದೆ.

ಕುಟುಂಬಶ್ರೀ - ಲೋಗೋ

ಭೂಸುಧಾರಣೆ, ಶಿಕ್ಷಣ, ಸಾರ್ವಜನಿಕ ಆರೋಗ್ಯ ಎಂಬೀ ವಲಯಗಳಲ್ಲಿ ಕೇರಳವು ಮಾಡಿರುವ ಸಾಧನೆಗಳನ್ನು ಸೇರಿಸಿಕೊಂಡು ತರಗತಿಯಲ್ಲಿ ಒಂದು ಪ್ಯಾನಲ್ ಚರ್ಚೆಯನ್ನು ನಡೆಸಿರಿ.

ಕೇರಳದ ಕೃಷಿ, ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳು ಪ್ರಜಾಪ್ರಭುತ್ವ ಮೌಲ್ಯಗಳಿಗೆ ಹಾಗೂ ಸಾಮಾಜಿಕ ನ್ಯಾಯಕ್ಕೆ ಒತ್ತು ನೀಡುವ ಮೂಲಕ ಪ್ರಗತಿ ಹೊಂದಿವೆ. ಆದುದರಿಂದ ನಮ್ಮ ರಾಜ್ಯಕ್ಕೆ ಹೊಸ ಸವಾಲುಗಳನ್ನು ಎದುರಿಸಿಕೊಂಡು ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಮಟ್ಟಕ್ಕೇರಲು ಮತ್ತು ಅವುಗಳೊಂದಿಗೆ ಸ್ಪರ್ಧಿಸಲು ಸಾಧ್ಯವಾಗುತ್ತದೆ.

## ಮುಂದುವರಿದ ಚಟುವಟಿಕೆಗಳು

- ಭಾರತದ ವಿಭಜನೆಗೆ ಸಂಬಂಧಿಸಿದ ಘಟನೆಗಳನ್ನು ಮತ್ತು ಚಿತ್ರಗಳನ್ನು ಸಂಗ್ರಹಿಸಿ ಡಿಜಿಟಲ್ ಸಂಚಿಕೆ ತಯಾರಿಸಿರಿ.
- 'ಸ್ವಾತಂತ್ರ್ಯಾ ನಂತರ ಭಾರತ - ನನ್ನ ಭೂಪಟ ಸಂಗ್ರಹ' ಎಂಬ ಶೀರ್ಷಿಕೆಯಲ್ಲಿ ಪಠ್ಯಭಾಗಕ್ಕೆ ಸಂಬಂಧಿಸಿ ಪ್ರಮುಖ ಭೂಪಟಗಳನ್ನು ಸೇರಿಸಿಕೊಂಡು ಡಿಜಿಟಲ್ ಅಟ್ಲಸ್ ತಯಾರಿಸಿರಿ.

- ಕೇರಳ ಸರಕಾರವು ಶೈಕ್ಷಣಿಕ ರಂಗದಲ್ಲಿ ಮತ್ತು ಆರೋಗ್ಯ ರಂಗದಲ್ಲಿ ಜಾರಿಗೊಳಿಸುತ್ತಿರುವ ಪ್ರಮುಖ ಯೋಜನೆಗಳು ಮತ್ತು ಅವುಗಳ ಉದ್ದೇಶಗಳನ್ನು ಸೇರಿಸಿಕೊಂಡು ಡಿಜಿಟಲ್ ಪ್ರಸಂಟೇಷನ್ ತಯಾರಿಸಿರಿ.
- ಸ್ವತಂತ್ರ ಭಾರತದ ಶೈಕ್ಷಣಿಕ ವಲಯವನ್ನು ಉತ್ತಮಗೊಳಿಸಲು ಜಾರಿಗೊಳಿಸಲಾದ ಪ್ರಮುಖ ಸುಧಾರಣೆಗಳನ್ನು ಕಾಲಗಣನಾ ಕ್ರಮದಲ್ಲಿ ಪಟ್ಟಿ ಮಾಡಿರಿ.
- ನಿಮ್ಮ ಶಾಲೆಯ ಶೈಕ್ಷಣಿಕ ಚಟುವಟಿಕೆಗಳನ್ನು ಉತ್ತಮ ಪಡಿಸುವುದರಲ್ಲಿ ಸ್ಥಳೀಯಾಡಳಿತ ಸಂಸ್ಥೆಗಳ ಪಾತ್ರದ ಕುರಿತು ಚರ್ಚೆಯನ್ನು ಏರ್ಪಡಿಸಿರಿ.
- ಬಾಹ್ಯಾಕಾಶ ಸಂಶೋಧನೆ ಕಾರ್ಯಾಚರಣೆಗಳಲ್ಲಿ ಭಾರತದ ಹೆಮ್ಮೆಯ ಸಾಧನೆಗಳನ್ನು ಪ್ರತಿಬಿಂಬಿಸುವ ಡಿಜಿಟಲ್ ಆಲ್ಬಂ ತಯಾರಿಸಿರಿ.



# 8

# ಪ್ರಜಾಪ್ರಭುತ್ವ : ಒಂದು ಭಾರತೀಯ ಅನುಭವ

*ಶತಮಾನಗಳಿಂದ ವಾಯುವ್ಯ ಗಡಿಯಲ್ಲಿ ಜೀವಿಸುತ್ತಿದ್ದ ಲಕ್ಷಾಂತರ ಹಿಂದೂಗಳು ಮತ್ತು ಸಿಖ್ಖರು ಅವರ ಮನೆಗಳನ್ನು ತೊರೆದು ಸ್ವಯಂ ರಕ್ಷಣೆಗಾಗಿ ಸಿಖ್ ಮತ್ತು ಹಿಂದೂಗಳು ಬಹುಸಂಖ್ಯಾತರಿರುವ ಪ್ರದೇಶವಾಗಿರುವ ಪೂರ್ವದ ಪ್ರದೇಶಗಳಿಗೆ ಪಲಾಯನ ಮಾಡಿದರು. ಅವರು ಕಾಲ್ನಡಿಗೆ ಯಲ್ಲೂ ಎತ್ತಿನಗಾಡಿಗಳಲ್ಲೂ ಲಾರಿಗಳಲ್ಲೂ ಕಿಕ್ಕಿರಿದೂ ರೈಲುಗಳ ಬದಿ ಮತ್ತು ಮೇಲ್ಫಾವಣಿಗಳಲ್ಲಿ ನಿಂತುಕೊಂಡೂ ಪ್ರಯಾಣಿಸಿದರು. ಅವರು ತಮ್ಮ ಯಾತ್ರೆಯ ಮಧ್ಯೆ ಪಶ್ಚಿಮದಲ್ಲಿರುವ ಸುರಕ್ಷಿತವಾದ ಪ್ರದೇಶಗಳಿಗೆ ಪ್ರಯಾಣಿಸುವ ಮುಸ್ಲಿಮರೊಂದಿಗೆ ಸೇತುವೆಗಳಲ್ಲೂ ಬೀದಿಗಳಲ್ಲೂ ರೈಲು ನಿಲ್ದಾಣಗಳಲ್ಲೂ ಕಲಹ ಮಾಡಬೇಕಾಯಿತು. ಈ ಗಲಭೆಯು ಸರ್ವನಾಶಕ್ಕೆ ಕಾರಣವಾಯಿತು. 1947ರ ಬೇಸಿಗೆ ಕಾಲದಲ್ಲಿ ಪಾಕಿಸ್ತಾನ ಎಂಬ ಹೊಸ ರಾಷ್ಟ್ರದ ರೂಪೀಕರಣವನ್ನು ಅಧಿಕೃತವಾಗಿ ಘೋಷಿಸಿದಾಗ ಹಿಂದು ಗಳು, ಮುಸ್ಲಿಮರು ಮತ್ತು ಸಿಖ್ಖರನ್ನು ಒಳಗೊಂಡ ಹತ್ತು ಮಿಲಿಯದಷ್ಟು ಜನರು ಪಲಾಯನಗೈದಿದ್ದರು. ಮಳೆಗಾಲವು ಆರ್ಭಟಿಸತೊಡಗಿದಾಗ ಅವರಲ್ಲಿ ಒಂದು ಮಿಲಿಯದಷ್ಟು ಜನರು ಮರಣ ಹೊಂದಿದ್ದರು. ಇಡೀ ಉತ್ತರ ಭಾರತವು ಆಯುಧಗಳನ್ನು ಹಿಡಿದು, ಭಯದಲ್ಲಿ ಹಾಗೂ ಅಡಗುವಿಕೆಯಲ್ಲಿ ಮುಳುಗಿ ಹೋಗಿತ್ತು.*

*Source*: Khushwant Singh, *Train to Pakistan*

ನೀವು ಓದಿದ್ದು ಪ್ರಸಿದ್ಧ ಲೇಖಕರಾದ ಖುಷ್ವಂತ್ ಸಿಂಗ್‌ರ ಟ್ರೈನ್ ಟು ಪಾಕಿಸ್ತಾನ್ ಎಂಬ ಕಾದಂಬರಿಯಿಂದ ಆಯ್ದ ಭಾಗವಾಗಿದೆ. 1947ರ ಭಾರತದ ವಿಭಜನೆಯ ನಂತರ ಸಂಭವಿಸಿದ ನಿರಾಶ್ರಿತರ ಪ್ರವಾಹ ಹಾಗೂ ಜನರು ಅನುಭವಿಸಿದ ಯಾತನೆಗಳ ಕುರಿತು ಇಲ್ಲಿ ವಿವರಿಸಲಾಗಿದೆ. ಸ್ವಾತಂತ್ರ್ಯಾ ನಂತರದ ಭಾರತವು ಎದುರಿಸಬೇಕಾಗಿ ಬಂದ ಪ್ರಮುಖ ಸವಾಲುಗಳ ಕುರಿತು ಹಿಂದಿನ ಅಧ್ಯಾಯದಲ್ಲಿ ನಾವು ಚರ್ಚಿಸಿದ್ದೇವಲ್ಲವೇ. ಸ್ವತಂತ್ರ ಭಾರತವು ಎದುರಿಸಬೇಕಾಗಿ ಬಂದ ಪ್ರಮುಖ ಸವಾಲುಗಳು ಯಾವುವಾಗಿದ್ದವು?

- ವಿಭಜನೆಯ ನಂತರದ ವಲಸೆ ಹಾಗೂ ಪಲಾಯನ
- ..........................................................................................
- ..........................................................................................

ವಿಭಜನೆ ಹಾಗೂ ವಿಭಜನೆಯ ನಂತರದ ವಲಸೆ ಮತ್ತು ಪಲಾಯನವು ಭಾರತೀಯ ಸಮಾಜದಲ್ಲಿ ಬಹುದೊಡ್ಡ ಪರಿವರ್ತನೆಗಳನ್ನುಂಟುಮಾಡಿತು. ಪಾಕಿಸ್ತಾನದಿಂದ ಭಾರತಕ್ಕೆ ವಲಸೆ ಬಂದವರ ಪುನರ್ವಸತಿಯು ಆಯಾ ಪ್ರದೇಶಗಳಲ್ಲಿ ಧಾರ್ಮಿಕ, ಭಾಷಿಕ, ಸಾಮಾಜಿಕ ಹಾಗೂ ಆರ್ಥಿಕ ಸಮಸ್ಯೆಗಳನ್ನು ಉಂಟು ಮಾಡಿತು. ಇವುಗಳಿಗೆ ರಾಜಕೀಯ ಪರಿಹಾರವನ್ನು ಕಂಡುಹಿಡಿಯಬೇಕಾದದ್ದು ಅನಿವಾರ್ಯವಾಗಿತ್ತು. ಅಪಹರಣಕ್ಕೊಳಗಾದ ವ್ಯಕ್ತಿಗಳಿಗಿರುವ (ಚೇತರಿಕೆ ಮತ್ತು ಪುನರ್ವಸತಿ) ಕಾನೂನು 1949 (The Abducted Persons (Recovery and Restoration) Act, 1949), ಪಲಾಯನ ಮಾಡಿದವರಿಗಿರುವ (ನಷ್ಟಪರಿಹಾರ ಮತ್ತು ಪುನರ್ವಸತಿ) ಕಾನೂನು 1954 (The Displaced Persons (Compensation and Rehabilitation) Act, 1954), ಪೌರತ್ವ ಕಾನೂನು 1955 (Citizenship Act of 1955) ಮುಂತಾದ ಕಾನೂನುಗಳ ಮೂಲಕ ದೇಶವು ಈ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸಿತು. ಇದಕ್ಕೆ ಹೊರತಾಗಿ ಅಲ್ಪಸಂಖ್ಯಾತರ ಹಕ್ಕುಗಳನ್ನು ಮೂಲಭೂತ ಹಕ್ಕುಗಳಾಗಿ ಸಂವಿಧಾನದಲ್ಲಿ ಸೇರಿಸಲಾಯಿತು.

ದೇಶೀಯ ರಾಜ್ಯಗಳ ವಿಲೀನವು ಸ್ವತಂತ್ರ ಭಾರತವು ಎದುರಿಸಿದ ಮತ್ತೊಂದು ಪ್ರಮುಖ ಸವಾಲಾಗಿತ್ತು. ಮೂರು ಒಪ್ಪಂದಗಳ ಮೂಲಕ ವಿಲೀನ ಪ್ರಕ್ರಿಯನ್ನು ಜಾರಿಗೊಳಿಸಲಾಯಿತು.

- **ಯಥಾಸ್ಥಿತಿ ಒಪ್ಪಂದ (Stand Still Agreement)**

ದೇಶಿಯ ರಾಜ್ಯಗಳು ಅವರ ಯಥಾಸ್ಥಿತಿಯನ್ನು ಮುಂದುವರಿಸಬೇಕೆಂಬುದು ಈ ಒಪ್ಪಂದದ ಷರತ್ತಾಗಿತ್ತು. ಇದರ ಮೂಲಕ ಈ ರಾಜ್ಯಗಳು ಪಾಕಿಸ್ತಾನದೊಂದಿಗೆ ಸೇರುವುದನ್ನು ತಡೆಯಲು ಸಾಧ್ಯವಾಯಿತು.

- **ಸೇರ್ಪಡೆ ಒಪ್ಪಂದ (Instrument of Accession)**

ಇದು ದೇಶೀಯ ರಾಜ್ಯಗಳು ಭಾರತ ಒಕ್ಕೂಟದೊಂದಿಗೆ ವಿಲೀನಗೊಳ್ಳುವುದಕ್ಕೆ ಒಪ್ಪಿಗೆಯನ್ನು ನೀಡುವ ಒಪ್ಪಂದವಾಗಿತ್ತು. ಇದರೊಂದಿಗೆ ಆಂತರಿಕ ಸ್ವಯಂ ಆಡಳಿತಕ್ಕಿರುವ ಹಕ್ಕನ್ನು ಈ ದೇಶೀಯ ರಾಜ್ಯಗಳಿಗೆ ನೀಡಲಾಯಿತು.

- **ವಿಲೀನ ಒಪ್ಪಂದ (Merger Agreement)**

ಇದು ದೇಶೀಯ ರಾಜ್ಯಗಳು ಸಂಪೂರ್ಣವಾಗಿ ಭಾರತ ಒಕ್ಕೂಟದಲ್ಲಿ ಸೇರ್ಪಡೆಗೊಳ್ಳುವುದಕ್ಕಿರುವ ಒಪ್ಪಂದ ವಾಗಿತ್ತು. ಈ ಒಪ್ಪಂದದ ಪ್ರಕಾರ ಸ್ವಯಂ ಆಡಳಿತದ ಹಕ್ಕು ಇಲ್ಲದಾಯಿತು.




ಸ್ವಾತಂತ್ರ್ಯ ಲಭಿಸಿದ ನಂತರ ಒಂದು ತಾತ್ಕಾಲಿಕ ಸರಕಾರವು ಭಾರತದ ಆಡಳಿತವನ್ನು ನಡೆಸಿತು. ಪ್ರಜಾಪ್ರಭುತ್ವ ವ್ಯವಸ್ಥೆಯ ಸ್ಥಾಪನೆಗಾಗಿ ಜನರಿಂದ ಆರಿಸಲ್ಪಟ್ಟ ಒಂದು ಸರಕಾರ ವನ್ನು ರಚಿಸಬೇಕಾದದ್ದು ಅತಿ ಅಗತ್ಯವಾಗಿತ್ತು. ಇದಕ್ಕೆ ಸ್ವತಂತ್ರ ಹಾಗೂ ನ್ಯಾಯಯುತವಾದ ಚುನಾವಣೆಯು ಅವಶ್ಯವಾಗಿತ್ತು. ಇದಕ್ಕಾಗಿ ಸಂವಿಧಾನ ಬದ್ಧವಾದ ಚುನಾವಣಾ ಆಯೋಗವು 1950 ಜನವರಿ 25ರಂದು ಅಸ್ತಿತ್ವಕ್ಕೆ ಬಂತು. ಮೊದಲ ಚುನಾವಣೆಯು 1951 ಅಕ್ಟೋಬರ್ ನಿಂದ 1952 ಫೆಬ್ರವರಿಯ ವರೆಗೆ ನಡೆಯಿತು. ಭಾರತದ ಮೊದಲ ಸಾರ್ವತ್ರಿಕ ಚುನಾವಣೆಯ ಕುರಿತು ಹಿಂದೂಸ್ಥಾನ್ ಟೈಮ್ಸ್ ಎಂಬ ಪ್ರಮುಖ ಇಂಗ್ಲೀಷ್ ದಿನಪತ್ರಿಕೆಯಲ್ಲಿ ಪ್ರಕಟವಾದ ನಿರೀಕ್ಷಣೆಯನ್ನು ಕೆಳಗೆ ಕೊಡಲಾಗಿದೆ.


DELHI EDITION — Regd. No. D. 252

The Hindustan Times

LARGEST CIRCULATION IN NORTHERN, NORTH-WESTERN AND CENTRAL INDIA

VOL. XXVII. NO. 344 — PRICE TWO ANNAS

"ಜಾಗತಿಕ ಚರಿತ್ರೆಯಲ್ಲಿ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ಚುನಾವಣೆಯ ಪ್ರಯೋಗವನ್ನು ಭಾರತೀಯ ಜನತೆಯು ಅತ್ಯಂತ ಸ್ತುತ್ಯರ್ಹವಾದ ರೀತಿಯಲ್ಲಿ ನಿರ್ವಹಿಸಿದರೆಂಬುದು ಸಾವತ್ರಿಕವಾಗಿ ಅಂಗೀಕೃತವಾಯಿತು."

ಮೊದಲ ಚುನಾವಣೆಯನ್ನು ಒಂದು ಪ್ರಯೋಗ ಎಂದು ಬಣ್ಣಿಸಲು ಕಾರಣ ವೇನಾಗಿರಬಹುದು?

ಭಾರತದಂತಹ ವಿಶಾಲವಾದ ಹಾಗೂ ವೈವಿಧ್ಯಪೂರ್ಣವಾದ ಒಂದು ದೇಶದಲ್ಲಿ ಸ್ವತಂತ್ರ ಮತ್ತುನ್ಯಾಯೋಚಿತವಾದ ಚುನಾವಣೆಯನ್ನುನಡೆಸುವುದೆಂಬುದು ಅನೇಕ ಸವಾಲುಗಳನ್ನು ಹೊಂದಿರುವ ಕಾರ್ಯವಾಗಿತ್ತು. ಅವು ಯಾವುವು ಎಂಬುದನ್ನು ಪರಿಶೀಲಿಸೋಣ.

- ಮತದಾರ ಕ್ಷೇತ್ರದ ಮೇರೆಯನ್ನು ನಿರ್ಣಯಿಸುವುದು.
- ವಯಸ್ಕ ಮತದಾನದ ಹಕ್ಕಿನ ಆಧಾರದಲ್ಲಿ ಮತದಾರರ ಪಟ್ಟಿಯನ್ನು ತಯಾರಿಸುವುದು.
- ಮತದಾನ ಮಾಡಬೇಕಾದ ಅವಶ್ಯಕತೆಯ ಕುರಿತು ನಿರಕ್ಷರರಾದ ಬಹುಸಂಖ್ಯಾತ ಜನರಿಗೆ ತಿಳಿಯಪಡಿಸುವುದು.
- ಅಗತ್ಯವಿರುವಷ್ಟು ಚುನಾವಣಾ ಅಧಿಕಾರಿಗಳನ್ನು ನೇಮಿಸಿ ತರಬೇತುಗೊಳಿಸುವುದು.
- ಪಾರದರ್ಶಕ, ನಿಷ್ಪಕ್ಷಪಾತ, ನೀತಿಯುಕ್ತವಾದ ಚುನಾವಣೆಯನ್ನು ಖಾತರಿಪಡಿಸುವುದು.

ಇಂತಹ ಅನೇಕ ಸವಾಲುಗಳನ್ನು ಪರಿಹರಿಸಿಕೊಂಡು ನಡೆದ ಸಾರ್ವತ್ರಿಕ ಚುನಾವಣೆಯ ನಂತರ ಜವಾಹರ್‌ಲಾಲ್ ನೆಹರೂರವರು ಮೊದಲ ಪ್ರಧಾನಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿ ಅಧಿಕಾರಕ್ಕೆ ಬಂದರು. ಇದರೊಂದಿಗೆ ದೇಶದಲ್ಲಿ ಪ್ರಜಾಪ್ರಭುತ್ವ ಆಡಳಿತ ವ್ಯವಸ್ಥೆಯು ಆರಂಭವಾಯಿತು.

ಸ್ವಾತಂತ್ರ್ಯಾನಂತರ ಭಾರತದಲ್ಲಿ ಏಕತೆಯನ್ನು ಸ್ಥಾಪಿಸುವುದಕ್ಕಾಗಿ ಹಾಗೂ ಪ್ರಜಾಪ್ರಭುತ್ವ ಆಡಳಿತ ವ್ಯವಸ್ಥೆಯನ್ನು ಜಾರಿಗೊಳಿಸುವುದಕ್ಕಾಗಿ ಕೈಗೊಂಡ ಕ್ರಮಗಳನ್ನು ಚರ್ಚಿಸಿ ಟಿಪ್ಪಣಿ ತಯಾರಿಸಿರಿ.

### ಭಾರತದಲ್ಲಿ ಏಕಪಕ್ಷ ಆಧಿಪತ್ಯ

ಒಂದು ರಾಜಕೀಯ ಪಕ್ಷವು ನಿರಂತರವಾಗಿ ದೊಡ್ಡ ಬಹುಮತದೊಂದಿಗೆ ಚುನಾವಣೆಯಲ್ಲಿ ಗೆದ್ದು ಅಧಿಕಾರವನ್ನು ಉಳಿಸಿಕೊಳ್ಳುವುದನ್ನು ಭಾರತದಲ್ಲಿ ಏಕಪಕ್ಷಾಧಿಪತ್ಯ ಆಡಳಿತ ಎಂದು ಹೇಳುತ್ತಾರೆ. ಭಾರತದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯೊಳಗೆ ಏಕಪಕ್ಷಾಧಿಪತ್ಯವು ಅಸ್ತಿತ್ವದಲ್ಲಿತ್ತು.

ಮೊದಲ ಚುನಾವಣೆಯಲ್ಲಿ ಒಂದೇ ರಾಜಕೀಯ ಪಕ್ಷದ ಮೇಲೆ ಹೆಚ್ಚಿನ ಜನರು ತಮ್ಮ ವಿಶ್ವಾಸವನ್ನು ಅರ್ಪಿಸಿದ್ದು ಏಕಪಕ್ಷಾಧಿಪತ್ಯ ಆಡಳಿತದ ಆರಂಭಕ್ಕೆ ಕಾರಣವಾಯಿತು. ಅನಂತರ ಏಕಪಕ್ಷಾಧಿಪತ್ಯ ವ್ಯವಸ್ಥೆಯು ಕ್ರಮೇಣ ನಿಂತು ಹೋಯಿತಲ್ಲದೆ ಬಹುಪಕ್ಷ ವ್ಯವಸ್ಥೆ ಮತ್ತು ಒಕ್ಕೂಟ ವ್ಯವಸ್ಥೆಗೆ ಭಾರತದ ರಾಜಕೀಯವು ಪರಿವರ್ತನೆಯಾಯಿತು.

## ಏಕಪಕ್ಷಾಧಿಪತ್ಯದಿಂದ ಒಕ್ಕೂಟ ವ್ಯವಸ್ಥೆಯೆಡೆಗೆ

ಪ್ರಥಮ ಚುನಾವಣೆಯಲ್ಲಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ಸಿನ ನೇತೃತ್ವದಲ್ಲಿರುವ ಸರಕಾರವು ಬಹುಮತವನ್ನು ಗಳಿಸಿ ಅಧಿಕಾರಕ್ಕೆ ಬಂತು. ಅನಂತರ 1957ರಲ್ಲಿ ಮತ್ತು 1962 ರಲ್ಲಿ ನಡೆದ ಚುನಾವಣೆಗಳಲ್ಲಿಯೂ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಅಧಿಕಾರವನ್ನು ಉಳಿಸಿಕೊಂಡಿತು. 1967ರ ಚುನಾವಣೆಯಲ್ಲಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ಸಿಗೆ ರಾಷ್ಟ್ರಮಟ್ಟದಲ್ಲಿ ಆಧಿಪತ್ಯವನ್ನು ಉಳಿಸಿಕೊಳ್ಳಲು ಸಾಧ್ಯವಾದರೂ ರಾಜ್ಯಗಳಲ್ಲಿ ಕಾಂಗ್ರೆಸ್‌ನ ಪ್ರಾಬಲ್ಯಕ್ಕೆ ಹಿನ್ನಡೆಯುಂಟಾಯಿತು. ಆದರೆ 1989 ರವರೆಗಿನ ಚುನಾವಣೆಗಳಲ್ಲಿ (1977 ರಿಂದ 1979ರವರೆಗಿನ ಜನತಾ ಪಕ್ಷದ ಆಡಳಿತವನ್ನು ಹೊರತುಪಡಿಸಿದರೆ) ಕಾಂಗ್ರೆಸ್ ಪಕ್ಷವು ತನ್ನ ಮೇಲುಗೈಯನ್ನು ಸಾಧಿಸಿತ್ತು. 1977ರ ಚುನಾವಣೆಯಲ್ಲಿ ಕಾಂಗ್ರೆಸ್ ಪರಾಜಯಗೊಂಡಿತಲ್ಲದೆ ಜನತಾ ಪಕ್ಷದ ನೇತೃತ್ವದಲ್ಲಿರುವ ಸರಕಾರವು ಅಧಿಕಾರಕ್ಕೆ ಬಂತು. ಅನಂತರದ ಎರಡು ಚುನಾವಣೆಗಳಲ್ಲಿ (1980, 1984) ಕಾಂಗ್ರೆಸ್ ಸ್ವಂತ ಬಲದಿಂದ ಬಹುಮತವನ್ನು ಗಳಿಸಿತು. ಆದರೆ 1989ರ ಚುನಾವಣೆಯೊಂದಿಗೆ ಬಹುಪಕ್ಷ ಸಂಪ್ರದಾಯಾಧಾರಿತವಾದ ಒಕ್ಕೂಟ ವ್ಯವಸ್ಥೆಯೆಡೆಗೆ ಭಾರತದ ಪ್ರಜಾಪ್ರಭುತ್ವವು ಸಾಗಿತು.

1989ರ ನಂತರ ಜನತಾದಳದ ನೇತೃತ್ವದಲ್ಲಿರುವ ನೇಷನಲ್ ಫ್ರಂಟ್, ಬಳಿಕ 1991ರಲ್ಲಿ ಇತರ ರಾಜಕೀಯ ಪಕ್ಷಗಳ ಬೆಂಬಲದೊಂದಿಗೆ ಕಾಂಗ್ರೆಸ್ ಅಧಿಕಾರಕ್ಕೆ ಬಂತು. 1996ರ ಚುನಾವಣೆಯ ನಂತರ ಆರಂಭದಲ್ಲಿ ಬಿಜೆಪಿ ಹಾಗೂ ಅನಂತರ ವಿವಿಧ ಪಕ್ಷಗಳು ಸೇರಿರುವ ಐಕ್ಯರಂಗವು (United Front) ಸರಕಾರವನ್ನು ರೂಪಿಸಿತು. 1998, 1999ನೇ ಇಸವಿಗಳಲ್ಲಿ ನಡೆದ ಚುನಾವಣೆಗಳಲ್ಲಿ ಬಿಜೆಪಿಯ ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟವು (National Democratic Alliance) ಅಧಿಕಾರಕ್ಕೇರಿತು. 2004, 2009 ನೇ ಇಸವಿಗಳಲ್ಲಿ ನಡೆದ ಚುನಾವಣೆಗಳಲ್ಲಿ ಕಾಂಗ್ರೆಸ್ ನೇತೃತ್ವದ ಯುನೈಟೆಡ್ ಪ್ರೋಗ್ರೆಸ್ಸಿವ್ ಅಲಯನ್ಸ್ (United Progressive Alliance) ಅಧಿಕಾರಕ್ಕೆ ಬಂತು. ನಂತರ 2014, 2019, 2024ನೇ ಇಸವಿಗಳಲ್ಲಿ ನಡೆದ ಚುನಾವಣೆಗಳಲ್ಲಿ ನಿರಂತರವಾಗಿ ಬಿಜೆಪಿಯ ನೇತೃತ್ವದಲ್ಲಿರುವ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟವು ಗೆದ್ದು ಅಧಿಕಾರವನ್ನು ಉಳಿಸಿಕೊಂಡಿತು.

ಭಾರತದ ಒಕ್ಕೂಟ ರಾಜಕೀಯದ ಚರಿತ್ರೆಯನ್ನು ಪರಿಶೀಲಿಸುವಾಗ ಪ್ರಮುಖವಾಗಿ ಕೆಳಗೆ ತಿಳಿಸಿರುವ ವಿಧಾನಗಳಲ್ಲಿ ಸರಕಾರಗಳು ರೂಪುಗೊಂಡವು.

- ಚುನಾವಣೆಗಿಂತ ಮೊದಲೇ ಒಂದು ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಆಧಾರದಲ್ಲಿ ಒಕ್ಕೂಟವಾಗಿ ಸ್ಪರ್ಧಿಸಲು ರಾಜಕೀಯ ಪಕ್ಷಗಳು ತಮ್ಮೊಳಗೆ ಒಪ್ಪಂದವನ್ನು ಮಾಡಿಕೊಳ್ಳುವುದು.
- ಚುನಾವಣೆಯ ನಂತರ ಒಕ್ಕೂಟವನ್ನು ರೂಪಿಸಿ ಸರಕಾರವನ್ನು ರಚಿಸುವುದು.
- ಲೋಕಸಭೆಯಲ್ಲಿ ಬಹುಮತವಿಲ್ಲದ ಸರಕಾರಕ್ಕೆ ಬಾಹ್ಯ ಬೆಂಬಲವನ್ನು ನೀಡುವುದು.

## ತುರ್ತು ಪರಿಸ್ಥಿತಿ - ಭಾರತೀಯ ಪ್ರಜಾಪ್ರಭುತ್ವದ ಬಿಕ್ಕಟ್ಟಿನ ಕಾಲ

ಪ್ರಥಮ ಚುನಾವಣೆಯಿಂದ ಪ್ರಾರಂಭಿಸಿ ವಿವಿಧ ಸರಕಾರಗಳ ಕಾಲಾನುಕ್ರಮಕ್ಕನುಗುಣವಾದ ಪಟ್ಟಿಯನ್ನು ತಯಾರಿಸಿರಿ.

ಮೇಲೆ ನೀಡಿರುವ ವಾರ್ತಾಕೊಲಾಷನ್ನು ಗಮನಿಸಿರಿ. ತುರ್ತು ಪರಿಸ್ಥಿತಿಯು ಭಾರತೀಯ




ಪ್ರಜಾಪ್ರಭುತ್ವವು ಎದುರಿಸಿದ ಒಂದು ಪ್ರಮುಖ ಬಿಕ್ಕಟ್ಟಾಗಿತ್ತು.



ಇಂದಿರಾಗಾಂಧಿ



ಮೊರಾರ್ಜಿ ದೇಸಾಯಿ



ಜಯಪ್ರಕಾಶ್ ನಾರಾಯಣ್

1975 ಜೂನ್ 25ರಂದು ದೇಶದಲ್ಲಿ ಆಂತರಿಕ ತುರ್ತು ಪರಿಸ್ಥಿತಿಯು ಘೋಷಿಸಲ್ಪಟ್ಟಿತು. ತುರ್ತು ಪರಿಸ್ಥಿತಿಯ ಭಾಗವಾಗಿ ಮೂಲಭೂತ ಹಕ್ಕುಗಳ ಸ್ಥಗಿತ, ಪತ್ರಿಕಾ ಸ್ವಾತಂತ್ರ್ಯದ ನಿರಾಕರಣೆ ಮೊದಲಾದ ಪ್ರಜಾಪ್ರಭುತ್ವ ಹಕ್ಕುಗಳ ನಿಷೇಧವನ್ನು ಜಾರಿಗೊಳಿಸಲಾಯಿತು. ಭಾರತದಲ್ಲಿ ತುರ್ತುಪರಿಸ್ಥಿತಿಯನ್ನು ಘೋಷಿಸುವುದಕ್ಕಿದ್ದ ಹಿನ್ನೆಲೆಯನ್ನು ನಾವು ಪರಿಶೀಲಿಸೋಣ. ದೇಶದ ವಿವಿಧ ಭಾಗಗಳಲ್ಲಿ ಕೇಂದ್ರ ಸರಕಾರಕ್ಕೆ ಎದುರಾಗಿ ಮೂಡಿಬಂದ ಪ್ರತಿಭಟನೆಗಳು ಇದಕ್ಕಿರುವ ಪ್ರಧಾನ ಕಾರಣಗಳಲ್ಲೊಂದಾಗಿತ್ತು. ಗುಜರಾತಿನಲ್ಲಿ ಮೊರಾರ್ಜಿ ದೇಸಾಯಿಯ ನೇತೃತ್ವದಲ್ಲಿ ನಡೆದ ಪ್ರತಿಭಟನೆಯು ರಾಜ್ಯ ಸರಕಾರವನ್ನು ವಿಸರ್ಜಿಸುವುದಕ್ಕೆ ಕಾರಣವಾಯಿತು. ಅನಂತರ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪರಾಜಯಗೊಂಡಿತು. ಜಯಪ್ರಕಾಶ್ ನಾರಾಯಣರ ನೇತೃತ್ವದಲ್ಲಿ ಬಿಹಾರದಲ್ಲಿ ನಿರಂತರವಾಗಿ ನಡೆದ ಪ್ರತಿಭಟನೆಗಳು ರಾಷ್ಟ್ರೀಯ ಮಟ್ಟದಲ್ಲೂ ಪ್ರಭಾವ ಬೀರಿದವು. ಇದು ಕೇಂದ್ರ ಸರಕಾರದ ವಿರುದ್ಧವಾದ ಪ್ರತಿಭಟನೆಗಳಿಗೂ ಕಾರಣವಾಯಿತು. 1970ರ ದಶಕಗಳಲ್ಲಿ ಎದುರಿಸಬೇಕಾಗಿ ಬಂದ ಆರ್ಥಿಕ ಬಿಕ್ಕಟ್ಟು, ಆಹಾರದ ಕ್ಷಾಮ, ನಿರುದ್ಯೋಗ ಎಂಬಿವುಗಳು ಈ ಪ್ರತಿಭಟನೆಗಳಿಗೆ ಕಾರಣಗಳಾಗಿದ್ದವು.

ಈ ರಾಜಕೀಯ ಬಿಕ್ಕಟ್ಟುಗಳ ಮಧ್ಯೆ ಪ್ರಧಾನ ಮಂತ್ರಿ ಇಂದಿರಾ ಗಾಂಧಿಗೆ ವಿರುದ್ಧವಾಗಿ ಅಲಹಾಬಾದ್ ಹೈಕೋರ್ಟಿನಲ್ಲಿದ್ದ ಚುನಾವಣಾ ದಾವೆಯಲ್ಲಿ ಪ್ರತಿಕೂಲ ತೀರ್ಪು ಬಂತಲ್ಲದೆ ಆ ಚುನಾವಣೆಯು ರದ್ದುಗೊಂಡಿತು. ತೀರ್ಪಿನಿಂದಾಗಿ ಇಂದಿರಾ ಗಾಂಧಿ ರಾಜೀನಾಮೆ ನೀಡಬೇಕೆಂಬ ಬೇಡಿಕೆಯೊಂದಿಗೆ ಪ್ರತಿಪಕ್ಷದವರು ತಮ್ಮ ಪ್ರತಿಭಟನೆಯನ್ನು ಬಲಪಡಿಸಿದರು. ಆದರೆ ಅಲಹಾಬಾದ್ ಹೈಕೋರ್ಟಿನ ತೀರ್ಪಿಗೆ ಸುಪ್ರೀಂಕೋರ್ಟ್ ತಡೆಯಾಜ್ಞೆಯನ್ನು ನೀಡಿತು. ಪ್ರತಿಪಕ್ಷಗಳ ಪ್ರತಿಭಟನೆಗಳು ಆಂತರಿಕ ಭದ್ರತೆಗೆ ಬೆದರಿಕೆಯಾಗಿವೆ ಎಂಬ ಕಾರಣವನ್ನು ಮುಂದಿಟ್ಟುಕೊಂಡು ಕೇಂದ್ರ ಸರಕಾರವು ಸಂವಿಧಾನದ 352ನೇ ವಿಧಿಯ ಪ್ರಕಾರ ದೇಶದಲ್ಲಿ ರಾಷ್ಟ್ರೀಯ ತುರ್ತುಪರಿಸ್ಥಿತಿಯನ್ನು ಘೋಷಿಸಿತು.

ರಾಷ್ಟ್ರೀಯ ತುರ್ತುಪರಿಸ್ಥಿತಿಯಿಂದಾಗಿ ಸಂವಿಧಾನದ ಫೆಡರಲ್ ವ್ಯವಸ್ಥೆಯು ಕೊನೆಗೊಂಡಿತು, ಕೇಂದ್ರ ಸರಕಾರದಲ್ಲಿ ಅಧಿಕಾರವು ಕೇಂದ್ರೀಕೃತವಾಯಿತು, ಮೂಲಭೂತ ಹಕ್ಕುಗಳನ್ನು ಸ್ಥಗಿತಗೊಳಿಸಲಾಯಿತು. ನ್ಯಾಯಾಂಗದ ವಿಮರ್ಶೆಯ ಅಧಿಕಾರವು ನಷ್ಟವಾಯಿತು. ಇದಲ್ಲದೆ ಇತರ ಯಾವೆಲ್ಲಾ ಪರಿಣಾಮಗಳನ್ನು ತುರ್ತುಪರಿಸ್ಥಿತಿಯು ಉಂಟು ಮಾಡಿತು ಎಂಬುದನ್ನು ಪರಿಶೀಲಿಸೋಣ.

- ವಿರೋಧಪಕ್ಷದ ನೇತಾರರನ್ನು ವಿಚಾರಣೆ ಮಾಡದೆ ಸೆರೆಮನೆಗೆ ತಳ್ಳಲಾಯಿತು.
- ಪತ್ರಿಕೆಗಳಿಗೆ ಹಾಗೂ ವಾರ್ತೆಗಳಿಗೆ ಸೆನ್ಸಾರ್‌ಶಿಪ್ಪನ್ನು ಹೇರಲಾಯಿತು.
- ಆರ್ಥಿಕ ನಿಯಂತ್ರಣವನ್ನು ಹೇರಲಾಯಿತು.

ಕಠಿಣವಾದ ನಿಯಂತ್ರಣಗಳು ಹಾಗೂ ದಬ್ಬಾಳಿಕೆಗಳೆಡೆಯಲ್ಲಿಯೂ ತುರ್ತು ಪರಿಸ್ಥಿತಿಗೆ ವಿರುದ್ಧವಾಗಿ ದೇಶವ್ಯಾಪಕವಾಗಿ ಅನೇಕ ಪ್ರತಿಭಟನೆಗಳು ಉಂಟಾದವು. ಇದರ ಪರಿಣಾಮವಾಗಿ 1977 ಮಾರ್ಚ್ ನಲ್ಲಿ ತುರ್ತುಪರಿಸ್ಥಿತಿಯನ್ನು ಹಿಂತೆಗೆಯಲಾಯಿತಲ್ಲದೆ ಚುನಾವಣೆಯನ್ನೂ ಘೋಷಿಸಲಾಯಿತು. ತುರ್ತು ಪರಿಸ್ಥಿತಿಯ ನಂತರ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪರಾಜಯಗೊಂಡಿತಲ್ಲದೆ ಜನತಾ ಪಕ್ಷದ ನೇತೃತ್ವದಲ್ಲಿ ಸರಕಾರವು ರೂಪಿಸಲ್ಪಟ್ಟು ಮೊರಾರ್ಜಿ ದೇಸಾಯಿಯವರು ಪ್ರಧಾನಮಂತ್ರಿಯಾಗಿ

ಅಧಿಕಾರಕ್ಕೆ ಬಂದರು. ತುರ್ತು ಪರಿಸ್ಥಿತಿಯ ಕಾಲಘಟ್ಟದಲ್ಲುಂಟಾದ ಬೆಳವಣಿಗೆಗಳು ಪ್ರಜಾಪ್ರಭುತ್ವದ ಸಂರಕ್ಷಣೆಯಲ್ಲಿ ಪೌರ ಸಮೂಹದ ಜಾಗೃತಿ, ಮಾಧ್ಯಮಗಳ ಹಸ್ತಕ್ಷೇಪ, ಪೌರರ ಹಕ್ಕುಗಳು ಎಂಬಿವುಗಳ ಪ್ರಾಮುಖ್ಯತೆಯನ್ನು ಸ್ಪಷ್ಟಪಡಿಸುತ್ತವೆ.

ತುರ್ತು ಪರಿಸ್ಥಿತಿಯು ಸೃಷ್ಟಿಸಿದ ಬಿಕ್ಕಟ್ಟುಗಳನ್ನು ಪ್ರಜಾಪ್ರಭುತ್ವ ಮಾರ್ಗದ ಮೂಲಕ ಭಾರತೀಯರು ಮೀರಿನಿಂತರು. ಇದು ಭಾರತೀಯ ಪ್ರಜಾಪ್ರಭುತ್ವದ ಶಕ್ತಿ ಹಾಗೂ ಪ್ರಾಮುಖ್ಯತೆಯನ್ನು ತಿಳಿಸುತ್ತದೆ. ಪ್ರಜಾಪ್ರಭುತ್ವವನ್ನು ನಾಶ ಮಾಡುವ ತುರ್ತುಪರಿಸ್ಥಿತಿಯಂತಹ ಸನ್ನಿವೇಶಗಳು ಪುನರಾವರ್ತಿಸದಂತೆ ಜಾಗೃತಿ ಉಂಟುಮಾಡಲು ಈ ಅನುಭವಗಳು ನಮಗೆ ಸಹಕಾರಿಯಾಗಿವೆ.

**ತುರ್ತುಪರಿಸ್ಥಿತಿ (Emergency)**

ಯುದ್ಧ, ಬಾಹ್ಯ ಆಕ್ರಮಣ, ಸಶಸ್ತ್ರ ದಂಗೆ ಎಂಬಿವುಗಳಿಂದಾಗಿ ದೇಶದ ಭದ್ರತೆಯು ಗಂಭೀರ ಬೆದರಿಕೆಯನ್ನು ಎದುರಿಸುತ್ತಿರುವ ಸನ್ನಿವೇಶಗಳಲ್ಲಿ ಕ್ರಮಗಳನ್ನು ಕೈಗೊಳ್ಳಲು ತುರ್ತುಪರಿಸ್ಥಿತಿಯು ಸರಕಾರಕ್ಕೆ ಅಧಿಕಾರವನ್ನು ನೀಡುತ್ತದೆ. ಇಂತಹ ಸನ್ನಿವೇಶಗಳಲ್ಲಿ ಸಂವಿಧಾನದ 352ನೇ ವಿಧಿಯ ಪ್ರಕಾರ ರಾಷ್ಟ್ರಪತಿಯವರು ಘೋಷಿಸುವ ನಿಯಂತ್ರಣಗಳೇ ತುರ್ತುಪರಿಸ್ಥಿತಿ ಆಗಿದೆ.

ತುರ್ತು ಪರಿಸ್ಥಿತಿಯ ಕಾಲಘಟ್ಟದ ಪತ್ರಿಕಾ ವಾರ್ತೆಗಳನ್ನು ಸಂಗ್ರಹಿಸಿ ಪ್ರದರ್ಶನವನ್ನು ಏರ್ಪಡಿಸಿರಿ.

ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವುದರಲ್ಲಿ ಹಾಗೂ ಪೌರರಿಗೆ ಪ್ರಜಾಪ್ರಭುತ್ವ ಶಿಕ್ಷಣವನ್ನು ನೀಡುವುದರಲ್ಲಿ ರಾಜಕೀಯ ಪಕ್ಷಗಳೊಂದಿಗೆ, ಕೆಲವು ಸಾಮಾಜಿಕ ಸಂಘಟನೆಗಳು ಮತ್ತು ಆಸಕ್ತ ಗುಂಪುಗಳು ಕೂಡಾ ಪ್ರಧಾನ ಪಾತ್ರವನ್ನು ವಹಿಸಿವೆ. ಅವುಗಳಲ್ಲಿ ಕೆಲವನ್ನು ನಾವು ಪರಿಚಯಿಸಿಕೊಳ್ಳೋಣ.

## ಜನಪರ ಚಳುವಳಿಗಳು ಮತ್ತು ಭಾರತೀಯ ಪ್ರಜಾಪ್ರಭುತ್ವ

ಪ್ರಜಾಸತ್ತಾತ್ಮಕ ಭಾರತದಲ್ಲಿ ವಿವಿಧ ಜನವಿಭಾಗಗಳ ಹಿತಾಸಕ್ತಿಯನ್ನು ಕಾಪಾಡುವುದಕ್ಕಾಗಿ ಮತ್ತು ಅಧಿಕಾರದಲ್ಲಿ ಪ್ರಾತಿನಿಧ್ಯವನ್ನು ಗಳಿಸುವುದಕ್ಕಾಗಿ ಅನೇಕ ಚಳುವಳಿಗಳು ರೂಪುಗೊಂಡವು. 1970 ರ ನಂತರ ಭಾರತದ ದಲಿತರು, ಸ್ತ್ರೀಯರು, ಕೃಷಿಕರು ಮೊದಲಾದ ಸಾಮಾಜಿಕ ವಿಭಾಗದವರಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯ ಭಾಗವಾದ ಮುಖ್ಯವಾಹಿನಿಯ ರಾಜಕೀಯ ಪಕ್ಷಗಳು ನಮ್ಮ ಸಮಸ್ಯೆಗಳನ್ನು ಮತ್ತು ಅವಶ್ಯಕತೆಗಳನ್ನು ಸೂಕ್ತವಾದ ರೀತಿಯಲ್ಲಿ ಪರಿಗಣಿಸುವುದಿಲ್ಲ ಎಂಬ ಪ್ರಜ್ಞೆಯು ಬಲಗೊಂಡಿತು. ಈ ವರ್ಗದವರು ಅವರದ್ದೇ ಆದ ಚಳುವಳಿಗಳನ್ನು ರೂಪಿಸಿದರಲ್ಲದೆ ಆಂದೋಲನಗಳನ್ನೂ ನಡೆಸಿದರು. ಇದರಲ್ಲಿ ಕೆಲವು ಚಳುವಳಿಗಳನ್ನು ಪರಿಚಯಿಸಿಕೊಳ್ಳೋಣ.

## ಹಿಂದುಳಿದ ವರ್ಗದವರ ಚಳುವಳಿಗಳು ಮತ್ತು ಮಂಡಲ್ ಆಯೋಗ

ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ವಿಭಾಗಗಳಲ್ಲಿ ಒಳಪಡದ ಹಾಗೂ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವ ಜನ ವಿಭಾಗಗಳನ್ನು ಇತರ ಹಿಂದುಳಿದ ವರ್ಗಗಳು (Other Backward Classes) ಎಂದು ಕರೆಯುತ್ತಾರೆ.

ಈ ವರ್ಗದವರಿಗೆ ಸರಕಾರಿ ಉದ್ಯೋಗಗಳಲ್ಲಿ ಪ್ರಾತಿನಿಧ್ಯ ಲಭಿಸುವುದಕ್ಕಾಗಿ ಮತ್ತು ಶೈಕ್ಷಣಿಕ ಪ್ರಗತಿಗಾಗಿ ಅನೇಕ ಚಳುವಳಿಗಳು ಹಾಗೂ ರಾಜಕೀಯ ಪಕ್ಷಗಳು ಹುಟ್ಟಿಕೊಂಡವು.


ಬಿ. ಪಿ. ಮಂಡಲ್


ವಿ.ಪಿ. ಸಿಂಗ್

ಹಿಂದುಳಿದ ವರ್ಗಗಳ ಸಾಮಾಜಿಕ ಹಿನ್ನಡೆಗಿರುವ ಕಾರಣಗಳನ್ನು ಅಧ್ಯಯನ ಮಾಡಿ ಅದಕ್ಕೆ ಪರಿಹಾರವನ್ನು ಕಂಡುಕೊಳ್ಳುವುದಕ್ಕಾಗಿ 1953 ರಲ್ಲಿ ಕೇಂದ್ರ ಸರಕಾರವು ಒಂದು ಆಯೋಗವನ್ನು ನೇಮಿಸಿತು. ಇದನ್ನು ಕಾಕಾ ಕಾಲೇಲ್ಕರ್ (Kaka Kalelkar) ಆಯೋಗ ಎಂದು ಕರೆಯುತ್ತಾರೆ. ಆಯೋಗವು ಕೆಲವು ಶಿಫಾರಸ್ಸುಗಳನ್ನು ಸಮರ್ಪಿಸಿದರೂ ಅವುಗಳು ಜಾರಿಯಾಗಲಿಲ್ಲ. ತುರ್ತು ಪರಿಸ್ಥಿತಿಯ ನಂತರ ಅಧಿಕಾರಕ್ಕೆ ಬಂದ ಜನತಾ ಸರಕಾರವು ಒ.ಬಿ.ಸಿ. ವರ್ಗಗಳ ಸಾಮಾಜಿಕ ಹಾಗೂ ಶೈಕ್ಷಣಿಕ ಹಿಂದುಳಿಯುವಿಕೆಯ ಕುರಿತು ಅಧ್ಯಯನ ನಡೆಸಿ ಪರಿಹಾರವನ್ನು ಶಿಫಾರಸು ಮಾಡುವುದಕ್ಕಾಗಿ 1979ರಲ್ಲಿ ಬಿ.ಪಿ.ಮಂಡಲ್ ಅಧ್ಯಕ್ಷರಾಗಿರುವ ಮತ್ತೊಂದು ಆಯೋಗವನ್ನು ರಚಿಸಿತು. ಇದನ್ನು ಎರಡನೇ ಹಿಂದುಳಿದ ವರ್ಗಗಳ ಆಯೋಗ (Second Backward Classes Commission) ಎಂದೂ ಮಂಡಲ್ ಆಯೋಗ ಎಂದೂ ಕರೆಯುತ್ತಾರೆ.

ಸರಕಾರಿ ಉದ್ಯೋಗಗಳಲ್ಲಿ ಮತ್ತು ಶೈಕ್ಷಣಿಕ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗದವರಿಗೆ ಶೇಕಡಾ ಇಪ್ಪತ್ತೇಳರಷ್ಟು ಮೀಸಲಾತಿಯನ್ನು ನೀಡಬೇಕೆಂಬ ಶಿಫಾರಸ್ಸನ್ನೊಳಗೊಂಡ ವರದಿಯನ್ನು 1980ರಲ್ಲಿ ಆಯೋಗವು ಕೇಂದ್ರ ಸರಕಾರಕ್ಕೆ ಸಮರ್ಪಿಸಿತು. ವಿ.ಪಿ. ಸಿಂಗ್‌ರ ನೇತೃತ್ವದಲ್ಲಿರುವ ರಾಷ್ಟ್ರೀಯ ಒಕ್ಕೂಟವು 1990ರಲ್ಲಿ ಈ ವರದಿಯನ್ನು ಜಾರಿಗೊಳಿಸಲು ತೀರ್ಮಾನಿಸಿತು. ಈ ತೀರ್ಮಾನವು ಉತ್ತರ ಭಾರತದ ಹಲವು ನಗರಗಳಲ್ಲಿ ಗಲಭೆಗಳಿಗೆ ಮತ್ತು ಹಿಂಸಾತ್ಮಕಪ್ರತಿಭಟನೆಗಳಿಗೆಕಾರಣವಾಯಿತು.ಆದರೆಅನಂತರಈವರದಿಯನ್ನು ಜಾರಿಗೊಳಿಸಲು ಸುಪ್ರೀಂ ಕೋರ್ಟ್ ಅನುಮತಿಯನ್ನು ನೀಡಿತು. ಇಂದು ದೇಶದ ಎಲ್ಲಾ ಪ್ರಮುಖ ರಾಜಕೀಯ ಪಕ್ಷಗಳು ಒ.ಬಿ.ಸಿ. ಮೀಸಲಾತಿಯನ್ನು ಅಂಗೀಕರಿಸಿವೆ. ಜನಸಂಖ್ಯೆಯ ಅರ್ಧದಷ್ಟಿರುವ ಹಿಂದುಳಿದ ವರ್ಗಗಳ ಯೋಗಕ್ಷೇಮವನ್ನು ಖಾತರಿಪಡಿಸುವುದಕ್ಕೆ ಸಾಧ್ಯವಾಯಿತು ಎಂಬ ದೃಷ್ಟಿಯಲ್ಲಿ ಮಂಡಲ್ ಆಯೋಗದ ವರದಿಗೆ ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬಹುದೊಡ್ಡ ಪ್ರಾಮುಖ್ಯವಿದೆ. ಮಂಡಲ್ ಆಯೋಗದ ರೂಪೀಕರಣದಿಂದ ಆರಂಭವಾಗಿ ವರದಿ ಜಾರಿಗೊಳಿಸುವಲ್ಲಿಯ ವರೆಗಿನ ಅವಧಿಯಲ್ಲಿ ಹಿಂದುಳಿದ ವರ್ಗಗಳಿಗೆ ಪ್ರಾಮುಖ್ಯವಿರುವ ಅನೇಕ ರಾಜಕೀಯ ಚಳುವಳಿಗಳು ಹಾಗೂ ಸಾಮಾಜಿಕ ಚಳುವಳಿಗಳು ಹುಟ್ಟಿಕೊಂಡವು. ಜನತಾದಳ ಮತ್ತು ಜನತಾದಳದಿಂದ ರೂಪುಗೊಂಡ ಇತರ ಪಕ್ಷಗಳು ಇದಕ್ಕೆ ಉದಾಹರಣೆಗಳಾಗಿವೆ.

### ಬಿ.ಪಿ. ಮಂಡಲ್

ಎರಡನೇ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದ ಬಿ.ಪಿ ಮಂಡಲ್ ಬಿಹಾರದ ಸಾಮಾಜಿಕ ನೇತಾರರಾಗಿದ್ದರು. 1967-1970, 1977 - 1979 ಎಂಬೀ ಅವಧಿಗಳಲ್ಲಿ ಇವರು ಸಂಸತ್ತಿನ ಸದಸ್ಯರಾಗಿದ್ದರು. 1968ರಲ್ಲಿ ಒಂದೂವರೆ ತಿಂಗಳುಗಳ ಕಾಲ ಬಿಹಾರದ ಮುಖ್ಯಮಂತ್ರಿಯಾಗಿಯೂ ಇವರು ಜವಾಬ್ದಾರಿಯನ್ನು ನಿರ್ವಹಿಸಿದ್ದರು. 1977ರಲ್ಲಿ ಇವರು ಜನತಾ ಪಕ್ಷದ ಸದಸ್ಯತ್ವವನ್ನು ಸ್ವೀಕರಿಸಿದರು.

ಮಂಡಲ್ ಆಯೋಗದ ನೇಮಕಾತಿಯ ಹಿನ್ನೆಲೆ ಮತ್ತು ಆಯೋಗದ ವರದಿಯನ್ನು ಜಾರಿಗೊಳಿಸಿದುದರಿಂದಾಗಿ ಉಂಟಾದ ಬೆಳವಣಿಗೆಗಳನ್ನು ಚರ್ಚಿಸಿ ಟಿಪ್ಪಣಿ ತಯಾರಿಸಿರಿ.

## ದಲಿತ ಚಳುವಳಿಗಳು (Dalit Movements)

ಸ್ವಾತಂತ್ರ್ಯಾನಂತರ ಭಾರತದಲ್ಲಿ ದಲಿತ ವಿಭಾಗಗಳನ್ನು ಸಮಾಜದ ಮುಖ್ಯವಾಹಿನಿಯಿಂದ ದೂರ ನಿಲ್ಲಿಸಲಾಗುತ್ತದೆ ಮತ್ತು ಅರ್ಹತೆ ಇರುವ ಹಕ್ಕುಗಳನ್ನು ನಿಷೇಧಿಸಲಾಗುತ್ತದೆ ಎಂಬ ಭಾವನೆಯಿಂದ ದಲಿತ ಚಳುವಳಿಗಳು ಹುಟ್ಟಿಕೊಂಡವು. ಶಿಕ್ಷಣ, ಉದ್ಯೋಗ ಎಂಬೀ ವಲಯಗಳಲ್ಲಿ ಸಂವಿಧಾನವು ದಲಿತ ವಿಭಾಗಗಳಿಗೆ ಮೀಸಲಾತಿಯನ್ನು ಖಾತರಿಪಡಿಸಿದರೂ ಅವರಿಗೆ ಸಾಮಾಜಿಕ ಪ್ರಾಮುಖ್ಯವಿರುವ ವಲಯಗಳಲ್ಲಿ, ರಾಜಕೀಯದ ಮುಖ್ಯವಾಹಿನಿಯಲ್ಲಿ, ಆಡಳಿತ ಹಂತದಲ್ಲಿ ಅರ್ಹವಾದ ಸ್ಥಾನವು ಲಭಿಸದೇ ಇರುವ ಸನ್ನಿವೇಶವಿತ್ತು. ಶಿಕ್ಷಣ, ಉದ್ಯೋಗ ಎಂಬೀ ವಲಯಗಳಲ್ಲಿನ ಹಿಂದುಳಿಯುವಿಕೆ, ಸಾಮಾಜಿಕ ಮತ್ತು ಆರ್ಥಿಕವಾದ ಅಸಮಾನತೆ, ಸ್ವಂತವಾಗಿ ಭೂಮಿ ಇಲ್ಲದಿರುವುದು ಮೊದಲಾದ ಸಮಸ್ಯೆಗಳನ್ನು ದಲಿತರು ಅನುಭವಿಸುತ್ತಿದ್ದರು. ಸಂವಿಧಾನ ಶಿಲ್ಪಿಯಾದ ಡಾ. ಬಿ. ಆರ್. ಅಂಬೇಡ್ಕರ್ ರವರ ಆಶಯಗಳಿಂದ ಪ್ರೇರಿತರಾದ ದಲಿತ ವಿಭಾಗದವರು ಸಂಘಟಿತರಾದರಲ್ಲದೆ ಚಳುವಳಿಗಳನ್ನೂ ರೂಪಿಸಿದರು. ದಲಿತ್ ಪಾಂತೇರ್ಸ್ ಚಳವಳಿಯು ಇಂತಹ ಚಳವಳಿಗಳಲ್ಲಿ ಪ್ರಮುಖವಾದುದಾಗಿತ್ತು.

## ದಲಿತ್ ಪಾಂತೇರ್ಸ್ ಚಳುವಳಿ

ದಲಿತ್ ಪಾಂತೇರ್ಸ್ ಚಳುವಳಿಯು 1972ರಲ್ಲಿ ಮಹಾರಾಷ್ಟ್ರದಲ್ಲಿ ರೂಪುಗೊಂಡಿತು. ನಗರಗಳಲ್ಲಿನ ಸುಶಿಕ್ಷಿತರಾದ ದಲಿತ ಯುವಕರು ಈ ಚಳುವಳಿಗೆ ನೇತೃತ್ವವನ್ನು ನೀಡಿದರು. ಅಂಬೇಡ್ಕರರ ಆಶಯಗಳಾದ ಹಿಂದುಳಿದ ವರ್ಗಗಳಿಗೆ ಸಾಮಾಜಿಕ ನ್ಯಾಯ, ಸಮಾನತೆ, ಜಾತಿ ನಿರ್ಮೂಲನೆ ಮೊದಲಾದವುಗಳು ದಲಿತ್ ಪಾಂತೇರ್ಸ್ ಚಳುವಳಿಯ ಮೇಲೆ ಪ್ರಭಾವ ಬೀರಿದವು. ಜಾತಿ ತಾರತಮ್ಯಕ್ಕೆದುರಾಗಿ ಆಕ್ರಮಣಕಾರಿಯಾದ ಪ್ರತಿಭಟನೆಗಳು, ಪೊಲೀಸರ ಅನ್ಯಾಯವಾದ ಕ್ರಮಗಳಿಗೆ ಎದುರಾಗಿ ಹೆಚ್ಚಿನ ಜನ ಬೆಂಬಲದೊಂದಿಗೆ ನಡೆದ ಪ್ರತಿಭಟನೆಗಳು, ಸಾಹಿತ್ಯ - ಸಾಂಸ್ಕೃತಿಕ ಕಾರ್ಯಕ್ರಮಗಳು, ಇತರ ಸಾಮಾಜಿಕ ನ್ಯಾಯ ಚಳುವಳಿಗಳೊಂದಿಗೆ ಸೇರಿಕೊಂಡು ವೈವಿಧ್ಯಮಯವಾದ ಚಟುವಟಿಕೆಗಳು ಮೊದಲಾದವುಗಳನ್ನು ಇವರು ಸಂಘಟಿಸಿದರು. ಅಸ್ಪೃಶ್ಯರು ಎಂದು ಭಾವಿಸಿ, ದೂರವಿರಿಸಲ್ಪಟ್ಟವರ ಜೀವನವನ್ನು ಸಾಹಿತ್ಯ, ಸಿನೆಮಾ ಮೊದಲಾದವುಗಳ ವಸ್ತುವಾಗಿಸಲೂ ದಲಿತರ ಮೇಲಿನ ಆಕ್ರಮಣಗಳಿಗೆದುರಾಗಿ ಪ್ರಬಲವಾದ ಕ್ರಮಗಳನ್ನು ಕೈಗೊಳ್ಳಲು ಆಡಳಿತಗಾರರನ್ನು ಪ್ರೇರೇಪಿಸಲೂ ದಲಿತ್ ಪಾಂತೇರ್ಸ್ ಚಳವಳಿಗೆ ಸಾಧ್ಯವಾಯಿತು.



ಬಿ.ಆರ್. ಅಂಬೇಡ್ಕರ್



ಕಾನ್ಶಿರಾಮ್

1978ರಲ್ಲಿ ರೂಪುಗೊಂಡ ಬೇಕ್ವರ್ಡ್ ಅಂಡ್ ಮೈನಾರಿಟಿ ಕಮ್ಯುನಿಟೀಸ್ ಎಂಪ್ಲಾಯೀಸ್ ಫೆಡರೇಷನ್ (BAMCEF) ಎಂಬುದು ದಲಿತ ವರ್ಗದವರ ಏಳಿಗೆಗಾಗಿ ರೂಪುಗೊಂಡ ಮತ್ತೊಂದು ಚಳುವಳಿಯಾಗಿದೆ. ಇದು ಕೇವಲ ನೌಕರರ ಹಿತಾಸಕ್ತಿಯನ್ನು ಕಾಪಾಡುವುದಕ್ಕೆ ಮಾತ್ರ ರೂಪುಗೊಂಡ ಸಂಘಟನೆಯಾಗಿರಲಿಲ್ಲ, ಬದಲಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ವಿಭಾಗಗಳು, ಇತರ ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು ಎಂಬೀ ವಿಭಾಗಗಳಿಗೆ ರಾಜಕೀಯ ಅಧಿಕಾರವು ಲಭಿಸುವುದಕ್ಕಾಗಿ ಪ್ರಯತ್ನಿಸುವ ಒಂದು ಸಂಘಟನೆಯಾಗಿ ನೆಲೆನಿಂತಿತು. ಈ ಸಂಘಟನೆಯಿಂದ ದಲಿತ್ ಶೋಷಿತ್ ಸಮಾಜ್ ಸಂಘರ್ಷ ಸಮಿತಿ ಹಾಗೂ ಕಾನ್ಶಿರಾಮರ ನೇತೃತ್ವದಲ್ಲಿ ಬಹುಜನ ಸಮಾಜ ಪಕ್ಷ (BSP) ವು

ರೂಪುಗೊಂಡಿತು. ಉತ್ತರ ಪ್ರದೇಶ, ಹರಿಯಾಣ, ಪಂಜಾಬ್ ಎಂಬೀ ರಾಜ್ಯಗಳಲ್ಲಿ ದಲಿತರ ಬೆಂಬಲದಿಂದ ರಾಜಕೀಯ ಪ್ರಭಾವವನ್ನು ಬೀರಲು ಬಿ.ಎಸ್.ಪಿ. ಗೆ ಸಾಧ್ಯವಾಯಿತು.

ದಲಿತ ಚಳುವಳಿಗಳು ಮತ್ತು ಅವುಗಳ ಚಟುವಟಿಕೆಗಳನ್ನು ವಿಶ್ಲೇಷಿಸಿರಿ

## ಮಹಿಳಾ ಚಳುವಳಿಗಳು

ಮಹಿಳೆಯರ ಹಕ್ಕು ಚಳುವಳಿಗಳೆಂದರೆ ಲಿಂಗ ಸಮಾನತೆ, ಮಹಿಳಾ ಶಿಕ್ಷಣ, ಉದ್ಯೋಗ, ಸಾಮಾಜಿಕ - ರಾಜಕೀಯ ವಲಯಗಳಲ್ಲಿ ಆನುಪಾತಿಕ ಪ್ರಾತಿನಿಧ್ಯ ಮೊದಲಾದ ಅವಶ್ಯಕತೆಗಳಿಗಾಗಿ ಕಾರ್ಯವೆಸಗುವ ಚಳುವಳಿಗಳಾಗಿವೆ. ಗೃಹಪೀಡನೆ, ಹಕ್ಕುಗಳ ನಿಷೇಧ, ದಬ್ಬಾಳಿಕೆ, ಲೈಂಗಿಕ ದೌರ್ಜನ್ಯ, ಪುರುಷಮೇಧಾವಿತ್ವ ಮೊದಲಾದವುಗಳು ಮಹಿಳಾ ಸಮಾಜವು ಎದುರಿಸುತ್ತಿರುವ ಸಮಸ್ಯೆಗಳಾಗಿವೆ. ಇಂತಹ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವುದಕ್ಕಾಗಿ ದೇಶದಲ್ಲಿ ಅನೇಕ ಚಳುವಳಿಗಳು ರೂಪುಗೊಂಡಿವೆ. ಪ್ರಮುಖವಾದ ಕೆಲವು ಮಹಿಳಾ ಚಳುವಳಿಗಳ ಕುರಿತು ನಾವು ಚರ್ಚಿಸೋಣ.

### ಮದ್ಯ ವಿರೋಧಿ ಚಳುವಳಿ (Anti-Arrack Movement)

ಮದ್ಯ ವಿರೋಧಿ ಚಳುವಳಿಯು 1990 ರ ದಶಕಗಳಲ್ಲಿ ಆಂಧ್ರಪ್ರದೇಶದ ನೆಲ್ಲೂರ್ ಜಿಲ್ಲೆಯಲ್ಲಿ ಮೂಡಿ ಬಂದ ಮಹಿಳಾ ಚಳುವಳಿಯಾಗಿದೆ. ಸಾವಿರಾರು ಮಹಿಳೆಯರು ಒಟ್ಟು ಸೇರಿದ ಈ ಚಳುವಳಿಯು ಅನಂತರ ರಾಜ್ಯದಾದ್ಯಂತ ಹಬ್ಬಿತು. ಮದ್ಯ ಎಂದರೆ ಪ್ರಾದೇಶಿಕವಾಗಿ ತಯಾರಿಸಿ ವಿತರಿಸುವ ಅಮಲು ಪಾನೀಯವಾಗಿದೆ. ಅಮಲು ಪದಾರ್ಥದ ಅಮಿತವಾದ ಬಳಕೆಯು ಸಮಾಜದಲ್ಲಿ ಒಡಕನ್ನುಂಟು ಮಾಡುವುದಲ್ಲದೆ ಯುವಕರ ಮಾನಸಿಕ - ದೈಹಿಕ ಸ್ಥಿತಿಯನ್ನು ಹಾಳುಗೆಡವಿತು. ಇದು ಗ್ರಾಮದ ಆರ್ಥಿಕ ಅಡಿಪಾಯವನ್ನು ನಾಶಮಾಡಲು, ಗೃಹಪೀಡನೆ, ಮಹಿಳೆಯರ ಮೇಲಿನ ಆಕ್ರಮಣಗಳು, ಬಡತನ ಮುಂತಾದವುಗಳಿಗೆ ಕಾರಣವಾಯಿತು. ಮದ್ಯ ವಿರೋಧಿ ಚಳವಳಿಯು ಅನಂತರ ಮಹಿಳೆಯರು ಎದುರಿಸಬೇಕಾಗಿ ಬರುವ ಲೈಂಗಿಕ ದೌರ್ಜನ್ಯಗಳು, ಸಾರ್ವಜನಿಕ ಸ್ಥಳ ಗಳಲ್ಲಿನ ಆಕ್ರಮಣಗಳು, ಲಿಂಗ ತಾರತಮ್ಯ ಮೊದಲಾದ ವಿವಿಧ ಸಮಸ್ಯೆ ಗಳನ್ನು ಎದುರಿಸುವ ಚಳುವಳಿಯಾಗಿ ಬೆಳೆದು ಬಂತು. ಇದು ಸಮಾಜದಲ್ಲಿ ಅಮಲು ಪದಾರ್ಥಗಳಿಗೆದುರಾಗಿ ಹಾಗೂ ಮಹಿಳೆಯರು ಎದುರಿಸುವ ಸಮಸ್ಯೆಗಳಿಗೆ ಎದುರಾಗಿ ಸಾಮಾಜಿಕ ಜಾಗೃತಿಯನ್ನು ಮೂಡಿಸುವಲ್ಲಿ ಸಹಕಾರಿ ಯಾಯಿತು.



ಮದ್ಯ ವಿರೋಧಿ ಮುಷ್ಕರ, ಹೈದರಾಬಾದ್ - 1992

ಮದ್ಯ ವಿರೋಧಿ ಚಳುವಳಿಯು ಮಹಿಳಾ ವಿಮೋಚನಾ ಚಳುವಳಿಯಾಗಿ ಹೇಗೆ ರೂಪುಗೊಂಡಿತೆಂಬುದನ್ನು ಚರ್ಚಿಸಿ ಟಿಪ್ಪಣಿ ತಯಾರಿಸಿರಿ.




ಮದ್ಯ ವಿರೋಧಿ ಚಳುವಳಿಯು ಅಮಲು ಪದಾರ್ಥದ ಬಳಕೆಯು ಸಮಾಜದಲ್ಲುಂಟುಮಾಡುವ ವಿವಿಧ ಸಮಸ್ಯೆಗಳನ್ನು ವ್ಯಕ್ತಪಡಿಸುವ ಚಳುವಳಿಯಾಗಿತ್ತು. ಅಮಲು ಪದಾರ್ಥದ ಬಳಕೆಯು ಇಂದಿನ ಸಮಾಜದಲ್ಲಿ ಅನೇಕ ಸಮಸ್ಯೆಗಳನ್ನು ಉಂಟುಮಾಡುತ್ತದೆ. ಇದಕ್ಕೆದುರಾಗಿ ಜಾಗೃತಿ ಮೂಡಿಸುವ ಕಾರ್ಯಕ್ರಮವೊಂದನ್ನು ಏರ್ಪಡಿಸಿರಿ.

## ನಿರ್ಭಯ ಚಳುವಳಿ

ನಿರ್ಭಯ ಚಳುವಳಿ ಎಂಬುದು ಮಹಿಳೆಯರ ಮೇಲಿನ ಆಕ್ರಮಣಗಳಿಗೆ ಎದುರಾಗಿ ದೆಹಲಿಯಲ್ಲಿ ರೂಪುಗೊಂಡ ಸಾಮೂಹಿಕ ಚಳುವಳಿಯಾಗಿದೆ. 2012ರಲ್ಲಿ ದೆಹಲಿ ನಗರದಲ್ಲಿ ಹುಡುಗಿಯೊಬ್ಬಳು ಲೈಂಗಿಕ ದೌರ್ಜನ್ಯಕ್ಕೆ ಗುರಿಯಾಗಿ ಸಾವನ್ನಪ್ಪುವ ಸನ್ನಿವೇಶ ಉಂಟಾಯಿತು. ಈ ಘಟನೆಯು ದೇಶದಾದ್ಯಂತ ಬೃಹತ್ ಪ್ರತಿಭಟನೆಗಳಿಗೆ ಕಾರಣವಾಯಿತು. ಈ ಪ್ರತಿಭಟನೆಗಳು ನಿರ್ಭಯ ಚಳುವಳಿಯು ರೂಪುಗೊಳ್ಳುವುದಕ್ಕೆ ಕಾರಣವಾಯಿತು. ಮಹಿಳೆಯರ ಮೇಲಿನ ಲೈಂಗಿಕ ಆಕ್ರಮಣಗಳಿಗೆದುರಾಗಿ ಪ್ರಬಲವಾದ ಕಾನೂನು ಕ್ರಮಗಳನ್ನು ಕೈಗೊಳ್ಳಬೇಕು, ಇಂತಹ ಪ್ರಕರಣಗಳಲ್ಲಿ ಕಾನೂನು ಪ್ರಕ್ರಿಯೆಯನ್ನು ತ್ವರಿತಗೊಳಿಸಬೇಕು, ಮಾದರಿಯಾಗುವ ರೀತಿಯ ಶಿಕ್ಷೆಯನ್ನು ಖಾತರಿಪಡಿಸಬೇಕು ಮೊದಲಾದ ಪ್ರಮುಖ ಬೇಡಿಕೆಗಳು ನಿರ್ಭಯ ಚಳುವಳಿಯಲ್ಲಿ ಮೂಡಿಬಂದವು. ಭಾರತೀಯ ಅಪರಾಧ ಕಾನೂನು ತಿದ್ದುಪಡಿ ಕಾಯ್ದೆ 2013 (ನಿರ್ಭಯ ಕಾನೂನು), ಲೈಂಗಿಕ ದೌರ್ಜನ್ಯ ಪ್ರಕರಣಗಳನ್ನು ನಿರ್ವಹಿಸುವುದಕ್ಕಿರುವ ತ್ವರಿತ ನ್ಯಾಯಾಲಯಗಳು (Fast-track Courts) ಮೊದಲಾದವು ನಿರ್ಭಯ ಚಳುವಳಿಯ ಪರಿಣಾಮವಾಗಿ ರೂಪುಗೊಂಡವುಗಳಾಗಿವೆ.

## ಮೀನುಗಾರಿಕಾ ಕಾರ್ಮಿಕರ ಚಳುವಳಿ

ರಾಷ್ಟ್ರೀಯ ಮೀನುಗಾರಿಕಾ ಕಾರ್ಮಿಕರ ಸಂಘಟನೆ - ಲಾಂಛನ

ಭಾರತದ ಮೀನುಗಾರಿಕಾ ಕಾರ್ಮಿಕರು ಜಗತ್ತಿನ ಎರಡನೆಯ ಅತಿ ದೊಡ್ಡ ಮೀನುಗಾರಿಕಾ ಸಮಾಜವಾಗಿದ್ದಾರೆ. ಮೀನುಗಾರಿಕೆಯು ಪೂರ್ವ ಹಾಗೂ ಪಶ್ಚಿಮ ತೀರಗಳಲ್ಲಿ ವಾಸಿಸುವ ಕೋಟಿಗಟ್ಟಲೆ ಜನರ ವೃತ್ತಿಯಾಗಿದೆ. ಮೀನುಗಾರಿಕಾ ಕಾರ್ಮಿಕರು ತಮ್ಮ ವೃತ್ತಿಗೆ ಸಂಬಂಧಿಸಿ ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವುದಕ್ಕಾಗಿ ಅನೇಕ ಚಳುವಳಿಗಳು ರೂಪುಗೊಂಡಿವೆ. 1980ರ ದಶಕಗಳ ಮಧ್ಯಭಾಗದಲ್ಲಿ ನಮ್ಮ ದೇಶದ ಆರ್ಥಿಕ ಧೋರಣೆಗಳಲ್ಲಿ ಉಂಟಾದ ಬದಲಾವಣೆಯು ಮೀನುಗಾರಿಕಾ ವಲಯದ ಮೇಲೂ ತೀವ್ರ ಪರಿಣಾಮವನ್ನು ಬೀರಿತು. ಪ್ರಮುಖವಾಗಿ ಆಳಸಮುದ್ರ ಮೀನುಗಾರಿಕೆಗೆ ಸಂಬಂಧಿಸಿದ ಕೇಂದ್ರ ಸರಕಾರದ ನೀತಿಗಳಿಗೆ ಎದುರಾಗಿ ಪ್ರತಿಭಟನೆಗಳು ನಡೆದವು. ರಾಷ್ಟ್ರೀಯ ಮೀನುಗಾರಿಕಾ ಕಾರ್ಮಿಕರ ಸಂಘಟನೆ (National Fishworkers Forum-NFF) ಎಂಬ ಸಂಘಟನೆಯ ನೇತೃತ್ವದಲ್ಲಿ ಪ್ರತಿಭಟನೆಗಳು ನಡೆದವು. ಇದು ವಿವಿಧ ರಾಜ್ಯಗಳಲ್ಲಿ ಕಾರ್ಯಾಚರಿಸುತ್ತಿರುವ ಪರಂಪರಾಗತ ಮೀನುಗಾರಿಕಾ ಕಾರ್ಮಿಕರ ಒಕ್ಕೂಟಗಳನ್ನು ಒಟ್ಟುಗೂಡಿಸಿ ಅವರ ಹಕ್ಕುಗಳ ಸಂರಕ್ಷಣೆಗಾಗಿ ಕಾರ್ಯವೆಸಗುವ ಸಂಘಟನೆಯಾಗಿದೆ. ಭಾರತದ ಸಮುದ್ರ ಪ್ರದೇಶದಲ್ಲಿ ವಿದೇಶೀ ಕಂಪನಿಗಳಿಗೆ ಮೀನುಗಾರಿಕೆಗಾಗಿ ಅನುಮತಿಯನ್ನು ನೀಡಿದ್ದು, ವಿದೇಶ ಕಂಪನಿಗಳಿಗೆ ಭಾರತದ ಕರಾವಳಿಯಲ್ಲಿ ಮೀನುಗಾರಿಕೆಗೆ ಟ್ರೋಲಿಂಗ್ ಪರವಾನಿಗೆಯನ್ನು ನೀಡಿದ್ದು ಮೊದಲಾದ ಸಮಸ್ಯೆಗಳು ಪರಂಪರಾಗತ ಮೀನುಗಾರಿಕಾ ವಲಯವನ್ನು ನಾಶಮಾಡುತ್ತದೆ ಎಂದು ಕಾನೂನು ಹೋರಾಟಗಳು ಹಾಗೂ ನೇರ ಹೋರಾಟಗಳನ್ನು ಪ್ರಾರಂಭಿಸಿದರು. ಕರಾವಳಿ ಪರಿಸರ ಸಂರಕ್ಷಣೆಯೂ ಈ ಸಂಘಟನೆಯ ಪ್ರಮುಖ ಉದ್ದೇಶಗಳಲ್ಲಿ ಒಂದಾಗಿದೆ. ಕೇರಳದ ಮೀನುಗಾರಿಕಾ ಕಾರ್ಮಿಕರು NFFನ ನೇತೃತ್ವದಲ್ಲಿ ಕಾರ್ಮಿಕರನ್ನು ಒಟ್ಟುಗೂಡಿಸಿ ಹಕ್ಕುಗಳ ಹೋರಾಟವನ್ನು ಬಲಪಡಿಸಿದರು. ಮೀನುಗಾರಿಕಾ ಕಾರ್ಮಿಕರಲ್ಲಿ ಸಂಘಟನಾ ಪ್ರಜ್ಞೆಯು ಬೆಳೆದು ಬಂದುದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅವರ ಪಾಲ್ಗೊಳ್ಳುವಿಕೆ ಹೆಚ್ಚಾಗಲು ಸಹಕಾರಿಯಾಯಿತು.

## ಪರಿಸರ ಚಳುವಳಿಗಳು (Environmental Movements)

ಅವೈಜ್ಞಾನಿಕವಾದ ಅಭಿವೃದ್ಧಿಯು ಉಂಟುಮಾಡುವ ಪರಿಸರ ಸಮಸ್ಯೆಗಳು ಹಾಗೂ ಅದರಿಂದ ಉಂಟಾಗುವ ಸಾಮಾಜಿಕ ನ್ಯಾಯ ನಿಷೇಧಕ್ಕೆದುರಾಗಿ ಪರಿಸರ ಚಳುವಳಿಗಳು ಮೂಡಿಬಂದವು. ಬೃಹತ್ ನೀರಾವರಿ ಯೋಜನೆಗಳು, ಕೈಗಾರಿಕೆಗಳು, ಗನಿಗಾರಿಕೆ, ಅರಣ್ಯ ನಾಶ ಮೊದಲಾದವು ಉಂಟುಮಾಡುವ ಪರಿಸರ, ಸಾಮಾಜಿಕ ಸಮಸ್ಯೆಗಳನ್ನು ಈ ಚಳುವಳಿಗಳು ಪ್ರಮುಖವಾಗಿ ವ್ಯಕ್ತಪಡಿಸುತ್ತವೆ. ಪ್ರಾಕೃತಿಕ ಸಂಪನ್ಮೂಲಗಳ ರಕ್ಷಣೆ, ಜೈವವೈವಿಧ್ಯಗಳ ರಕ್ಷಣೆ, ಪರಿಸರ ಧೋರಣೆಯ ರೂಪೀಕರಣ, ಪರಿಸರ ಪ್ರಜ್ಞೆಯನ್ನು ಬೆಳೆಸುವುದು. ಸುಸ್ಥಿರ ಅಭಿವೃದ್ಧಿ ಮೊದಲಾದ ಅನೇಕ ವಿಷಯಗಳಲ್ಲಿ ಪರಿಸರ ಚಳುವಳಿಗಳಿಗೆ ಮಧ್ಯಪ್ರವೇಶಿಸಲು ಸಾಧ್ಯವಾಗಿದೆ. ಅಖಿಲ ಭಾರತ ಮಟ್ಟದಲ್ಲಿ ಗಮನ ಸೆಳೆದ ಕೆಲವು ಪ್ರಮುಖ ಪರಿಸರ ಚಳುವಳಿಗಳನ್ನು ಪರಿಚಯಿಸಿಕೊಳ್ಳೋಣ.

| ಚಳುವಳಿಗಳು | ವಿಶೇಷತೆಗಳು |
|---|---|

### ಚಿಪ್ಕೋ ಚಳುವಳಿ


ಸುಂದರ್ ಲಾಲ್ ಬಹುಗುಣ

- ಉತ್ತರಾಖಂಡದ ಹಿಮಾಲಯ ಪ್ರದೇಶಗಳಿಂದ ಕೈಗಾರಿಕೆಗಳಿಗಾಗಿ ಬೃಹತ್ ಪ್ರಮಾಣದಲ್ಲಿ ಮರಗಳನ್ನು ಕಡಿಯುವುದನ್ನು ವಿರೋಧಿಸಿದರು.
- ಅರಣ್ಯ ಸಂಪನ್ಮೂಲದ ಮೇಲೆ ಪ್ರಾದೇಶಿಕ ಜನರಿಗಿರುವ ಹಕ್ಕುಗಳ ರಕ್ಷಣೆಗಾಗಿ ಕಟಿಬದ್ಧರಾದರು.
- ಮಹಿಳೆಯರ ಪಾಲ್ಗೊಳ್ಳುವಿಕೆ ಹಾಗೂ ನೇತೃತ್ವ.
- ಮರಗಳನ್ನು ಅಪ್ಪಿಕೊಳ್ಳುವ ಮುಷ್ಕರ ವಿಧಾನ.

### ನರ್ಮದಾ ಬಚಾವೋ ಆಂದೋಲನ


ಮೇಧಾ ಪಾಟ್ಕರ್

- ನರ್ಮದಾ ನದಿಯಲ್ಲಿ ಸರ್ದಾರ ಸರೋವರ್ ಯೋಜನೆಗೆ ವಿರುದ್ಧವಾಗಿ ರೂಪುಗೊಂಡ ಚಳುವಳಿ.
- ಆದಿವಾಸಿ ಜನರ ಒಕ್ಕಲೆಬ್ಬಿಸುವಿಕೆಗೆದುರಾಗಿ ಕಾರ್ಯವೆಸಗಿದರು.
- ಪ್ರಾದೇಶಿಕ ಜನರ ಜೀವನೋಪಾಯಗಳನ್ನು ರಕ್ಷಿಸುವುದಕ್ಕಾಗಿ ಕಾರ್ಯವೆಸಗಿದರು.
- ನ್ಯಾಯ ಸಮ್ಮತವಲ್ಲದ ಒಕ್ಕಲೆಬ್ಬಿಸುವಿಕೆ ಹಾಗೂ ಪುನರ್ವಸತಿಗೆದುರಾಗಿ ಕಾರ್ಯವಸೆಗಲು ಕಟ್ಟಿಬದ್ಧರಾದರು.

### ಸೈಲೆಂಟ್ ವ್ಯಾಲಿ



ಸೈಲೆಂಟ್ ವ್ಯಾಲಿ ರಾಷ್ಟ್ರೀಯ ಉದ್ಯಾನ.

- ಸೈಲೆಂಟ್ ವ್ಯಾಲಿಯ ನಿರ್ದಿಷ್ಟ ಜಲ ವಿದ್ಯುತ್ ಯೋಜನೆಗೆ ವಿರುದ್ಧವಾದ ಚಳುವಳಿ.
- ಮಳೆಗಾಡುಗಳು ಹಾಗೂ ಜೈವವೈವಿಧ್ಯಗಳ ರಕ್ಷಣೆಗಾಗಿ ಕಟಿಬದ್ಧವಾಯಿತು
- ಪ್ರತಿಭಟನೆಯಿಂದಾಗಿ ಸೈಲೆಂಟ್ ವ್ಯಾಲಿ ಜಲ ವಿದ್ಯುತ್ ಯೋಜನೆಯನ್ನು ಕೈಬಿಡಲಾಯಿತು.
- ಸೈಲೆಂಟ್ ವ್ಯಾಲಿಯನ್ನು ರಾಷ್ಟ್ರೀಯ ಉದ್ಯಾನವಾಗಿ ಘೋಷಿಸಲಾಯಿತು.

ಪರಿಸರ ಸಂಘಟನೆಗಳು ಹಾಗೂ ಇತರ ಜನಪರ ಚಳುವಳಿಗಳ ಮಧ್ಯಸ್ಥಿಕೆಯ ಫಲವಾಗಿ ಭಾರತದಲ್ಲಿ ಅನೇಕ ಪರಿಸರ ಸಂರಕ್ಷಣಾ ಕಾನೂನುಗಳು, ಪರಿಸರ ಹಕ್ಕುಗಳ ಸಂರಕ್ಷಣಾ ನಿಯಮಗಳು, ರಕ್ಷಿತಾರಣ್ಯ ಪ್ರದೇಶಗಳ ಘೋಷಣೆ ಹಾಗೂ ರಾಷ್ಟ್ರೀಯ ಉದ್ಯಾನಗಳ ಘೋಷಣೆಗಳು ನಡೆದಿವೆ.

**2002** — ಜೈವ ವೈವಿಧ್ಯ ಕಾಯಿದೆ

**2006** — ಪರಿಶಿಷ್ಟ ವರ್ಗ ಮತ್ತು ಇತರ ಸಾಂಪ್ರದಾಯಿಕ ವನವಾಸಿಗಳ ಹಕ್ಕುಗಳನ್ನು ಗುರುತಿಸುವ ಕಾಯಿದೆ

**2013** — ಭೂಮಿ ಸ್ವಾಧೀನಪಡಿಸುವಿಕೆ ಮತ್ತು ಪುನರ್ವಸತಿಗಳಲ್ಲಿ ನ್ಯಾಯೋಚಿತವಾದ ನಷ್ಟ ಪರಿಹಾರ ಹಾಗೂ ಪಾರದರ್ಶಕವಾಗಿರುವ ಹಕ್ಕು ಕಾಯಿದೆ

ಆಧುನಿಕ ಜಗತ್ತಿನ ಅಭಿವೃದ್ಧಿ ಚಟುವಟಿಕೆಗಳು ಉಂಟುಮಾಡುವ ಪರಿಸರ ಮತ್ತು ಸಾಮಾಜಿಕ ಸಮಸ್ಯೆಗಳು ಎಂಬ ವಿಷಯದಲ್ಲಿ ಸಂವಾದವನ್ನು ನಡೆಸಿರಿ.

## ಕೃಷಿಕರ ಚಳುವಳಿಗಳು (Peasant Movements)



ಕೃಷಿಕರ ಮುಷ್ಕರ

ಕೃಷಿಕರು ಎದುರಿಸುತ್ತಿರುವ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಅನೇಕ ಚಳುವಳಿಗಳು ಭಾರತದಲ್ಲಿ ನಡೆದಿವೆ. ಹಸಿರು ಕ್ರಾಂತಿಗೆ ಸಂಬಂಧಿಸಿ ಕೃಷಿ ವಲಯಕ್ಕೆ ಪ್ರೋತ್ಸಾಹಗಳು ಲಭಿಸಿದ್ದವು. 1980ರ ದಶಕಗಳ ಮಧ್ಯಭಾಗದಲ್ಲಿ ನಮ್ಮ ಆರ್ಥಿಕ ಧೋರಣೆಯಲ್ಲಿ ಉಂಟಾದ ಉದಾರೀಕರಣ ಧೋರಣೆಗಳು ಕೃಷಿ ರಂಗವನ್ನು ಬಿಕ್ಕಟ್ಟಿಗೆ ಸಿಲುಕಿಸಿತು. ಕೃಷಿ ರಂಗದ ಸುಧಾರಣೆಗಳು ಉತ್ಪಾದನೆ, ಆಹಾರ ಸುರಕ್ಷೆ, ಉದ್ಯೋಗ ವಲಯ ಎಂಬಿವುಗಳನ್ನು ಗಮನಾರ್ಹವಾಗಿ ಬಾಧಿಸಿತು. ಇದಕ್ಕೆ ವಿರುದ್ಧವಾಗಿ ಉತ್ತರ ಪ್ರದೇಶದಲ್ಲಿ ರೂಪುಗೊಂಡ ಭಾರತೀಯ ಕಿಸಾನ್ ಯೂನಿಯನ್ (BKU) ಗ್ರಾಮೀಣ ಕೃಷಿಕರನ್ನು ಒಗ್ಗೂಡಿಸಿ ಬೃಹತ್ ಪ್ರತಿಭಟನೆಗಳನ್ನು ನಡೆಸಿತು. ಮಹಾರಾಷ್ಟ್ರದ ಶೇತ್ಕಾರಿ ಸಂಘಟನೆ, ಕರ್ನಾಟಕದ ರೈತ ಸಂಘ ಮೊದಲಾದವುಗಳು ದೇಶದ ವಿವಿಧ ಪ್ರದೇಶಗಳಲ್ಲಿ ಉಂಟಾದ ಕೃಷಿಕ ಚಳುವಳಿಗಳಿಗೆ ಉದಾಹರಣೆಗಳಾಗಿವೆ. 2020-2021ರ ಅವಧಿಯಲ್ಲಿ ದೆಹಲಿಯ ಗಡಿ ಪ್ರದೇಶಗಳಲ್ಲಿ ಸಂಯುಕ್ತ ಕಿಸಾನ್ ಮೋರ್ಚಾದ ನೇತೃತ್ವದಲ್ಲಿ ಕೇಂದ್ರ ಸರಕಾರದ ಕೃಷಿ ನಿಯಮಗಳಿಗೆ ವಿರುದ್ಧವಾಗಿ ಆಯೋಜಿಸಲ್ಪಟ್ಟ ಕೃಷಿಕ ಹೋರಾಟವು ಜನರ ಭಾಗವಹಿಸುವಿಕೆಯಿಂದ ಗಮನ ಸೆಳೆದಿತ್ತು. ಈ ಚಳುವಳಿಯ ಪರಿಣಾಮವಾಗಿ ಕೃಷಿಕರ ಬೇಡಿಕೆಗಳನ್ನು ಸರಕಾರವು ಅಂಗೀಕರಿಸಿತು.

ಇನ್ನೂ ಹೆಚ್ಚಿನ ಕೃಷಿಕ ಚಳುವಳಿಗಳು ಹಾಗೂ ಕೃಷಿ ಕಾನೂನುಗಳನ್ನು ಸೇರಿಸಿ ಟಿಪ್ಪಣಿ ತಯಾರಿಸಿರಿ.

## ಮಾಹಿತಿ ಹಕ್ಕಿಗಾಗಿರುವ ಚಳುವಳಿ

ಮಾಹಿತಿ ಹಕ್ಕಿಗಾಗಿರುವ ಚಳುವಳಿ ಮತ್ತು ಅದರಿಂದಾಗಿ ರೂಪುಗೊಂಡ ಕಾಯಿದೆ ಇವುಗಳು ಸಾರ್ವಜನಿಕ ಚಳುವಳಿಗಳಿಗೆ ಲಭಿಸುವ ಅಂಗೀಕಾರ ಹಾಗೂ ಯಶಸ್ಸಿಗೆ ಉದಾಹರಣೆಯಾಗಿದೆ. 1990ರಲ್ಲಿ ರಾಜಸ್ಥಾನದ ಮಸ್ದೂರ್ ಕಿಸಾನ್ ಶಕ್ತಿ ಸಂಘಟನ್ (MKSS) ಎಂಬ ಸಂಘಟನೆಯು ಈ ಚಳುವಳಿಯನ್ನು ಆರಂಭಿಸಿತು. ರಾಜಸ್ಥಾನದ ಭೀಮ್ ತಹಸೀಲ್ ಎಂಬ ಹಿಂದುಳಿದ ಪ್ರದೇಶದಲ್ಲಿ ಮೊದಲ ಬಾರಿಗೆ ಸಾರ್ವಜನಿಕ ನಿರ್ಮಾಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ನೀಡಬೇಕೆಂಬ ಬೇಡಿಕೆಯು ಮೂಡಿ ಬಂತು. ಶಾಲೆಗಳು, ಡಿಸ್ಪೆನ್ಸರಿಗಳು, ಕಿರು ಅಣೆಕಟ್ಟುಗಳು ಎಂಬಿವುಗಳ ನಿರ್ಮಾಣಕ್ಕೆ ಸಂಬಂಧಿಸಿ ಸಾರ್ವಜನಿಕ ಹಣವನ್ನು ದುರುಪಯೋಗ ಮಾಡುವ ಸಂಶಯದಲ್ಲಿ ಈ ಬೇಡಿಕೆಯನ್ನು ಮುಂದೊಡ್ಡಲಾಗಿತ್ತು. ಎಂ.ಕೆ.ಎಸ್.ಎಸ್. ನ ನೇತೃತ್ವದಲ್ಲಿ ದೆಹಲಿಯನ್ನು ಕೇಂದ್ರವಾಗಿರಿಸಿ ಮಾಹಿತಿ ಹಕ್ಕು ನಿಯಮಕ್ಕಾಗಿರುವ ರಾಷ್ಟ್ರೀಯ ಪರಿಷತ್ತನ್ನು (National Council for People's Right to Information) ರೂಪಿಸಲಾಯಿತಲ್ಲದೆ ರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರವನ್ನೂ ಆರಂಭಿಸಿದರು. ಮಾತ್ರವಲ್ಲದೆ ಗ್ರಾಹಕ ಶಿಕ್ಷಣ ಸಂಶೋಧನಾ ಕೇಂದ್ರ (Consumer Education and Research Centre), ಪ್ರೆಸ್ ಕೌನ್ಸಿಲ್, ಷೂರಿ ಸಮಿತಿ ಎಂಬಿವುಗಳೂ ಇದೇ ಅವಶ್ಯಕತೆಯನ್ನು ಮುಂದಿಟ್ಟುಕೊಂಡು ಮಾಹಿತಿ ಹಕ್ಕಿಗಾಗಿರುವ ಕರಡನ್ನು ತಯಾರಿಸಲು ನಿರ್ದೇಶಿಸಿದವು. ಈ ಹಿನ್ನೆಲೆಯಲ್ಲಿ 2005ರಲ್ಲಿ ಮಾಹಿತಿ ಹಕ್ಕು ಕಾಯಿದೆಯು ಅಸ್ತಿತ್ವಕ್ಕೆ ಬಂತು.

### ಮಾಹಿತಿ ಹಕ್ಕು ಕಾಯ್ದೆ (Right to Information Act)

2005 ರಲ್ಲಿ ಭಾರತದ ಸಂಸತ್ತು ಮಾಹಿತಿ ಹಕ್ಕು ಕಾಯಿದೆಯನ್ನು ಅಂಗೀಕರಿಸಿತಲ್ಲದೆ 2005 ಅಕ್ಟೋಬರ್ 12 ರಂದು ಈ ಕಾಯಿದೆಯು ಜಾರಿಗೆ ಬಂತು. ಸಾರ್ವಜನಿಕ ಸಂಸ್ಥೆಗಳಿಂದ ಹಾಗೂ ಅಧಿಕಾರಿಗಳಿಂದ ಪೌರರಿಗೆ ಮಾಹಿತಿಗಳು ಲಭಿಸಲಿರುವ ಹಕ್ಕನ್ನು ಈ ಕಾಯಿದೆಯು ಖಾತರಿಪಡಿಸುತ್ತದೆ. ಈ ಕಾಯಿದೆಯ ಪ್ರಕಾರ 30 ದಿವಸಗಳೊಳಗೆ ಮಾಹಿತಿಯನ್ನು ನೀಡಬೇಕು. ಅರ್ಜಿದಾರನ ಜೀವ ಹಾಗೂ ಸ್ವಾತಂತ್ರ್ಯಕ್ಕೆ ಬೆದರಿಕೆಯಾಗುವ ವಿಷಯಗಳಾಗಿದ್ದಲ್ಲಿ 48 ಗಂಟೆಗಳೊಳಗೆ ಮಾಹಿತಿಗಳನ್ನು ನೀಡಬೇಕು. ಮಾಹಿತಿಗಳನ್ನು ನೀಡುವುದಕ್ಕಾಗಿ ಪ್ರತಿಯೊಂದು ಕಚೇರಿಯಲ್ಲೂ ಒಬ್ಬ ಮುಖ್ಯ ಮಾಹಿತಿ ಅಧಿಕಾರಿ ಇದ್ದಾರೆ. ನಿಶ್ಚಿತ ಕಾಲಾವಧಿಯಲ್ಲಿ ಮಾಹಿತಿಗಳು ಲಭಿಸದಿದ್ದರೆ ಅರ್ಜಿದಾರನು ಮೇಲಧಿಕಾರಿಗೆ ಮನವಿಯನ್ನು ಸಲ್ಲಿಸಬಹುದು. ಮಾಹಿತಿ ಹಕ್ಕಿನ ನಿರ್ವಹಣೆಗಾಗಿ ಕೇಂದ್ರ ಹಾಗೂ ರಾಜ್ಯಗಳಲ್ಲಿ ಮಾಹಿತಿ ಹಕ್ಕು ಆಯೋಗಗಳು ಕಾರ್ಯವೆಸಗುತ್ತಿವೆ. ಪ್ರಜಾಪ್ರಭುತ್ವದಲ್ಲಿ ಪಾರದರ್ಶಕತೆಯು ಅತಿ ಅಗತ್ಯವಾದುದರಿಂದಲೂ ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಬೇಕಾದುದರಿಂದಲೂ ಸಾರ್ವಜನಿಕ ವಿಷಯಗಳಿಗೆ ಸಂಬಂಧಿಸಿದ ಅಧಿಕೃತವಾದ ಮಾಹಿತಿಗಳನ್ನು ಪೌರರಿಗೆ ನೀಡಬೇಕಾಗಿದೆ.

ಮಾಹಿತಿ ಹಕ್ಕು ಚಳುವಳಿಯು ಭಾರತದ ಪ್ರಜಾಪ್ರಭುತ್ವವನ್ನು ಹೇಗೆ ಬಲಪಡಿಸುತ್ತದೆ ಎಂಬ ವಿಷಯದಲ್ಲಿ ಒಂದು ಲೇಖನವನ್ನು ತಯಾರಿಸಿರಿ.

## ಪ್ರಾದೇಶಿಕ ಚಳುವಳಿಗಳು

ಭಾರತವು ವೈವಿಧ್ಯಗಳಿಂದ ಕೂಡಿದ ದೇಶವಾಗಿದೆ. ಭೂಪ್ರಕೃತಿ, ಹವಾಗುಣ, ಭಾಷೆ, ಸಂಸ್ಕೃತಿ, ಜೀವನ ವಿಧಾನ ಮೊದಲಾದವುಗಳಲ್ಲೆಲ್ಲ ಈ ವೈವಿಧ್ಯವು ಕಂಡುಬರುತ್ತದೆ. ಇವುಗಳ ಆಧಾರದಲ್ಲಿ ಪ್ರದೇಶವೊಂದಕ್ಕೆ ವಿಶೇಷ ಪರಿಗಣನೆ, ಅನುಕೂಲತೆ, ರಕ್ಷಣೆ ಮೊದಲಾದ ಅವಶ್ಯಕತೆಗಳಿಗಾಗಿ ಮೂಡಿಬರುವ ಚಳುವಳಿಗಳು ಪ್ರಾದೇಶಿಕ ಚಳುವಳಿಗಳಾಗಿವೆ. ಬೇಡಿಕೆಯ ಆಧಾರದಲ್ಲಿ ಇಂತಹ ಚಳುವಳಿಗಳನ್ನು ಪ್ರಮುಖವಾಗಿ ವಲಸೆ ವಿರೋಧಿ ಚಳುವಳಿಗಳು, ಪ್ರಾದೇಶಿಕ ಸ್ವಯಂ ಆಡಳಿತ ಚಳುವಳಿಗಳು, ಪ್ರತ್ಯೇಕತಾವಾದಿ ಚಳುವಳಿಗಳು ಎಂಬುದಾಗಿ ವಿಂಗಡಿಸಬಹುದು. ಇಂತಹ ಕೆಲವು ಚಳುವಳಿಗಳು ಹಾಗೂ ಅವುಗಳನ್ನು ಭಾರತೀಯ ಪ್ರಜಾಪ್ರಭುತ್ವವು ಹೇಗೆ ಸಮೀಪಿಸಿತೆಂಬುದನ್ನು ಪರಿಚಯಿಸಿಕೊಳ್ಳೋಣ.

## ದ್ರಾವಿಡ ಚಳುವಳಿ

ದ್ರಾವಿಡ ಜನರ ರಾಜಕೀಯ ಸಬಲೀಕರಣ, ತಮಿಳು ಭಾಷೆಯ ಬೆಳವಣಿಗೆ, ವೈಚಾರಿಕತೆ ಎಂಬೀ ಆಶಯಗಳ ಪ್ರಭಾವದಿಂದಾಗಿ 20ನೇ ಶತಮಾನದ ಮೊದಲ ದಶಕಗಳಲ್ಲಿ ತಮಿಳುನಾಡಿನಲ್ಲಿ ಆರಂಭವಾದ ಚಳುವಳಿಯು ದ್ರಾವಿಡ ಚಳುವಳಿಯಾಗಿದೆ. ದ್ರಾವಿಡ ಸಂಸ್ಕೃತಿಯ ಮೇಲೆ ಬ್ರಾಹ್ಮಣ ಸಂಸ್ಕೃತಿಯು ಪ್ರಾಬಲ್ಯ ಹೊಂದುವುದನ್ನು ತಡೆಯುವುದು ಈ ಚಳುವಳಿಯ ಉದ್ದೇಶವಾಗಿತ್ತು.


ಇ.ವಿ. ರಾಮಸ್ವಾಮಿ ನಾಯ್ಕರ್

ಇ.ವಿ. ರಾಮಸ್ವಾಮಿ ನಾಯ್ಕರ್‌ರ ಆತ್ಮಾಭಿಮಾನ ಚಳುವಳಿಯ ಪರಿಕಲ್ಪನೆಗಳಿಂದಾಗಿ ಈ ಚಳುವಳಿಯು ರೂಪುಗೊಂಡಿತು. ಅನಂತರ ಅವರು ದ್ರಾವಿಡಕಳಗಂ ಎಂಬ ರಾಜಕೀಯ ಪಕ್ಷವನ್ನು ಸ್ಥಾಪಿಸಿದರು. ಇದು ದ್ರಾವಿಡ ಮುನ್ನೇಟ್ರ ಕಳಗಂ (DMK) ಆಗಿ ಬದಲಾಯಿತು. ಬಲವಾದ ಪ್ರತಿಭಟನೆಗಳ ಮೂಲಕ ತಮಿಳುನಾಡಿನ ರಾಜಕೀಯದ ಮೇಲೆ ಪ್ರಭಾವ ಬೀರಿದ ಡಿ.ಎಂ.ಕೆ.ಯು 1967 ರಲ್ಲಿ ಅಧಿಕಾರಕ್ಕೆ ಬಂತು. ಅನಂತರದ ತಮಿಳುನಾಡಿನ ರಾಜಕೀಯದಲ್ಲಿ ವಿವಿಧ ದ್ರಾವಿಡ ಚಳುವಳಿಗಳ ಪ್ರಭಾವವನ್ನು ಕಾಣಲು ಸಾಧ್ಯವಿದೆ.

## ವಲಸೆ ವಿರೋಧಿ ಚಳುವಳಿಗಳು

ವಲಸೆ ವಿರೋಧಿ ಚಳುವಳಿಗಳು ಎಂದರೆ ಅನಿಯಂತ್ರಿತವಾದ ವಲಸೆಯು ಒಂದು ಪ್ರದೇಶದ ಪ್ರಾದೇಶಿಕ ಜನರ ಮೇಲೆ ಉಂಟುಮಾಡುವ ವಂಶೀಯ - ಭಾಷಾ - ಸಾಂಸ್ಕೃತಿಕ - ಆರ್ಥಿಕ - ಔದ್ಯೋಗಿಕ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ರೂಪುಗೊಳ್ಳುವ ಚಳುವಳಿಗಳಾಗಿವೆ. ಅಸ್ಸಾಂ ಚಳುವಳಿಯು ಇವುಗಳಲ್ಲಿ ಅತ್ಯಂತ ಪ್ರಮುಖವಾದದ್ದಾಗಿದೆ.

## ಅಸ್ಸಾಂ ಚಳುವಳಿ

ವಲಸೆಗೆ ವಿರುದ್ಧವಾಗಿ ವಿಶೇಷವಾಗಿ ಬಾಂಗ್ಲಾದೇಶೀಯರ ವಲಸೆಗೆ ವಿರುದ್ಧವಾಗಿ 1979 ರಿಂದ 1985 ರವರೆಗೆ ಅಸ್ಸಾಮಿನಲ್ಲಿ ನಡೆದ ಪ್ರತಿಭಟನೆಗಳನ್ನು ಅಸ್ಸಾಂ ಚಳುವಳಿ ಎನ್ನುತ್ತಾರೆ. ಅಖಿಲ ಅಸ್ಸಾಂ ವಿದ್ಯಾರ್ಥಿ ಸಂಘವು ಈ ಚಳುವಳಿಗೆ ನೇತೃತ್ವವನ್ನು ನೀಡಿತು. ಬಾಂಗ್ಲಾದೇಶದಿಂದಿರುವ ಅನಧಿಕೃತ ವಲಸೆಯು ಅಸ್ಸಾಮಿನ ಜನರ ಉದ್ಯೋಗಾವಕಾಶಗಳನ್ನು ನಾಶ ಮಾಡಬಹುದು ಮತ್ತು ಬಡತನ ಹಾಗೂ ಆರ್ಥಿಕ ಬಿಕ್ಕಟ್ಟಿಗೂ ಇದು ಕಾರಣವಾಗಬಹುದೆಂದು ಪ್ರತಿಭಟನಾಕಾರರು ತಮ್ಮ ಕಳವಳವನ್ನು

ವ್ಯಕ್ತಪಡಿಸಿದರು. 1951 ರ ನಂತರ ಅನಧಿಕೃತವಾಗಿ ಅಸ್ಸಾಮಿಗೆ ವಲಸೆ ಬಂದವರನ್ನು ಹೊರ ಕಳುಹಿಸಬೇಕೆಂದು ಈ ಪ್ರತಿಭಟನಾಕಾರರು ಬೇಡಿಕೆಯನ್ನಿಟ್ಟರು. ವ್ಯಾಪಕ ಆಕ್ರಮಣಗಳಿಗೆ ಹಾಗೂ ಘರ್ಷಣೆಗೆ ಚಳುವಳಿಯು ದಾರಿ ಮಾಡಿಕೊಟ್ಟಿತು. 1985 ರಲ್ಲಿ ಕೇಂದ್ರ ಸರಕಾರವು ಪ್ರತಿಭಟನಾಕಾರರೊಂದಿಗೆ ಸಹಿಮಾಡಿದ ಒಪ್ಪಂದದ ಪ್ರಕಾರ ಹಾಗೂ ಅನಂತರದ ಪ್ರಜಾಪ್ರಭುತ್ವದ ಮಧ್ಯಸ್ಥಿಕೆಗಳು ಸಮಸ್ಯೆಯನ್ನು ಒಂದು ಹಂತದವರೆಗೆ ಪರಿಹರಿಸಲು ಸಹಕಾರಿಯಾದವು.

## ಸ್ವಯಂ ಆಡಳಿತಕ್ಕಾಗಿರುವ ಚಳುವಳಿಗಳು

ಇವುಗಳು ದೇಶದೊಳಗೆ ಹೆಚ್ಚಿನ ಸ್ವಯಂ ಆಡಳಿತದ ಬೇಡಿಕೆಯನ್ನು ಮುಂದಿಟ್ಟುಕೊಂಡು, ಪ್ರತ್ಯೇಕ ರಾಜ್ಯ ಪದವಿಯ ಬೇಡಿಕೆಯನ್ನು ಮುಂದಿಟ್ಟುಕೊಂಡು ಉದ್ಭವಿಸಿದ ಚಳವಳಿಗಳಾಗಿವೆ. ಪ್ರಾದೇಶಿಕವಾಗಿ ಅವಗಣಿಸಲ್ಪಡುತ್ತಿದ್ದೇವೆ ಎಂಬ ಮನೋಭಾವ, ಭಾಷಿಕ, ಸಾಂಸ್ಕೃತಿಕ ವಿಶೇಷತೆಗಳು, ಅಸಮತೋಲನವಾದ ಆರ್ಥಿಕ ಬೆಳವಣಿಗೆ ಮೊದಲಾದ ವಿಷಯಗಳನ್ನು ಮುಂದಿಟ್ಟುಕೊಂಡು ಇಂತಹ ಚಳುವಳಿಗಳು ಆಡಳಿತದ ಬೇಡಿಕೆಯನ್ನು ಮುಂದೊಡ್ಡಿದವು. ಈ ವಿಭಾಗಕ್ಕೊಳಪಟ್ಟ ಕೆಲವು ಚಳುವಳಿಗಳನ್ನು ಕೆಳಗೆ ನೀಡಿರುವ ಪಟ್ಟಿಯಿಂದ ನಾವು ಪರಿಚಯಿಸಿಕೊಳ್ಳೋಣ.

| ಚಳುವಳಿ | ನೇತೃತ್ವ ನೀಡಿದ ಸಂಘಟನೆ | ಕಾರಣಗಳು / ಬೇಡಿಕೆಗಳು | ಪರಿಹಾರ |
|---|---|---|---|
| ಗೂರ್ಖಾ ಲ್ಯಾಂಡ್ ಚಳವಳಿ | ಗೂರ್ಖಾ ನ್ಯಾಷನಲ್ ಲಿಬರೇಶನ್ ಫ್ರಂಟ್ | ಪಶ್ಚಿಮ ಬಂಗಾಳದಲ್ಲಿ ನೇಪಾಳಿ ಭಾಷೆ ಮಾತನಾಡುವ ಗೂರ್ಖಾ ವಿಭಾಗದವರಿಗಾಗಿ ಪ್ರತ್ಯೇಕ ರಾಜ್ಯವನ್ನು ರೂಪಿಸಬೇಕು. | 1988 ರಲ್ಲಿ ಸ್ವಯಂ ಆಡಳಿತ ಅಧಿಕಾರವಿರುವ ಡಾರ್ಜಿಲಿಂಗ್ ಗೂರ್ಖಾಹಿಲ್ ಕೌನ್ಸಿಲಿಗೆ ರೂಪು ನೀಡಿದರು<br>2012ರಲ್ಲಿ ಗೂರ್ಖಾಹಿಲ್ ಕೌನ್ಸಿಲ್ ಗೆ ಬದಲಾಗಿ ಗೂರ್ಖಾಲ್ಯಾಂಡ್ ಟೆರಿಟೋರಿಯಲ್ ಅಡ್ಮಿನಿಸ್ಟ್ರೇಷನ್ ರೂಪಿಸಿದರು. |
| ಜಾರ್ಖಂಡ್ ಚಳುವಳಿ | ಜಾರ್ಖಂಡ್ ಮುಕ್ತಿ ಮೋರ್ಚಾ | ಬಿಹಾರದಿಂದ ಜಾರ್ಖಂಡ್ ವಲಯವನ್ನು ವಿಭಜಿಸಿ ಪ್ರತ್ಯೇಕ ರಾಜ್ಯವನ್ನು ರೂಪಿಸಬೇಕು. | 2000ದಲ್ಲಿ ಜಾರ್ಖಂಡ್ ರಾಜ್ಯವನ್ನು ರೂಪಿಸಿದರು |
| ತೆಲಂಗಾಣ ಚಳುವಳಿ | ತೆಲಂಗಾಣ ರಾಷ್ಟ್ರ ಸಮಿತಿ | ಆಂಧ್ರಪ್ರದೇಶವನ್ನು ವಿಭಜಿಸಿ ತೆಲಂಗಾಣ ರಾಜ್ಯವನ್ನು ರೂಪಿಸಬೇಕು. | 2014ರಲ್ಲಿ ತೆಲಂಗಾಣ ರಾಜ್ಯವನ್ನು ರೂಪಿಸಿದರು. |

## ಪ್ರತ್ಯೇಕತಾವಾದಿ ಚಳುವಳಿಗಳು

ಭಾರತದಿಂದ ಕೆಲವು ಪ್ರದೇಶಗಳನ್ನು ಬೇರ್ಪಡಿಸಿ ಸ್ವತಂತ್ರ ರಾಷ್ಟ್ರಗಳನ್ನು ರೂಪಿಸಬೇಕೆಂಬ ಉದ್ದೇಶದಿಂದ ಆರಂಭಿಸಿದ ಚಳುವಳಿಗಳು ಈ ವಿಭಾಗದಲ್ಲಿ ಒಳಪಡುತ್ತವೆ. ಪಂಜಾಬ್, ಜಮ್ಮು-ಕಾಶ್ಮೀರ, ಮೀಜೋರಾಂ, ನಾಗಾಲ್ಯಾಂಡ್ ಎಂಬೀ ರಾಜ್ಯಗಳ ಪ್ರತ್ಯೇಕತಾವಾದಿ ಚಳುವಳಿಗಳು ಈ ಗುಂಪಿಗೆ ಸೇರುತ್ತವೆ.

## ಖಾಲಿಸ್ಥಾನ ಚಳವಳಿ

ಖಾಲಿಸ್ತಾನ ಚಳುವಳಿಯು ಸಿಖ್ಖರಿಗಾಗಿ ಖಾಲಿಸ್ಥಾನ ಎಂಬ ಪ್ರತ್ಯೇಕ ರಾಷ್ಟ್ರ ಬೇಕೆಂಬ ಬೇಡಿಕೆಯನ್ನು ಮುಂದಿಟ್ಟುಕೊಂಡು ಪಂಜಾಬಿನಲ್ಲಿ ಬೆಳೆದು ಬಂದ ಚಳುವಳಿಯಾಗಿದೆ. ಸಿಖ್ಖ್ ತೀವ್ರವಾದಿ ವಿಭಾಗವು ಈ ಚಳುವಳಿಗೆ ನೇತೃತ್ವವನ್ನು ನೀಡಿತು. ಪ್ರತ್ಯೇಕ ರಾಷ್ಟ್ರವನ್ನು ಗಳಿಸಬೇಕೆಂಬ ಉದ್ದೇಶಕ್ಕಾಗಿ ಸಶಸ್ತ್ರ ಹೋರಾಟದ ಮಾರ್ಗವನ್ನು ಇವರು ಸ್ವೀಕರಿಸಿದರು. ಪ್ರಮುಖ ಸಿಖ್ಖ್ ಆರಾಧನಾಲಯವಾದ ಅಮೃತಸರದ ಸ್ವರ್ಣದೇಗುಲವನ್ನು ದಂಗೆಗಾರರು ಅವರ ಕೇಂದ್ರವಾಗಿ ಬದಲಾಯಿಸಿದರು. ಸ್ವರ್ಣ ದೇವಾಲಯಕ್ಕೆ ನುಗ್ಗಿದ ಉಗ್ರಗಾಮಿಗಳನ್ನು ಕೇಂದ್ರ ಸರಕಾರವು 1984ರ 'ಆಪರೇಷನ್ ಬ್ಲೂ ಸ್ಟಾರ್' ಎಂಬ ಸೈನಿಕ ಕಾರ್ಯಾಚರಣೆಯ ಮೂಲಕ  ದಮನಿಸಿತು. ಇದರಿಂದಾಗಿ ಪ್ರಧಾನಮಂತ್ರಿ ಇಂದಿರಾ ಗಾಂಧಿಯವರು ತಮ್ಮ ಇಬ್ಬರು  ಸಿಖ್ಖ್ ಅಂಗರಕ್ಷಕರಿಂದಲೇ ಕೊಲ್ಲಲ್ಪಟ್ಟರು. ಇಂದಿರಾ ಗಾಂಧಿಯವರ ಮರಣದ ನಂತರ ದೇಶದ ವಿವಿಧ ಭಾಗಗಳಲ್ಲಿ ಸಿಖ್ಖ್ ವಿರುದ್ಧವಾದ ದಂಗೆಗಳು ಭುಗಿಲೆದ್ದವು. ಈ ದಂಗೆಯಲ್ಲಿ ನಿರಪರಾಧಿಗಳಾದ ಅನೇಕ ಸಿಖ್ಖರು ಕೊಲ್ಲಲ್ಪಟ್ಟರು. 1985ರಲ್ಲಿ ಪ್ರಧಾನ ಮಂತ್ರಿ ರಾಜೀವ ಗಾಂಧಿ ಹಾಗೂ ಸಿಖ್ಖ್ ನೇತಾರನಾದ ಹರಿಚಂದ್ ಸಿಂಗ್ ಲೋಂಗೋವಾಲ್ ಪಂಜಾಬ್ ಒಪ್ಪಂದಕ್ಕೆ ಸಹಿಹಾಕುವುದರೊಂದಿಗೆ ಸ್ಥಿತಿಗತಿಗಳಲ್ಲಿ ಬದಲಾವಣೆಯುಂಟಾಯಿತು. ಅನಂತರ ನಡೆದ ಕಾರ್ಯಕ್ಷಮವಾದ ಪ್ರಜಾಪ್ರಭುತ್ವ ಕಾರ್ಯ ಚಟುವಟಿಕೆಗಳ ಮೂಲಕ ಪಂಜಾಬಿನಲ್ಲಿ ತೀವ್ರವಾದವನ್ನು ಪೂರ್ಣವಾಗಿ ಕೊನೆಗೊಳಿಸಲು ಮತ್ತು ಶಾಂತಿಯನ್ನು ಪುನ: ಸ್ಥಾಪಿಸಲು ಸಾಧ್ಯವಾಯಿತು.

## ಜಮ್ಮು-ಕಾಶ್ಮೀರದ ಪ್ರತ್ಯೇಕತಾವಾದಿ ಚಳುವಳಿಗಳು

ಸಂವಿಧಾನದ 370ನೇ ವಿಧಿಯ ಪ್ರಕಾರ ವಿಶೇಷವಾದ ಹಕ್ಕುಗಳು ಜಮ್ಮು ಕಾಶ್ಮೀರ ರಾಜ್ಯಕ್ಕೆ ಲಭಿಸಿತ್ತು. ಭಾರತದಿಂದ ಕಾಶ್ಮೀರವನ್ನು ವಿಭಜಿಸಿ ಒಂದು ಸ್ವತಂತ್ರ ರಾಷ್ಟ್ರವನ್ನಾಗಿ ಮಾಡಬೇಕು ಅಥವಾ ಪಾಕಿಸ್ತಾನದೊಂದಿಗೆ ಸೇರಿಸಬೇಕು ಎಂಬ ಉದ್ದೇಶದಿಂದ ಜಮ್ಮು ಕಾಶ್ಮೀರದ ಪ್ರತ್ಯೇಕತಾವಾದಿಗಳು ಕಾರ್ಯವೆಸಗುತ್ತಿದ್ದರು. ಇವರು ನಡೆಸಿದ ಸಶಸ್ತ್ರ ಧಾಳಿಗಳು ದೇಶದ ರಕ್ಷಣೆ, ಏಕತೆ ಹಾಗೂ ಅಖಂಡತೆಗೆ ಬಹಳಷ್ಟು ಬೆದರಿಕೆಯನ್ನು ತಂದೊಡ್ಡಿದವು. ಶಾಂತಿ ಮಾತುಕತೆಗಳ ಮೂಲಕ ಹಾಗೂ ವಿಶೇಷ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ ಶಾಂತಿಯನ್ನು ಪುನಃ ಸ್ಥಾಪಿಸಲು ಕೇಂದ್ರ ಸರಕಾರವು ಪ್ರಯತ್ನಿಸಿತು. 370ನೇ ವಿಧಿಯ ಪ್ರಕಾರ ಜಮ್ಮು-ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಹಕ್ಕುಗಳನ್ನು 2019 ರಲ್ಲಿ ಕೇಂದ್ರ ಸರ್ಕಾರವು ಹಿಂತೆಗೆಯಿತಲ್ಲದೆ ಜಮ್ಮು ಮತ್ತು ಕಾಶ್ಮೀರ ಮರುಸಂಘಟನೆ ಕಾಯಿದೆಯನ್ನು ಅಂಗೀಕರಿಸಿತು. ಇದರ ಪ್ರಕಾರ ಜಮ್ಮು-ಕಾಶ್ಮೀರಕ್ಕೆ ರಾಜ್ಯದ ಪದವಿಯು ನಷ್ಟವಾಯಿತಲ್ಲದೆ ಜಮ್ಮು ಕಾಶ್ಮೀರ ಮತ್ತು ಲಢಾಖ್ ಎಂಬೀ ಎರಡು ಕೇಂದ್ರಾಡಳಿತ ಪ್ರದೇಶಗಳಾಗಿ ಪುನಃ ರಚಿಸಲಾಯಿತು. 2024ರಲ್ಲಿ ಜಮ್ಮು-ಕಾಶ್ಮೀರ ವಿಧಾನಸಭೆಗೆ ಶಾಂತಿಯುತವಾದ ಚುನಾವಣೆಯನ್ನು ನಡೆಸಲು ಸಾಧ್ಯವಾಯಿತು. ಇದರಂತೆ ಜಮ್ಮು-ಕಾಶ್ಮೀರದಲ್ಲಿ ನ್ಯಾಷನಲ್ ಕಾನ್ಫರೆನ್ಸ್ ನಾಯಕನಾದ ಓಮರ್ ಅಬ್ದುಲ್ಲ ಮುಖ್ಯಮಂತ್ರಿಯಾಗಿರುವ ಸರಕಾರವು ರೂಪಿತವಾಯಿತು.

ಭಾರತದ ವಾಯುವ್ಯ ಭಾಗದಂತೆಯೇ ಈಶಾನ್ಯದಲ್ಲಿಯೂ ಪ್ರತ್ಯೇಕತಾವಾದಿ ಚಳುವಳಿಗಳು ಹುಟ್ಟಿಕೊಂಡಿದ್ದವು. ಈಶಾನ್ಯ ರಾಜ್ಯಗಳಲ್ಲಿ ಅಸ್ತಿತ್ವದಲ್ಲಿದ್ದ ಕೆಲವು ಪ್ರತ್ಯೇಕತಾವಾದಿ ಚಳುವಳಿಗಳನ್ನು ನಾವು ಪರಿಚಯಿಸಿಕೊಳ್ಳೋಣ.

## ಈಶಾನ್ಯದ ಪ್ರತ್ಯೇಕತಾವಾದಿ ಚಳವಳಿಗಳು

| ಚಳುವಳಿ | ನೇತೃತ್ವ | ಬೇಡಿಕೆ | ಪರಿಹಾರ |
|---|---|---|---|
| ಮಿಜೋ ನ್ಯಾಷನಲ್ ಫ್ರಂಟ್ (MNF) | ಲಾಲ್ ಡೆಂಗ | ಮಿಜೋ ಬುಡಕಟ್ಟು ಜನಾಂಗದವರಿಗಾಗಿ ಪ್ರತ್ಯೇಕ ರಾಷ್ಟ್ರ | 1986ರ ಶಾಂತಿ ಒಪ್ಪಂದದ ಪ್ರಕಾರ ಮಿಜೋರಾಮಿಗೆ ವಿಶೇಷ ಅಧಿಕಾರಗಳೊಂದಿಗೆ ಸಂಪೂರ್ಣ ರಾಜ್ಯ ಪದವಿಯನ್ನು ನೀಡಲು ತೀರ್ಮಾನಿಸಲಾಯಿತು. |
| ನಾಗಾ ನ್ಯಾಷನಲ್ ಕೌನ್ಸಿಲ್ | ಅಂಗಾಮಿ ಝೂಪು ಫಿಸೋ | ನಾಗ ಪ್ರದೇಶಗಳ ಏಕೀಕರಣ, ಸ್ವಯಂ ಆಡಳಿತೆ, ಬುಡಕಟ್ಟು ಸಂಸ್ಕೃತಿಯ ರಕ್ಷಣೆ. | 2015ರಲ್ಲಿ ನಾಗಾ ಶಾಂತಿ ಒಪ್ಪಂದಕ್ಕೆ ಸಹಿಹಾಕಿದರು. |

## ಭಾರತೀಯ ಪ್ರಜಾಪ್ರಭುತ್ವವು ಎದುರಿಸುತ್ತಿರುವ ಇತರ ಕೆಲವು ಸವಾಲುಗಳು

ಕೋಮುವಾದ, ಕೇಂದ್ರ - ರಾಜ್ಯ ಸಂಬಂಧಗಳಲ್ಲಿನ ಘರ್ಷಣೆ, ಭ್ರಷ್ಟಾಚಾರ, ರಾಜಕೀಯ ಅಪರಾಧೀಕರಣ, ಪಕ್ಷಾಂತರ ಮೊದಲಾದ ವಿದ್ಯಮಾನಗಳು ನಮ್ಮ ದೇಶದ ಪ್ರಜಾಸತ್ತಾತ್ಮಕ ಪ್ರಕ್ರಿಯೆಯನ್ನು ಅಸ್ಥಿರಗೊಳಿಸುವ ಪ್ರಮುಖ ಸವಾಲುಗಳಾಗಿವೆ. ಇವು ಜನರ ಸಮಾಧಾನಕರವಾದ ಜೀವನ, ರಾಷ್ಟ್ರದ ಪ್ರಗತಿ ಹಾಗೂ ಆರ್ಥಿಕ ಅಭಿವೃದ್ಧಿಯನ್ನು ಪ್ರತಿಕೂಲವಾಗಿ ಬಾಧಿಸುತ್ತವೆ. ಈ ವಿಚಾರಗಳು ಭಾರತದ ಪ್ರಜಾಪ್ರಭುತ್ವಕ್ಕೆ ಹೇಗೆ ಸವಾಲುಗಳನ್ನು ಒಡ್ಡುತ್ತವೆ ಎಂಬುದನ್ನು ನಾವು ಪರಿಶೀಲಿಸೋಣ.

### ಕೋಮುವಾದ (Communalism)

ಕೋಮುವಾದವೆಂದರೆ ಧರ್ಮದ ಆಧಾರದಲ್ಲಿ ಜನರನ್ನು ವಿಭಜಿಸಿ ಸಾಮಾಜಿಕ ಘರ್ಷಣೆಯನ್ನು ಉಂಟುಮಾಡುವ ಆಶಯವಾಗಿದೆ. ಸಾಮ್ರಾಜ್ಯಶಾಹಿ ಆಡಳಿತ ಕಾಲದಲ್ಲಿ ವಿಭಜಿಸಿ ಆಳ್ವಿಕೆ ನಡೆಸುವುದು ಎಂಬ ಬ್ರಿಟಿಷ್ ತಂತ್ರವು ಧರ್ಮದ ಆಧಾರದಲ್ಲಿ ಭಾರತೀಯರನ್ನು ವಿಭಜಿಸಿತಲ್ಲದೆ ಕೋಮುವಾದವನ್ನು ಬೆಳೆಸಲು ಕಾರಣವಾಯಿತು. ಅಂತೆಯೇ ಭಾರತದ ವಿಭಜನೆಯಿಂದಾದ ಗಲಭೆಗಳು ಜನರನ್ನು ಮತದ ಆಧಾರದಲ್ಲಿ ವಿಭಜಿಸಿತಲ್ಲದೆ ಕೋಮುವಾದಿ ಚಿಂತನೆಯು ಬೆಳೆಯಲು ದಾರಿಮಾಡಿಕೊಟ್ಟಿತು. ಕೋಮುವಾದಿ ಪಂಗಡಗಳಿಂದಾಗಿ ನಮ್ಮ ಸಾಂವಿಧಾನಿಕ ಮೌಲ್ಯಗಳಾದ ಜಾತ್ಯತೀತತೆ, ಸಾಮಾಜಿಕ ನ್ಯಾಯ ಎಂಬಿವುಗಳು ದುರ್ಬಲವಾಗುತ್ತವೆಯಲ್ಲದೆ ರಾಷ್ಟ್ರದ ಏಕತೆ ಹಾಗೂ ಅಖಂಡತೆಗೆ ಬೆದರಿಕೆಯನ್ನೊಡ್ಡುತ್ತವೆ. ಧರ್ಮ ಹಾಗೂ ಕೋಮುಚಿಂತನೆಯ ಆಧಾರದಲ್ಲಿ ಜನಾಭಿಪ್ರಾಯವನ್ನು ರೂಪಿಸುವುದು ಹಾಗೂ ರಾಜಕೀಯ ಪಕ್ಷಗಳು ಇದನ್ನು ಚುನಾವಣಾ ಸಮಯದಲ್ಲಿ ಮತದಾರರ ಮೇಲೆ ಪ್ರಭಾವ ಬೀರಲು ಉಪಯೋಗಿಸಿಕೊಳ್ಳುವುದು ಪ್ರಜಾಪ್ರಭುತ್ವಕ್ಕೆ ಬೆದರಿಕೆಯನ್ನೊಡ್ಡುತ್ತದೆ. ಜನಜಾಗೃತಿಯನ್ನು ಮೂಡಿಸುವುದರ ಮೂಲಕ, ಅರಿವು ನೀಡುವ ಮೂಲಕ ಮತ್ತು ಸರಿಯಾದ ಪ್ರಜಾಪ್ರಭುತ್ವ ಶಿಕ್ಷಣವನ್ನು ನೀಡುವುದರ ಮೂಲಕ ಮಾತ್ರ ಕೋಮುವಾದವನ್ನು ತಡೆಯಲು ಸಾಧ್ಯವಾಗಬಹುದು.

'ಕೋಮುವಾದವು ಭಾರತದ ಪ್ರಜಾಪ್ರಭುತ್ವದಲ್ಲಿ ಸೃಷ್ಟಿಸುವ ವಿಪತ್ತು' ಎಂಬ ವಿಷಯದಲ್ಲಿ ಒಂದು ಭಾಷಣವನ್ನು ತಯಾರಿಸಿರಿ .

## ಕೇಂದ್ರ - ರಾಜ್ಯ ಸಂಬಂಧಗಳಲ್ಲಿನ ಘರ್ಷಣೆ
## (Tensions in Centre-State Relations)




ಮೇಲೆ ನೀಡಿರುವ ವಾರ್ತಾಶೀರ್ಷಿಕೆಗಳನ್ನು ಓದಿದಿರಲ್ಲವೇ. ಇವು ಅಧಿಕಾರದ ಮಿತಿಯನ್ನು ಉಲ್ಲಂಘಿಸುವ ರಾಜ್ಯಪಾಲರಿಗೆದುರಾಗಿ ಗೌರವಾನ್ವಿತ ಸುಪ್ರೀಂಕೋರ್ಟ್ ವ್ಯಕ್ತಪಡಿಸಿದ ಅಭಿಪ್ರಾಯವಾಗಿದೆ. ಇವುಗಳಿಂದ ನೀವು ಏನೆಲ್ಲ ತಿಳಿದುಕೊಂಡಿರಿ?

- 
- 

ಕೇಂದ್ರ - ರಾಜ್ಯ ಸಂಬಂಧಗಳಲ್ಲಿನ ಘರ್ಷಣೆಗಳು ಭಾರತದ ಪ್ರಜಾಪ್ರಭುತ್ವವು ಎದುರಿಸುವ ಇನ್ನೊಂದು ಪ್ರಮುಖ ಸಮಸ್ಯೆಯಾಗಿದೆ. ಸಂವಿಧಾನವು ಅಧಿಕಾರವನ್ನು ಕೇಂದ್ರ ಮತ್ತು ರಾಜ್ಯಗಳಿಗಾಗಿ ವಿಭಜಿಸಿ ಕೊಟ್ಟಿದ್ದರೂ ಹೆಚ್ಚಿನ ಅಧಿಕಾರವು ಕೇಂದ್ರ ಸರಕಾರದಲ್ಲಿ ನಿಕ್ಷಿಪ್ತವಾಗಿದೆ. ಕೆಲವು ವಿಷಯಗಳಲ್ಲಿ ಕೇಂದ್ರ ಸರಕಾರದ ಮೇಲುಗೈಯು ಇದನ್ನು ಖಚಿತಪಡಿಸಿದೆ. ಇನ್ನೊಂದು ನಿಟ್ಟಿನಲ್ಲಿ ರಾಜ್ಯಗಳಿಗೆ ನೀಡಿರುವ ಅಧಿಕಾರಗಳನ್ನು ಸ್ವತಂತ್ರವಾಗಿ ಬಳಸಲಿರುವ ಹಕ್ಕನ್ನು ಸಂವಿಧಾನವು ಅವುಗಳಿಗೆ ನೀಡಿದೆ. ಆದರೂ ಆಗಾಗ ಬದಲಾಗುತ್ತಿರುವ ಕೇಂದ್ರ ಸರಕಾರಗಳು ನೇರವಾಗಿ ಅಥವಾ ರಾಜ್ಯಪಾಲರ ಮೂಲಕ ರಾಜ್ಯಗಳ ಹಕ್ಕುಗಳ ಮೇಲೆ ಮಧ್ಯಪ್ರವೇಶ ಮಾಡುತ್ತವೆ. ಕೇಂದ್ರ ಸರಕಾರ ತಯಾರಿಸುವ ಯೋಜನೆಗಳಲ್ಲಿ ಹಾಗೂ ಸಂಪನ್ಮೂಲಗಳ ಹಂಚಿಕೆಯಲ್ಲಿ ರಾಜಕೀಯ ಹಸ್ತಕ್ಷೇಪವಾಗುವುದನ್ನು ನಾವು ಕಾಣುತ್ತೇವೆ. ಇಂತಹ ಚಟುವಟಿಕೆಗಳು ಕೇಂದ್ರ - ರಾಜ್ಯ ಸಂಬಂಧಗಳನ್ನು ಪ್ರಮುಖವಾಗಿ ಕಲುಷಿತಗೊಳಿಸುತ್ತವೆ. ಕೇಂದ್ರ ಹಾಗೂ ರಾಜ್ಯಗಳೊಳಗಿನ ಕಾನೂನು ಬದ್ಧವಾದ ವಿವಾದಗಳಿಗೆ ತೀರ್ಪು ನೀಡುವ ಅಧಿಕಾರವು ನ್ಯಾಯಾಲಯದ್ದಾಗಿದೆ.

## ಕೇಂದ್ರ- ರಾಜ್ಯ ಸಂಬಂಧಗಳು (Centre – State Relations)

ವಾಸ್ತವವಾಗಿ ಸಂವಿಧಾನವೆಂಬುದು ಒಂದು ಚೌಕಟ್ಟು ಅಥವಾ ಅಸ್ಥಿಪಂಜರ ಮಾತ್ರವಾಗಿದೆ. ಅದಕ್ಕೆ ಮಾಂಸ ಮತ್ತು ರಕ್ತವನ್ನು ಕೊಡುವುದು ಯಥಾರ್ಥ ರಾಜಕೀಯ ಪ್ರಕ್ರಿಯೆಗಳಾಗಿವೆ. ಭಾರತದ ಸಂಯುಕ್ತ ವ್ಯವಸ್ಥೆಯ ಮೇಲೆ ಒಂದು ಮಿತಿಯವರೆಗೆ ಪ್ರಮುಖವಾದ ಪ್ರಭಾವವನ್ನು ಬೀರುವುದು ಬದಲಾಗುತ್ತಿರುವ ರಾಜಕೀಯ ಪ್ರಕ್ರಿಯೆಗಳಾಗಿವೆ. ಸಂವಿಧಾನವು ಅಸ್ತಿತ್ವಕ್ಕೆ ಬಂದಂದಿನಿಂದ ಮೊದಲ್ಗೊಂಡು ಕೇಂದ್ರ- ರಾಜ್ಯ ಸಂಬಂಧವನ್ನು ಉತ್ತಮಪಡಿಸುವುದರಲ್ಲಿ ರಾಜ್ಯಪಾಲರ ಪಾತ್ರವು ಅತ್ಯಂತ ನಿರ್ಣಾಯಕವಾದುದಾಗಿದೆ.

## ರಾಜ್ಯಪಾಲರ ಪಾತ್ರ (Role of Governor)

ರಾಜ್ಯಪಾಲರ ಪಾತ್ರವು ಎಲ್ಲಾ ಸಮಯದಲ್ಲೂ ರಾಜ್ಯ ಮತ್ತು ಕೇಂದ್ರ ಸರಕಾರಗಳೊಳಗಿನ ಒಂದು ವಿವಾದ ವಿಷಯವಾಗಿದೆ. ರಾಜ್ಯಪಾಲರದ್ದು ಚುನಾಯಿಸಲ್ಪಟ್ಟ ಒಂದು ಔದ್ಯೋಗಿಕ ಹುದ್ದೆಯಲ್ಲ. ನಿವೃತ್ತಿ ಹೊಂದಿದ ಸೈನಿಕ ಉದ್ಯೋಗಿಗಳು, ಸರಕಾರಿ ಉದ್ಯೋಗಿಗಳು, ರಾಜಕೀಯ ವ್ಯಕ್ತಿಗಳು ಎಂಬಿವರನ್ನು ಸರ್ವಸಾಮಾನ್ಯವಾಗಿ ರಾಜ್ಯಪಾಲರಾಗಿ ನೇಮಿಸಲಾಗುತ್ತದೆ. ಕೇಂದ್ರ ಸರಕಾರದ ಶಿಫಾರಸಿನ ಮೇರೆಗೆ ರಾಷ್ಟ್ರಪತಿಯವರು ರಾಜ್ಯಪಾಲರನ್ನು ನೇಮಿಸುತ್ತಾರೆ. ರಾಜ್ಯಪಾಲರಾಗಬೇಕಿದ್ದರೆ ಕನಿಷ್ಠ 35 ವರ್ಷ ಪ್ರಾಯವಾಗಿರಬೇಕು.

ಕೇಂದ್ರದಲ್ಲಿ ಮತ್ತು ರಾಜ್ಯಗಳಲ್ಲಿ ವಿಭಿನ್ನ ರಾಜಕೀಯ ಪಕ್ಷಗಳು ಆಡಳಿತ ನಡೆಸುವ ಸಂದರ್ಭದಲ್ಲಿ ರಾಜ್ಯಪಾಲರ ಪಾತ್ರವು ಹೆಚ್ಚು ವಿವಾದಗಳಿಗೆ ಕಾರಣವಾಗುತ್ತದೆ. ಈ ಕಾರಣದಿಂದಾಗಿ ರಾಜ್ಯಪಾಲರ ಕ್ರಮಗಳನ್ನು ರಾಜ್ಯ ಸರಕಾರದ ಕಾರ್ಯನಿರ್ವಹಣೆಯಲ್ಲಿ ಕೇಂದ್ರ ಸರಕಾರದ ಹಸ್ತಕ್ಷೇಪವಾಗಿ ಹೆಚ್ಚಾಗಿ ವ್ಯಾಖ್ಯಾನಿಸಲಾಗುತ್ತದೆ. ಕೇಂದ್ರ - ರಾಜ್ಯ ಸಂಬಂಧಗಳ ಕುರಿತು ಅಧ್ಯಯನ ನಡೆಸುವುದಕ್ಕಾಗಿ 1983 ರಲ್ಲಿ ಕೇಂದ್ರ ಸರಕಾರವು ನೇಮಿಸಿದ ಸರ್ಕಾರಿಯಾ ಆಯೋಗವು ಸಕ್ರಿಯ ರಾಜಕಾರಣಿಗಳನ್ನು ರಾಜ್ಯಪಾಲರಾಗಿ ನೇಮಿಸಬಾರದೆಂದು ಶಿಫಾರಸು ಮಾಡಿದೆ.

### ಸರ್ಕಾರಿಯಾ ಆಯೋಗ

ಇದು ಕೇಂದ್ರ- ರಾಜ್ಯ ಸಂಬಂಧಗಳ ಕುರಿತು ಅಧ್ಯಯನ ನಡೆಸಿ ವರದಿ ಸಮರ್ಪಿಸುವುದಕ್ಕಾಗಿ ಕೇಂದ್ರ ಸರಕಾರವು ನೇಮಿಸಿದ ಆಯೋಗವಾಗಿದೆ. 1983 ರಲ್ಲಿ ನೇಮಿಸಲ್ಪಟ್ಟ ಆಯೋಗದ ಅಧ್ಯಕ್ಷರು ಸುಪ್ರೀಂಕೋರ್ಟಿನ ನಿವೃತ್ತ ನ್ಯಾಯಾಧೀಶರಾಗಿದ್ದ ಆರ್. ಎಸ್. ಸರ್ಕಾರಿಯಾ ಆಗಿದ್ದರು. 1988ರಲ್ಲಿ ಆಯೋಗವು ತನ್ನ ವರದಿಯನ್ನು ಸಮರ್ಪಿಸಿತು. ಕಾಲ ಕಳೆದಂತೆ ಕೇಂದ್ರ ಸರಕಾರದ ಅಧಿಕಾರಗಳು ಹೆಚ್ಚುತ್ತಿರುವುದಾಗಿ ಆಯೋಗವು ಬೊಟ್ಟು ಮಾಡಿಹೇಳಿತು. ಕೇಂದ್ರ- ರಾಜ್ಯ ಸಂಬಂಧಗಳೊಳಗಿನ ವೈಮನಸ್ಸು ಹಾಗೂ ಘರ್ಷಣೆಯನ್ನು ತಪ್ಪಿಸಲು ಸಂವಿಧಾನಾತ್ಮಕವಾಗಿ ಮತ್ತು ರಾಜಕೀಯವಾಗಿ ಬದಲಾವಣೆಗಳು ಅಗತ್ಯವೆಂಬುದಾಗಿ ಆಯೋಗವು ಕಂಡುಕೊಂಡಿತು. ಸರ್ಕಾರಿಯಾ ಆಯೋಗದ ವರದಿಯು ವ್ಯಾಪಕವಾಗಿ ಸ್ವಾಗತಿಸಲ್ಪಟ್ಟರೂ ಅವು ಪೂರ್ಣವಾಗಿ ಜಾರಿಯಾಗಲಿಲ್ಲ.

ರಾಜ್ಯಪಾಲರ ಪಾತ್ರ ಹಾಗೂ ಅಧಿಕಾರಗಳು ವಿವಾದವಾಗಲು ಮತ್ತೊಂದು ಕಾರಣವು ಕೂಡಾ ಇದೆ. ಸಂವಿಧಾನದ 356 ನೇ ವಿಧಿಯು ಈ ವಿವಾದಕ್ಕೆ ಅಡಿಪಾಯ. ಭಾರತದ ಯಾವುದೇ ರಾಜ್ಯದಲ್ಲಿಯೂ ರಾಷ್ಟ್ರಪತಿ ಆಡಳಿತವನ್ನು ಹೇರಬಹುದೆಂಬುದಾಗಿ ಈ ವಿಧಿಯ ವ್ಯವಸ್ಥೆಯಲ್ಲಿ ಹೇಳಲಾಗಿದೆ. ರಾಜ್ಯಪಾಲರ ವರದಿಯ ಆಧಾರದಲ್ಲಿ ರಾಷ್ಟ್ರಪತಿಯವರು ಆ ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತವನ್ನು ಹೇರಬಹುದು. ಆದರೆ ಸಂವಿಧಾನದ ವ್ಯವಸ್ಥೆಗಳಿಗೆ ಅನುಸಾರವಾಗಿ ಆಡಳಿತವನ್ನು ನಡೆಸಿಕೊಂಡು ಹೋಗುವುದರಲ್ಲಿ ರಾಜ್ಯ ಸರಕಾರವು ಪರಾಜಯಗೊಂಡಲ್ಲಿ ಮಾತ್ರವೇ ಈ ವಿಧಿಯನ್ನು ಉಪಯೋಗಿಸಬಹುದೆಂಬುದಾಗಿ ಸಂವಿಧಾನ ಹೇಳುತ್ತದೆ.

### 356ನೇ ವಿಧಿ

ರಾಜ್ಯಗಳಲ್ಲಿ ಪ್ರಜಾಸತ್ತಾತ್ಮಕವಾಗಿ ಚುನಾಯಿಸಲ್ಪಟ್ಟ ಸರಕಾರಗಳನ್ನು ವಜಾಗೊಳಿಸಲು, ರಾಜ್ಯ ಆಡಳಿತವನ್ನು ವಶಕ್ಕೆ ಪಡೆಯಲು 356ನೇ ವಿಧಿಯು ರಾಷ್ಟ್ರಪತಿಗೆ ಅಧಿಕಾರವನ್ನು ನೀಡುತ್ತದೆ. ರಾಜ್ಯಪಾಲರು ರಾಷ್ಟ್ರಪತಿಗೆ ಸಮರ್ಪಿಸುವ ವರದಿಯ ಆಧಾರದಲ್ಲಿ ರಾಷ್ಟ್ರಪತಿಯವರು ಆಡಳಿತವನ್ನು ಹೇರುತ್ತಾರೆ.

- ಭಾರತೀಯ ಸಂವಿಧಾನವು ಅಸ್ತಿತ್ವಕ್ಕೆ ಬಂದ ನಂತರ ಮೊತ್ತಮೊದಲ ಬಾರಿಗೆ ಈ ವಿಧಿಯನ್ನುಪಯೋಗಿಸಿ 1951 ರಲ್ಲಿ ಪಂಜಾಬ್ ಸರಕಾರವನ್ನು ವಜಾಗೊಳಿಸಲಾಗಿತ್ತು.
- 1967ರ ಸಾರ್ವತ್ರಿಕ ಚುನಾವಣೆಗಿಂತ ಹಿಂದಿನ ವರೆಗೆ 356 ನೇ ವಿಧಿಯನ್ನು ವಿರಳವಾಗಿ ಮಾತ್ರವೇ ಬಳಸುತ್ತಿದ್ದರು. ಆದರೆ 1967ರ ನಂತರ ಇದನ್ನು ವ್ಯಾಪಕವಾಗಿ ಪ್ರಯೋಗಿಸಲಾಯಿತು.

ರಾಜ್ಯಪಾಲರ ಈ ಅಧಿಕಾರವು ಅನೇಕ ಘರ್ಷಣೆಗಳಿಗೆ ದಾರಿ ಮಾಡಿಕೊಟ್ಟಿದೆ. ವಿಧಾನಸಭೆಯಲ್ಲಿ ಸ್ಪಷ್ಟವಾದ ಬಹುಮತವಿರುವ ರಾಜ್ಯ ಸರಕಾರಗಳನ್ನು ಕೂಡ ರಾಷ್ಟ್ರಪತಿಯವರು ವಜಾಗೊಳಿಸಿದ ಸಂದರ್ಭಗಳಿವೆ. 1959ರಲ್ಲಿ ಕೇರಳ ಸರಕಾರವನ್ನು ವಜಾಗೊಳಿಸಿದ್ದು ಇದಕ್ಕೆ ಉದಾಹರಣೆಯಾಗಿದೆ.

## ರಾಜ್ಯಪಾಲರ ಅಧಿಕಾರಗಳು ಮತ್ತು ಜವಾಬ್ದಾರಿಗಳು

ಕೇಂದ್ರದಂತೆಯೇ ರಾಜ್ಯಗಳಲ್ಲಿಯೂ ಸಂಸದೀಯ ವ್ಯವಸ್ಥೆಯನ್ನು ಸಂವಿಧಾನವು ಹೇಳುತ್ತದೆ. ಆದುದರಿಂದಲೇ ರಾಜ್ಯಪಾಲರು ರಾಜ್ಯದ ನಾಮಮಾತ್ರ ನಾಯಕರಾಗಿದ್ದಾರೆ (Nominal leader). ಮುಖ್ಯಮಂತ್ರಿಯವರು ನಾಯಕನಾಗಿರುವ ಮಂತ್ರಿಮಂಡಲದಲ್ಲಿ ಯಥಾರ್ಥವಾದ ಕಾರ್ಯ ನಿರ್ವಹಣಾ ಅಧಿಕಾರವು ನಿಕ್ಷಿಪ್ತವಾಗಿದೆ. ಆದುದರಿಂದ ಮಂತ್ರಿಮಂಡಲದ ನಿರ್ದೇಶನದ ಪ್ರಕಾರ ರಾಜ್ಯಪಾಲರು ತಮ್ಮ ಅಧಿಕಾರವನ್ನು ನಿರ್ವಹಿಸಬೇಕಾಗುತ್ತದೆ. ರಾಜ್ಯಪಾಲರ ಪ್ರಮುಖ ಅಧಿಕಾರಗಳು ಮತ್ತು ಜವಾಬ್ದಾರಿಗಳನ್ನು ಕೆಳಗೆ ನೀಡಲಾಗಿದೆ.

### ಕಾನೂನು ನಿರ್ಮಾಣ ಅಧಿಕಾರಗಳು (Legislative Powers)

- ವಿಧಾನ ಸಭೆಯನ್ನು ಕರೆಯುವುದು, ಸದನ ಸಮ್ಮೇಳನಗಳು ಕೊನೆಗೊಂಡಿರುವುದಾಗಿ ಘೋಷಿಸುವುದು, ಸದನವನ್ನು ವಜಾಗೊಳಿಸುವುದು.
- ಸದನವನ್ನು ಉದ್ದೇಶಿಸಿ ಮಾತನಾಡುವುದು.
- ಸದನವು ಅಂಗೀಕರಿಸಿದ ಮಸೂದೆಗಳನ್ನು ಅನುಮೋದಿಸುವುದು.
- ಸುಗ್ರೀವಾಜ್ಞೆಗಳನ್ನು ಹೊರಡಿಸುವುದು.
- ಮುಂಗಡಪತ್ರ ಮತ್ತು ಹಣಕಾಸಿನ ಮಸೂದೆಗಳನ್ನು ಸದನದಲ್ಲಿ ಮಂಡಿಸಲು ಅಗತ್ಯವಾದ ಪೂರ್ವಾನುಮತಿಯನ್ನು ನೀಡುವುದು.

### ಕಾರ್ಯನಿರ್ವಾಹಕ ಅಧಿಕಾರಗಳು (Executive Powers)

- ರಾಜ್ಯದ ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಗಳು ರಾಜ್ಯಪಾಲರ ಹೆಸರಿನಲ್ಲಿ ನಿರ್ವಹಿಸಲ್ಪಡುತ್ತವೆ.
- ರಾಜ್ಯದಲ್ಲಿ ಅತ್ಯಧಿಕ ಬಹುಮತ ಪಡೆದ ರಾಜಕೀಯ ಪಕ್ಷದ ಅಥವಾ ಒಕ್ಕೂಟದ ನಾಯಕನನ್ನು ಸರಕಾರ ರೂಪೀಕರಣಕ್ಕಾಗಿ ಆಹ್ವಾನಿಸುವುದು.
- ರಾಜ್ಯದ ಮುಖ್ಯಮಂತ್ರಿಯನ್ನು ಮತ್ತು ಮುಖ್ಯಮಂತ್ರಿಯ ಸೂಚನೆಯ ಮೇರೆಗೆ ಇತರ ಮಂತ್ರಿಗಳನ್ನು ನೇಮಿಸುವುದು.

- ಅಡ್ವಕೇಟ್ ಜನರಲ್, ರಾಜ್ಯ ಪಿ.ಎಸ್.ಸಿ. ಯ ಅಧ್ಯಕ್ಷರು, ಪಿ.ಎಸ್.ಸಿ. ಸದಸ್ಯರು ಎಂಬಿವರನ್ನು ನೇಮಿಸುವುದು.

**ನ್ಯಾಯಾಂಗ ಅಧಿಕಾರಗಳು (Judiciary Powers)**

- ರಾಜ್ಯ ಸರಕಾರದ ಕಾರ್ಯನಿರ್ವಹಣೆಯ ಪರಿಧಿಯಲ್ಲಿ ಬರುವ ವಿಷಯಗಳಿಗೆ ಸಂಬಂಧಿಸಿದ ಅಪರಾಧಗಳಿಗೆ ಕ್ಷಮೆ ನೀಡುವುದಕ್ಕೂ ಶಿಕ್ಷೆಯನ್ನು ತಾತ್ಕಾಲಿಕವಾಗಿ ತಡೆಹಿಡಿಯುವುದಕ್ಕೂ ವಿನಾಯಿತಿಯನ್ನು ನೀಡುವುದಕ್ಕೂ, ಕಡಿಮೆ ಮಾಡುವುದಕ್ಕೂ ಇರುವ ಅಧಿಕಾರ.

**ವಿವೇಚನ ಅಧಿಕಾರಗಳು (Discretionary Powers)**

- ವಿಧಾನಸಭೆಯಲ್ಲಿ ಯಾವ ಪಕ್ಷಕ್ಕೂ ಬಹುಮತ ಲಭಿಸದೇ ಇದ್ದ ಸಂದರ್ಭದಲ್ಲಿ ಮಂತ್ರಿಮಂಡಲವನ್ನು ರೂಪಿಸುವುದಕ್ಕಾಗಿ ರಾಜ್ಯಪಾಲರಿಗೆ ತಮ್ಮ ವಿವೇಚನಾಧಿಕಾರವನ್ನು ಬಳಸಬಹುದಾಗಿದೆ.
- ರಾಜ್ಯದ ಆಡಳಿತ ವಿಷಯಗಳ ಬಗ್ಗೆ ರಾಷ್ಟ್ರಪತಿಗೆ ವರದಿಯನ್ನು ಸಮರ್ಪಿಸುವುದು
- ವಿಧಾನಸಭೆಯು ಅಂಗೀಕರಿಸಿದ ಮಸೂದೆಗಳನ್ನು ರಾಜ್ಯಪಾಲರ ಅನುಮೋದನೆಗಾಗಿ ಸಮರ್ಪಿಸುವಾಗ ರಾಜ್ಯಪಾಲರು ಕೆಳಗೆ ಹೇಳಿರುವ ಕ್ರಮಗಳನ್ನು ಸ್ವೀಕರಿಸಬಹುದು.
  - ಮಸೂದೆಗೆ ಅನುಮೋದನೆ ನೀಡಿರುವುದಾಗಿಯೋ ಅಥವಾ ನೀಡದೇ ಇರುವುದಾಗಿ ಘೋಷಿಸುವುದು.
  - ತಿದ್ದುಪಡಿಯೊಂದಿಗೆ ವಿಧಾನಸಭೆಗೆ ಹಿಂತಿರುಗಿಸುವುದು. ಹೀಗೆ ಹಿಂತಿರುಗಿಸಿದ ಮಸೂದೆಯನ್ನು ಸದನವು ಪುನ: ಪರಿಗಣಿಸಿ ತಿದ್ದುಪಡಿಯೊಂದಿಗೆ ಅಥವಾ ತಿದ್ದುಪಡಿ ಇಲ್ಲದೆ ಅಂಗೀಕರಿಸಿ ರಾಜ್ಯಪಾಲರಿಗೆ ಸಮರ್ಪಿಸಿದಾಗ ರಾಜ್ಯಪಾಲರು ಅದಕ್ಕೆ ಅಂಗೀಕಾರವನ್ನು ನೀಡಲು ಬಾಧ್ಯಸ್ಥರಾಗಿದ್ದಾರೆ.
  - ಮಸೂದೆಯನ್ನು ರಾಷ್ಟ್ರಪತಿಯವರ ಪರಿಗಣನೆಗಾಗಿ ಸಮರ್ಪಿಸುವುದು.

ರಾಜ್ಯದ ಪ್ರಜಾಪ್ರಭುತ್ವ ಪ್ರಕ್ರಿಯೆಯನ್ನು ಸುಗಮ ಹಾಗೂ ಸಂವಿಧಾನದ ಆಶಯಕ್ಕೆ ಅನುಗುಣವಾಗಿ ಮುಂದಕ್ಕೆ ಕೊಂಡೊಯ್ಯಲು ರಾಜ್ಯ ಸರಕಾರಗಳಿಗೆ ಸಹಾಯ ಮಾಡುವುದು ರಾಜ್ಯಪಾಲರ ಜವಾಬ್ದಾರಿಯಾಗಿದೆ. ರಾಜ್ಯಪಾಲರು ಮುಖ್ಯಮಂತ್ರಿಯ ನಿಯಂತ್ರಣದಲ್ಲಿರುವ ಮಂತ್ರಿಮಂಡಲವನ್ನು ನಿಯಂತ್ರಿಸಲಿರುವ ಅಧಿಕಾರಿಗಳಲ್ಲ ಬದಲಾಗಿ ಅದರ ಸ್ನೇಹಿತ, ತತ್ವಜ್ಞಾನಿ ಮತ್ತು ಮಾರ್ಗದರ್ಶಕರಾಗಿದ್ದಾರೆ. ಸಂವಿಧಾನದ ಆಶಯಗಳಿಗೆ ಸರಿಹೊಂದದ ರೀತಿಯಲ್ಲಿರುವ ರಾಜ್ಯಪಾಲರ ಹಸ್ತಕ್ಷೇಪಗಳು ಪ್ರಜಾಪ್ರಭುತ್ವ ಪ್ರಕ್ರಿಯೆಗೆ ಅಡ್ಡಿಯಾಗುತ್ತವೆಯಲ್ಲದೆ ಸಂವಿಧಾನಾತ್ಮಕ ಬಿಕ್ಕಟ್ಟನ್ನು ಉಂಟುಮಾಡುತ್ತವೆ.

'ಕೇಂದ್ರ - ರಾಜ್ಯ ಸಂಬಂಧಗಳಲ್ಲಿನ ಘರ್ಷಣೆಗಳು ಪ್ರಜಾಪ್ರಭುತ್ವಕ್ಕೆ ಸವಾಲಾಗುವುದು ಹೇಗೆ' ಎಂಬ ವಿಷಯದಲ್ಲಿ ಪ್ಯಾನಲ್ ಚರ್ಚೆಯನ್ನು ಏರ್ಪಡಿಸಿರಿ.

## ಭ್ರಷ್ಟಾಚಾರ (Corruption)



ಯಾವುದಾದರೂ ವಿಧದಲ್ಲಿರುವ ಅಧಿಕಾರ ಅಥವಾ ಸ್ಥಾನಮಾನಗಳನ್ನು ಬಳಸಿ ಅನಧಿಕೃತವಾಗಿ ಪ್ರಭಾವ ಬೀರುವುದು ಹಾಗೂ ನಿಯಮಾನುಸಾರವಾಗಿ ಲಭಿಸಬೇಕಾದ ವೇತನಕ್ಕೆ ಹೊರತಾದ ಹಣ ಅಥವಾ ಇತರ ಯಾವುದಾದರೂ ಪ್ರತ್ಯುಪಕಾರವನ್ನು ಸ್ವೀಕರಿಸುವುದನ್ನು ಭ್ರಷ್ಟಾಚಾರವೆಂದು ಪರಿಗಣಿಸಬಹುದು. ಲಂಚ, ಸ್ವಜನಪಕ್ಷಪಾತ, ಅನಧಿಕೃತವಾಗಿ ಸೊತ್ತನ್ನು ಗಳಿಸುವುದು ಮೊದಲಾದವುಗಳು ಭ್ರಷ್ಟಾಚಾರಕ್ಕೆ ಉದಾಹರಣೆಗಳಾಗಿವೆ. ದೇಶದ ಆರ್ಥಿಕ ನಿಕ್ಷೇಪಗಳು, ಆರ್ಥಿಕ ಅಭಿವೃದ್ಧಿ ಮೊದಲಾದವುಗಳನ್ನು ಮತ್ತು ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಭ್ರಷ್ಟಾಚಾರವು ಪ್ರತಿಕೂಲವಾಗಿ ಬಾಧಿಸುತ್ತದೆ. ಜನರಿಗೆ ಲಭಿಸಬೇಕಾದ ಹಕ್ಕುಗಳು, ಕ್ಷೇಮ ಚಟುವಟಿಕೆಗಳು, ಸೌಕರ್ಯಗಳು ಕೆಲವೇ ವ್ಯಕ್ತಿಗಳ ಕೈಯಲ್ಲಿ ಕೇಂದ್ರೀಕೃತವಾಗಲು ಭ್ರಷ್ಟಾಚಾರವು ಕಾರಣವಾಗುತ್ತದೆ. ಇದರಿಂದಾಗಿ ಜನಸಾಮಾನ್ಯರಿಗೆ ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲಿರುವ ವಿಶ್ವಾಸವು ನಷ್ಟವಾಗುತ್ತದೆ. ಭ್ರಷ್ಟಾಚಾರಕ್ಕೆದುರಾಗಿ ಜನ ಜಾಗೃತಿಯನ್ನು ಬೆಳೆಸುವುದು, ಬಲವಾದ ಕಾನೂನು ವ್ಯವಸ್ಥೆಯನ್ನು ರೂಪಿಸುವುದು, ಭ್ರಷ್ಟಾಚಾರ ಅನ್ವೇಷಣಾ ವ್ಯವಸ್ಥೆಗಳನ್ನು ರಾಜಕೀಯ ಪ್ರಭಾವದಿಂದ ಸ್ವತಂತ್ರಗೊಳಿಸುವುದು, ರಾಜಕೀಯ ಪಕ್ಷಗಳ ಆರ್ಥಿಕ ಮೂಲಗಳನ್ನು ಪಾರದರ್ಶಕವಾಗಿಸುವುದು, ಆಡಳಿತ ರಂಗವನ್ನು ಪಾರದರ್ಶಕವಾಗಿಸುವುದು, ಜನರಲ್ಲಿ ಭ್ರಷ್ಟಾಚಾರಕ್ಕೆದುರಾಗಿ ಜಾಗೃತಿಯನ್ನು ಮೂಡಿಸುವುದು ಮೊದಲಾದವುಗಳೆಲ್ಲ ಭ್ರಷ್ಟಾಚಾರವನ್ನು ತಡೆಯುವುದಕ್ಕಿರುವ ದಾರಿಗಳಾಗಿವೆ.

### ಚುನಾವಣಾ ಬಾಂಡ್ (Electoral Bond)



ಮೇಲೆ ನೀಡಿರುವ ವಾರ್ತಾಶೀರ್ಷಿಕೆಗಳನ್ನು ಪರಿಶೀಲಿಸಿದಿರಲ್ಲವೇ. ಇವು ಚುನಾವಣಾ ಬಾಂಡನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸಿದರ ಕುರಿತಾದ ವಾರ್ತೆಗಳಾಗಿವೆ. ಚುನಾವಣಾ ಬಾಂಡ್ ಎಂದರೇನು? ನಾವು ಪರಿಶೀಲಿಸೋಣ.

ಇದು ವ್ಯಕ್ತಿಗಳು ಮತ್ತು ಕಾರ್ಪೊರೇಟರುಗಳು ತಮಗೆ ಇಷ್ಟವಿರುವ ಮೊತ್ತವನ್ನು ಯಾವುದಾದರೂ ರಾಜಕೀಯ ಪಕ್ಷಕ್ಕೆ ಕೊಡುಗೆಯಾಗಿ ನೀಡಲು ಆವಿಷ್ಕರಿಸಿದ ಯೋಜನೆಯಾಗಿದೆ. 2017-18ರ ಕೇಂದ್ರ ಮುಂಗಡಪತ್ರದ ಮೂಲಕ ಚುನಾವಣಾ ಬಾಂಡನ್ನು ಮಂಡಿಸಲಾಯಿತು. ಇತ್ತೀಚೆಗಿನ ರಾಜ್ಯ ವಿಧಾನಸಭಾ, ಲೋಕಸಭಾ ಚುನಾವಣೆಗಳಲ್ಲಿ ಚಲಾಯಿಸಲ್ಪಟ್ಟ ಒಟ್ಟು ಮತದ ಒಂದು ಶೇಕಡಾಕ್ಕೆ ಕಡಿಮೆಯಾಗದಷ್ಟು ಮತವನ್ನು ಗಳಿಸಿದ ಹಾಗೂ ಚುನಾವಣಾ ಆಯೋಗದಲ್ಲಿ ನೋಂದಾಯಿಸಲ್ಪಟ್ಟ ಎಲ್ಲಾ ಪಕ್ಷಗಳಿಗೂ ಈ ಬಾಂಡಿನ ಮೂಲಕ ಹಣವನ್ನು ಸ್ವೀಕರಿಸಬಹುದು. ಸಾವಿರ ರೂಪಾಯಿಂದ ಒಂದು ಕೋಟಿ ರೂಪಾಯಿಯವರೆಗೆ ಸಂಸ್ಥೆಗಳಿಗೆ ಅಥವಾ ವ್ಯಕ್ತಿಗಳಿಗೆ ಅವರಿಗೆ ಇಷ್ಟವಿರುವ ಮೊತ್ತಕ್ಕೆ ಎಸ್.ಬಿ.ಐ. ಮೂಲಕ ಬಾಂಡ್ ಪಡೆದುಕೊಳ್ಳಬಹುದು. ಕೊಡುಗೆ ಎಂಬ ವಿಭಾಗದಲ್ಲಿ ಬರುವುದರಿಂದ ಈ ಮೊತ್ತಕ್ಕೆ ತೆರಿಗೆ ವಿನಾಯಿತಿ ಲಭಿಸುತ್ತದೆ. ದಾನಿಗಳಿಂದ ಲಭಿಸುವ ಬಾಂಡುಗಳನ್ನು ರಾಜಕೀಯ ಪಕ್ಷಗಳು 15 ದಿವಸಗಳೊಳಗೆ ಹಣವಾಗಿ ಬದಲಾಯಿಸಿಕೊಳ್ಳಬೇಕು.

ಬಾಂಡುಗಳ ಪಾರದರ್ಶಕತೆ ಹಾಗೂ ಕಾನೂನು ಸಿಂಧುತ್ವವನ್ನು ಪರಿಶೀಲಿಸಿ 2024 ಫೆಬ್ರವರಿ 15ರಂದು ಸುಪ್ರೀಂಕೋರ್ಟು ಚುನಾವಣಾ ಬಾಂಡ್‌ನ್ನು ರದ್ದುಗೊಳಿಸಿತು. ಚುನಾವಣಾ ಬಾಂಡ್ ಮೂಲಭೂತ ಹಕ್ಕುಗಳಿಗೆ ವಿರುದ್ಧವಾದುದೆಂಬುದಾಗಿ ಸುಪ್ರೀಂ ಕೋರ್ಟ್ ತೀರ್ಪಿತ್ತಿತು.

ಚುನಾವಣಾ ಬಾಂಡ್ ಭ್ರಷ್ಟಾಚಾರಕ್ಕೆ ಹೇಗೆ ಕಾರಣವಾಗುತ್ತದೆ ಎಂಬ ವಿಷಯದಲ್ಲಿ ಸುಪ್ರೀಂ ಕೋರ್ಟಿನ ತೀರ್ಪುಗಳ ಹಾಗೂ ಪತ್ರಿಕಾ ವಾರ್ತೆಗಳ ಆಧಾರದಲ್ಲಿ ಒಂದು ಟಿಪ್ಪಣಿ ತಯಾರಿಸಿರಿ.

## ರಾಜಕೀಯದ ಅಪರಾಧೀಕರಣ (Criminalism of Politics)

ರಾಜಕೀಯ ಅಪರಾಧೀಕರಣವು ಪ್ರಜಾಪ್ರಭುತ್ವವು ಎದುರಿಸುತ್ತಿರುವ ಇನ್ನೊಂದು ಪ್ರಮುಖ ಸಮಸ್ಯೆಯಾಗಿದೆ. ರಾಜಕೀಯ ಪಕ್ಷಗಳ ನಾಯಕರು ಅಥವಾ ಕಾರ್ಯಕರ್ತರು ಅಪರಾಧ ಚಟುವಟಿಕೆಗಳಲ್ಲಿ ಭಾಗಿಗಳಾಗುವುದು ಮತ್ತು ಅಪರಾಧ ಚಟುವಟಿಕೆಗಳನ್ನು ಪ್ರೋತ್ಸಾಹಿಸುವ ಮನೋಭಾವವನ್ನು ರಾಜಕೀಯ ಅಪರಾಧೀಕರಣ ಎನ್ನುತ್ತಾರೆ ಮಾತ್ರವಲ್ಲದೆ ಅಪರಾಧಗಳಲ್ಲಿ ಭಾಗಿಯಾಗಿರುವವರು ರಾಜಕೀಯದಲ್ಲಿ ಹಸ್ತಕ್ಷೇಪ ನಡೆಸುವುದು ರಾಜಕೀಯದ ಅಪರಾಧೀಕರಣವಾಗುತ್ತದೆ. ಜನರನ್ನು ಬೆದರಿಸಿ ಯಾವುದಾದರೂ ಪಕ್ಷಕ್ಕೆ ಅನುಕೂಲವಾಗುವಂತೆ ಮತದಾನ ಮಾಡಲು ಪ್ರೋತ್ಸಾಹಿಸುವುದು ಅಥವಾ ಅದಕ್ಕೆ ಇರುವ ಸನ್ನಿವೇಶವನ್ನು ಸೃಷ್ಟಿಸುವುದು ಪ್ರಜಾಪ್ರಭುತ್ವದ ಅಪಮೌಲ್ಯೀಕರಣಕ್ಕೆ ಕಾರಣವಾಗುತ್ತದೆ. ಅಪರಾಧ ಹಿನ್ನೆಲೆಯುಳ್ಳವರು ರಾಜಕೀಯ ಪಕ್ಷಗಳ ನಾಯಕರಾಗುವುದು ಹಾಗೂ ಆಡಳಿತಗಾರರಾಗುವುದು ಪೌರರಿಗೆ ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲಿನ ನಂಬಿಕೆಯನ್ನು ನಾಶಮಾಡುತ್ತದೆ. ಅಪರಾಧ ಕೃತ್ಯಗಳಲ್ಲಿ ವಿಚಾರಣೆಯನ್ನು ಎದುರಿಸುತ್ತಿರುವವರು ಹಾಗೂ ಶಿಕ್ಷಿಸಲ್ಪಟ್ಟವರು ಚುನಾವಣೆಗಳಲ್ಲಿ ಸ್ಪರ್ಧಿಸದಂತೆ ನಿಷೇಧಿಸಿರುವ ಚುನಾವಣಾ ಸುಧಾರಣೆಗಳು, ಬಲವಾದ ಕಾನೂನು ವ್ಯವಸ್ಥೆ, ರಾಜಕೀಯ ರಂಗದ ಅಪರಾಧಿಕರಣಕ್ಕೆದುರಾದ ಅರಿವು ಮೂಡಿಸುವಿಕೆ ಮೊದಲಾದವುಗಳು ರಾಜಕೀಯ ಅಪರಾಧಿಕರಣದ ನಿವಾರಣೆಗಿರುವ ಮಾರ್ಗಗಳಾಗಿವೆ.

## ಪಕ್ಷಾಂತರ (Defection)

ಪಕ್ಷಾಂತರವು 1967ರ ಚುನಾವಣೆಯ ನಂತರ ಭಾರತೀಯ ರಾಜಕೀಯದಲ್ಲಿ ರೂಪುಗೊಂಡ ಮತ್ತೊಂದು ಒಲವಾಗಿದೆ. ಒಂದು ಪಕ್ಷದ ಅಭ್ಯರ್ಥಿಯಾಗಿ ಚುನಾವಣೆಯಲ್ಲಿ ಸ್ಪರ್ಧಿಸಿ ಆಯ್ಕೆಯಾದ ಜನಪ್ರತಿನಿಧಿಯು ಸ್ವಂತ ಪಕ್ಷವನ್ನು ಉಪೇಕ್ಷಿಸುವುದು ಅಥವಾ ಬೇರೊಂದು ಪಕ್ಷವನ್ನು ಸೇರುವುದನ್ನು ಪಕ್ಷಾಂತರವೆನ್ನುವರು. ಚುನಾವಣಾ ಸಮಯದಲ್ಲಿ ಮತದಾರರು ಜನಪ್ರತಿನಿಧಿಗಳಲ್ಲಿ ಹೊಂದಿದ್ದ ವಿಶ್ವಾಸವನ್ನು ವಂಚಿಸುವ ಸನ್ನಿವೇಶವು ಇಲ್ಲಿ ಉಂಟಾಗುತ್ತದೆ. ಇದು ಆಗಾಗ ಆಡಳಿತ ಬಿಕ್ಕಟ್ಟನ್ನು ಉಂಟುಮಾಡುವುದಲ್ಲದೆ ಪ್ರಜಾಪ್ರಭುತ್ವಕ್ಕೆ ಸವಾಲನ್ನೂ ಒಡ್ಡುತ್ತದೆ. ಅನಂತರ ಪಕ್ಷಾಂತರವನ್ನು ತಡೆಯುವುದಕ್ಕಾಗಿ 1985ರಲ್ಲಿ ಸಂವಿಧಾನದ 52ನೇ ತಿದ್ದುಪಡಿಯ ಮೂಲಕ ಪಕ್ಷಾಂತರ ನಿಷೇಧ ಕಾಯ್ದೆಯನ್ನು ಸಂಸತ್ತು ಅಂಗೀಕರಿಸಿತು.

ಸದಸ್ಯರ ಪಕ್ಷಾಂತರವನ್ನು ತಡೆಯಲು ರಾಜಕೀಯ ಪಕ್ಷಗಳು ವಿಭಿನ್ನ ತಂತ್ರಗಳನ್ನು ಸ್ವೀಕರಿಸುವುದಿದೆ. ಪಕ್ಷದ ಒಬ್ಬ ವಿಶ್ವಾಸಾರ್ಹನಾದ ಸದಸ್ಯನ ನೇತೃತ್ವದಲ್ಲಿ ಒಂದು ಪ್ರತ್ಯೇಕ ವೇದಿಕೆಯಲ್ಲಿ ಸದಸ್ಯರು ಒಟ್ಟುಗೂಡಿ ಇತರ ರಾಜಕೀಯ ಪಕ್ಷಗಳ ಪ್ರಭಾವವನ್ನು ತಡೆಯಲು ಯೋಜನೆಗಳನ್ನು ರೂಪಿಸುತ್ತವೆ. ಈ ಪ್ರಕ್ರಿಯೆಯನ್ನು ರೆಸೋರ್ಟ್ ರಾಜಕೀಯ ಎಂದು ಬಣ್ಣಿಸುವುದಿದೆ. 1982 ರಲ್ಲಿ ಹರಿಯಾಣದಲ್ಲಿ ಇದರ ಚರಿತ್ರೆಯು ಆರಂಭವಾಯಿತು. ಅನಂತರ ಕರ್ನಾಟಕ, ಆಂಧ್ರಪ್ರದೇಶ, ಗುಜರಾತ್, ಉತ್ತರಪ್ರದೇಶ, ಬಿಹಾರ, ಮಹಾರಾಷ್ಟ್ರ, ಉತ್ತರಾಖಂಡ್, ತಮಿಳುನಾಡು ಮೊದಲಾದ ಪ್ರಾಂತ್ಯಗಳಲ್ಲಿಯೂ ಈ ವಿದ್ಯಮಾನವು ಕಂಡುಬಂದಿದೆ..

‘ರಾಜಕೀಯ ಅಪರಾಧೀಕರಣ ಹಾಗೂ ಪಕ್ಷಾಂತರವು ಭಾರತೀಯ ಪ್ರಜಾಪ್ರಭುತ್ವದೊಂದಿಗೆ ಇರುವ ಸವಾಲಾಗಿದೆ’ ಭಾರತದ ಚುನಾವಣಾ ಆಯೋಗವು ಈ ವಿಷಯದಲ್ಲಿ ಕೈಗೊಂಡ ನಿಲುವುಗಳು ಹಾಗೂ ಕಾರ್ಯವಿಧಾನಗಳ ಆಧಾರದಲ್ಲಿ ಟಿಪ್ಪಣಿ ತಯಾರಿಸಿರಿ.

ಸ್ವಾತಂತ್ರ್ಯಾನಂತರ ದೇಶವು ಎದುರಿಸಿದ ಅನೇಕ ಬಿಕ್ಕಟ್ಟುಗಳನ್ನು ಪ್ರಜಾಸತ್ತಾತ್ಮಕ ಮಾರ್ಗಗಳ ಮೂಲಕ ನಿವಾರಿಸಲು ನಮಗೆ ಸಾಧ್ಯವಾಗಿದೆ. ಇದು ನಮ್ಮ ಪ್ರಜಾಪ್ರಭುತ್ವದ ಸಾಮರ್ಥ್ಯವನ್ನು ಪ್ರದರ್ಶಿಸುತ್ತದೆ. ಕಾಲಕ್ಕನುಗುಣವಾದ ಬದಲಾವಣೆಗಳನ್ನು ಒಳಪಡಿಸಿಕೊಳ್ಳಲು ಸಾಧ್ಯವಾಗುವಂತಹ ಒಂದು ಸಕ್ರಿಯ ಸಂವಿಧಾನವು ನಮಗಿದೆ. ಸಂವಿಧಾನದ ಮೌಲ್ಯಗಳೊಂದಿಗಿರುವ ಗೌರವ, ವಿಧೇಯತೆಯು ನಮ್ಮ ಪ್ರಜಾಪ್ರಭುತ್ವವನ್ನು ಅರ್ಥವತ್ತಾಗಿಸುತ್ತದೆ.

## ಮುಂದುವರಿದ ಚಟುವಟಿಕೆಗಳು

- ಪ್ರಜಾಪ್ರಭುತ್ವವು ಒಂದು ಜೀವನ ವಿಧಾನ ಎಂಬ ದೃಷ್ಟಿಯಲ್ಲಿ ನಮ್ಮ ಸಮಾಜದಲ್ಲಿ ಇಂದು ಎಷ್ಟರಮಟ್ಟಿಗೆ ಪ್ರಕಟವಾಗುತ್ತದೆ ಎಂಬ ವಿಷಯದಲ್ಲಿ ಒಂದು ವಿಚಾರಗೋಷ್ಠಿಯನ್ನು ಏರ್ಪಡಿಸಿರಿ.
- ಭಾರತದ ರಾಷ್ಟ್ರಪತಿಗಳು ಹಾಗೂ ಪ್ರಧಾನಮಂತ್ರಿಗಳ ಡಿಜಿಟಲ್ ಪ್ರೊಫೈಲ್ ಆಲ್ಬಂ ತಯಾರಿಸಿರಿ.
- ಪರಿಸರ ಪ್ರಜ್ಞೆಯ ಅವಶ್ಯಕತೆಯನ್ನು ಹೊಂದಿಟ್ಟುಕೊಂಡು ಪರಿಸರವಾದಿಗಳೊಂದಿಗೆ ಸಂದರ್ಶನವನ್ನು ಏರ್ಪಡಿಸಿರಿ.

# 9
# ಭಾರತದ ಸಾಮಾಜಿಕ ವ್ಯವಸ್ಥೆಯನ್ನು ತಿಳಿಯೋಣ




ಚಿತ್ರ 1





ಚಿತ್ರ 2

ಮೇಲಿನ ಚಿತ್ರಗಳನ್ನು ಗಮನಿಸಿರಿ.

ಚಿತ್ರ 1 ರಲ್ಲಿ ಕೆಲವು ಸಾಮಾಜಿಕ ಸಂಸ್ಥೆಗಳನ್ನು ಗಮನಿಸಿದಿರಲ್ಲವೇ.

ಅವು ಯಾವುವು?

ಚಿತ್ರ 2 ರಲ್ಲಿ ನೀವೇನನ್ನು ಕಾಣುವಿರಿ?

ನಾವು ಜೀವಿಸುವ ಸಮಾಜವನ್ನು ನಮ್ಮ ಶರೀರ ರಚನೆಯೊಂದಿಗೆ ಹೋಲಿಸೋಣ.

ನಮ್ಮ ಶರೀರವು ಒಂದು ಸಂಕೀರ್ಣವಾದ ಯಂತ್ರದಂತಿದೆ. ಅದು ನಮ್ಮನ್ನು ಜೀವಂತವಾಗಿಡಲು ಯಾವಾಗಲೂ ಅನೇಕ ಚಟುವಟಿಕೆಗಳನ್ನು ಮಾಡುತ್ತಲೇ ಇರುತ್ತದೆ. ಎಲ್ಲಾ ಜೀವಿಗಳಲ್ಲೂ ಅವುಗಳ ಶಾರೀರಿಕ ವಿಶೇಷತೆಗಳಿಗೆ ಅನುಗುಣವಾಗಿ ಶಾಶ್ವತವಾಗಿ ಕ್ರಮೀಕರಿಸಿದ ಒಂದು ಜೈವಿಕ ರಚನೆಯಿದೆ (Organic Structure). ಈ ಜೈವಿಕ ರಚನೆಯಲ್ಲಿ ಪ್ರತಿಯೊಂದು ಅಂಗಾಂಗಳಿಗೂ ತನ್ನದೇ ಆದ ಕರ್ತವ್ಯಗಳಿವೆ. ಈ ಕರ್ತವ್ಯಗಳಿಗನುಸಾರವಾಗಿ ಶರೀರದ ಅಂಗಗಳು ಪರಸ್ಪರ ಸಂಬಂಧವನ್ನು ಹೊಂದಿವೆ. ಜೈವಿಕ ರಚನೆಯ ವಿವಿಧ ಅಂಗಗಳ ನಡುವಿನ ಹೊಂದಾಣಿಕೆಗನುಸಾರವಾಗಿ ಆ ರಚನೆಯು ಸಕ್ರಿಯಗೊಳ್ಳುತ್ತದೆ. ಈ ಹಂತವನ್ನು ಜೈವಿಕ ವ್ಯವಸ್ಥೆ (Organic System). ಎನ್ನುತ್ತಾರೆ. ವ್ಯವಸ್ಥೆ ಎಂಬ ಪದವು ವಿವಿಧ ಅಂಗಗಳ ವ್ಯವಸ್ಥಿತ ಕ್ರಮೀಕರಣವನ್ನು ಸೂಚಿಸುತ್ತದೆ. ರಕ್ತಪರಿಚಲನಾ ವ್ಯವಸ್ಥೆ, ಉಸಿರಾಟ ವ್ಯವಸ್ಥೆ ಮುಂತಾದ ಪ್ರತಿಯೊಂದು ಶರೀರ ವ್ಯವಸ್ಥೆಯು ಪರಸ್ಪರ ಹೊಂದಾಣಿಕೆಯಿಂದ ಕೆಲಸ ನಿರ್ವಹಿಸುತ್ತವೆಯಲ್ಲದೆ ಶಾರೀರಿಕ ಚಟುವಟಿಕೆಗಳನ್ನೂ ಸಮತೋಲನಗೊಳಿಸುತ್ತವೆ.

ಈ ರೀತಿಯಲ್ಲಿ ಸಮಾಜದಲ್ಲಿನ ವಿಭಿನ್ನ ಸಾಮಾಜಿಕ ಸಂಸ್ಥೆಗಳು ಮತ್ತು ಘಟಕಗಳು (Parts) ಸಮಾಜದ ಸ್ಥಿರತೆ, ಬೆಳವಣಿಗೆ ಮತ್ತು ಕ್ರಮವನ್ನು ಅಸ್ತಿತ್ವದಲ್ಲಿರಿಸಲು ಒಟ್ಟಾಗಿ ಕಾರ್ಯನಿರ್ವಹಿಸುವುದನ್ನು ನೀವು ಗಮನಿಸಿರುವಿರಾ?

ಸಮಾಜದ ಸ್ಥಿರತೆ, ಬೆಳವಣಿಗೆ ಮತ್ತು ಕ್ರಮಗಳನ್ನು ಕಾಪಾಡಲು ಸಮಾಜದ ವಿವಿಧ ಘಟಕಗಳು (Parts) ಸಮನ್ವಯದಿಂದ ಕಾರ್ಯನಿರ್ವಹಿಸುತ್ತವೆ. ಶಿಕ್ಷಣ, ಸಾರಿಗೆ, ಆಶಯ ವಿನಿಮಯ, ಮಾಧ್ಯಮಗಳು, ಕಾನೂನು, ನ್ಯಾಯಾಂಗ ವ್ಯವಸ್ಥೆ, ಆರೋಗ್ಯ ರಕ್ಷಣಾ ವ್ಯವಸ್ಥೆಗಳು, ಧಾರ್ಮಿಕ–ಸಾಂಸ್ಕೃತಿಕ ಸಂಸ್ಥೆಗಳು, ಸರಕಾರ ಮೊದಲಾದ ಸಮಾಜದ ಪ್ರತಿಯೊಂದು ಘಟಕವೂ ಪರಸ್ಪರ ಹೊಂದಾಣಿಕೆಯಿಂದ ಸಮನ್ವಯದಿಂದ ಕಾರ್ಯನಿರ್ವಹಿಸುವಾಗ ಒಂದು ಸಾಮಾಜಿಕ ವ್ಯವಸ್ಥೆಯು (Social System) ರೂಪುಗೊಳ್ಳುತ್ತದೆ.



ಹರ್ಬರ್ಟ್ ಸ್ಪೆನ್ಸರ್

ಹರ್ಬರ್ಟ್ ಸ್ಪೆನ್ಸರ್ ಸಮಾಜವನ್ನು ಜೈವ ವ್ಯವಸ್ಥೆಯೊಂದಿಗೆ ಹೋಲಿಸಿದ ಸಮಾಜ ಶಾಸ್ತ್ರಜ್ಞನಾಗಿದ್ದಾನೆ. ಮಾನವ ಶರೀರದ ವ್ಯವಸ್ಥೆ ಮತ್ತು ಸಾಮಾಜಿಕ ವ್ಯವಸ್ಥೆಗಳೊಳಗಿನ ಸಾಮ್ಯಗಳನ್ನು ಮಂಡಿಸುವ ಮೂಲಕ, ಸಮಾಜವು ಒಂದು ಸಾಮಾಜಿಕ ಜೀವಿಯಾಗಿದೆ (Social Organism) ಎಂಬ ಆಶಯವನ್ನು ಅವನು ಮುಂದಿರಿಸಿದನು.

ಮಾನವ ಶರೀರದಲ್ಲಿನ ಅವಯವಗಳು ಪರಸ್ಪರ ಬಂಧಿತವಾಗಿ ಮತ್ತು ಪೂರಕವಾಗಿ ಕೆಲಸ ನಿರ್ವಹಿಸುತ್ತವೆ. ಅಂತೆಯೇ ಸಮಾಜದ ವಿವಿಧ ಘಟಕಗಳಾದ ಕುಟುಂಬ, ವಿದ್ಯಾಭ್ಯಾಸ, ಆರ್ಥಿಕತೆ, ಧರ್ಮ, ಸರಕಾರ ಮೊದಲಾದ ಸಾಮಾಜಿಕ ಸಂಸ್ಥೆಗಳು, ಸಮಾಜದ ಸ್ಥಿರತೆ, ಬೆಳವಣಿಗೆ ಮತ್ತು ಕ್ರಮವನ್ನು ಅಸ್ತಿತ್ವದಲ್ಲಿರಿಸಲು ಹೇಗೆ ಪರಸ್ಪರ ಪೂರಕವಾಗಿ ಕೆಲಸ ನಿರ್ವಹಿಸುತ್ತವೆಯೆಂದು ಅರ್ಥೈಸಲು ಹರ್ಬರ್ಟ್ ಸ್ಪೆನ್ಸರ್‌ನ ಆಶಯಗಳು ನಮಗೆ ಸಹಾಯಕಾರಿಯಾಗಿವೆ.

ವಿದ್ಯಾಲಯ ಮತ್ತು ಅದರ ವಿವಿಧ ಘಟಕಗಳನ್ನು ಸೂಚಿಸಿರುವ ಕೆಳಗಿನ ಚಿತ್ರವನ್ನು ಗಮನಿಸಿರಿ.




ವಿದ್ಯಾಲಯದ ವಿವಿಧ ಘಟಕಗಳು ಯಾವುವು?

ಅವುಗಳ ಕರ್ತವ್ಯಗಳು ಯಾವುವು?

ಇವುಗಳು ಪರಸ್ಪರ ಸಂಬಂಧಿತ ಮತ್ತು ಪೂರಕವಾಗಿವೆಯೆ?

ಇವೆಲ್ಲವೂ ಸಮನ್ವಯದಿಂದ ಕೆಲಸ ನಿರ್ವಹಿಸದಿದ್ದರೆ ಏನು ಸಂಭವಿಸಬಹುದು?

ಹೀಗೆ ಪ್ರತಿಯೊಂದು ಸಾಮಾಜಿಕ ಸಂಸ್ಥೆಗಳಿಗೂ ವಿವಿಧ ಘಟಕಗಳು ಮತ್ತು ಅವುಗಳದ್ದೇ ಆದ ಜವಾಬ್ದಾರಿಗಳಿವೆ. ಅವೆಲ್ಲವೂ ಪರಸ್ಪರ ಸಂಬಂಧಿತವೂ ಪೂರಕವೂ ಆಗಿರುತ್ತವೆ.

ನಿಮ್ಮ ಸಮೀಪ ಪ್ರದೇಶದಲ್ಲಿರುವ ಒಂದು ಆರ್ಥಿಕ ಸಂಸ್ಥೆ ಮತ್ತು ಅದರ ವಿವಿಧ ಘಟಕಗಳ ಕುರಿತು ಆಲೋಚಿಸಿರಿ. ಆ ಸಂಸ್ಥೆಯ ಚಟುವಟಿಕೆಗಳನ್ನು ಮುನ್ನಡೆಸಲು ಯಾವೆಲ್ಲಾ ಘಟಕಗಳ ಸಮನ್ವಯವು ಅಗತ್ಯವಾಗಿದೆ?

ಮಾನವರು ಸಾಮಾಜಿಕ ಜೀವಿಗಳಲ್ಲವೇ.

ಮಿಥುನ್ ಎಂಬ ವ್ಯಕ್ತಿಯ ಒಂದು ದಿನವನ್ನು ನಾವು ಗಮನಿಸೋಣ.



- ಮಿಥುನ್ ಬೆಳಿಗ್ಗೆ ತನ್ನ ತಂದೆಯ ಕರೆ ಕೇಳಿ ಎಚ್ಚರಗೊಳ್ಳುತ್ತಾನೆ.
- ನೌಕರನಾದ ಮಿಥುನ್ ಉದ್ಯೋಗಕ್ಕೆ ತೆರಳಲು ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಬಳಸುತ್ತಾನೆ.
- ಮಧ್ಯಾಹ್ನದ ಊಟದ ಸಮಯದಲ್ಲಿ ಸಮಕಾಲೀನ ರಾಜಕೀಯ ವಿಷಯಗಳನ್ನು ಮತ್ತು ಚುನಾವಣೆಗಳ ಕುರಿತು ಸಹೋದ್ಯೋಗಿಗಳೊಂದಿಗೆ ಚರ್ಚಿಸುತ್ತಾನೆ.
- ಹಣಕಾಸಿನ ವಹಿವಾಟಿಗಾಗಿ ಕಚೇರಿಯ ಬಳಿಯಿರುವ ಬ್ಯಾಂಕಿಗೆ ಹೋಗುತ್ತಾನೆ.
- ಮಿಥುನ್ ಊರಿನ ಜಾತ್ರೆಗಳಲ್ಲಿ, ಆಚರಣೆಗಳಲ್ಲಿ ಮತ್ತು ಇತರ ಮನೋರಂಜನಾ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾನೆ.
- ಸಾಮಾಜಿಕ ಮಾಧ್ಯಮಗಳ ಮೂಲಕ ತನ್ನ ಶಾಲಾ ಹಂತದಿಂದಿರುವ ಸಹಪಾಠಿಗಳೊಂದಿಗೆ ಗೆಳೆತನವನ್ನು ಕಾಪಾಡಲು ಸಮಯವನ್ನು ಕಂಡುಕೊಳ್ಳುತ್ತಾನೆ.
- ತನ್ನ ಶಿಕ್ಷಣವನ್ನು ಮುಂದುವರಿಸುವುದಕ್ಕಾಗಿ ರಾತ್ರಿ ಕಾಲದ ಆನ್ ಲೈನ್ ತರಗತಿಗಳಲ್ಲಿ ಭಾಗವಹಿಸುತ್ತಾನೆ.

ಮಿಥುನ್‌ನ ಜೀವನದ ಒಂದು ದಿನವನ್ನು ಪರಿಚಯಿಸಿಕೊಂಡಿರಲ್ಲವೇ. ಅವನು ಯಾವೆಲ್ಲಾ ಸಾಮಾಜಿಕ ಸಂಸ್ಥೆಗಳೊಂದಿಗೆ ಸಂವಹನ (Interaction) ದಲ್ಲಿ ನಡೆಸುತ್ತಾನೆ?

- 
- 
- 
- 
- 
- 
- 

ನೀವು ಒಂದು ದಿನದಲ್ಲಿ ಸಂವಹನ ನಡೆಸುವ ಸಾಮಾಜಿಕ ಸಂಸ್ಥೆಗಳು ಯಾವುವೆಂದು ಬರೆಯಿರಿ.

ಸಾಮಾಜಿಕ ಅಸ್ತಿತ್ವಕ್ಕಾಗಿ ಪರಸ್ಪರ ಪೂರಕವಾಗಿ ಕೆಲಸ ನಿರ್ವಹಿಸುವ ವಿವಿಧ ಸಾಮಾಜಿಕ ಸಂಸ್ಥೆಗಳು ಒಟ್ಟು ಸೇರಿದುದೇ ಸಮಾಜ (Society)ವಾಗಿದೆ. ಸಾಮಾಜಿಕ

ಸಂಸ್ಥೆಗಳು ಸಮಾಜದಲ್ಲಿನ ವ್ಯಕ್ತಿಗಳ ಮತ್ತು ಸಂಘಟನೆಗಳ ನಡವಳಿಕೆ ಹಾಗೂ ಚಟುವಟಿಕೆಗಳನ್ನು ನಿಯಂತ್ರಿಸುತ್ತವೆ. ವಿವಿಧ ಸಾಮಾಜಿಕ ಸಂಸ್ಥೆಗಳನ್ನು ಪರಸ್ಪರ ಜೋಡಿಸುವ ಮೂಲಕ ಸಮಾಜದಲ್ಲಿನ ಸಂಬಂಧಗಳಿಗೆ ಮತ್ತು ಹಸ್ತಕ್ಷೇಪಗಳಿಗೆ ಒಂದು ಕ್ರಮವನ್ನುಂಟುಮಾಡುವ ವ್ಯವಸ್ಥೆಯನ್ನು ಸಾಮಾಜಿಕ ವ್ಯವಸ್ಥೆ (Social System) ಎನ್ನುತ್ತಾರೆ. ಸಾಮಾಜಿಕ ಸಂವಹನಗಳ ಶಿಸ್ತುಬದ್ಧವಾದ ಕ್ರಮೀಕರಣವಾಗಿ ಸಾಮಾಜಿಕ ವ್ಯವಸ್ಥೆಯನ್ನು ಪರಿಗಣಿಸಬಹುದಾಗಿದೆ.

## ಭಾರತದ ಸಾಮಾಜಿಕ ವ್ಯವಸ್ಥೆ (Indian Social System)

ನಮ್ಮ ದೇಶವು ವೈವಿಧ್ಯಗಳಿಂದೊಡಗೂಡಿದ ನಾಡಾಗಿದೆ. ವಿಭಿನ್ನ ಸಮಾಜಗಳು ಮತ್ತು ಸಂಸ್ಕೃತಿಗಳು ಸೇರಿ ಭಾರತದ ಸಮಾಜವು ರೂಪುಗೊಂಡಿದೆ. ಜಿ.ಎಸ್. ಘುರ್ಯೆ ಭಾರತದ ಆರಂಭಿಕ ಸಮಾಜಶಾಸ್ತ್ರಜ್ಞರಲ್ಲಿ ಪ್ರಮುಖರಾಗಿದ್ದಾರೆ. ಭಾರತದ ಸಾಮಾಜಿಕ ವ್ಯವಸ್ಥೆಯ ಕುರಿತಾದ ಅವರ ನಿರೀಕ್ಷಣೆಯನ್ನು ಓದಿರಿ.


ಜಿ.ಎಸ್. ಘುರ್ಯೆ

ಭಾರತೀಯ ಸಾಮಾಜಿಕ ವ್ಯವಸ್ಥೆಯು ವೈವಿಧ್ಯ ಮತ್ತು ನಿರಂತರತೆಯ ವಿಶೇಷ ಸಮ್ಮಿಶ್ರಣದಿಂದ ಗುರುತಿಸಲ್ಪಟ್ಟಿದೆ. ಜಾತಿ ವ್ಯವಸ್ಥೆಯು ಅದರ ಪ್ರಧಾನ ವಿಶೇಷತೆಯಾಗಿದೆ. ಭಾರತದ ಸಾಮಾಜಿಕ ವ್ಯವಸ್ಥೆಯು ಪ್ರಾದೇಶಿಕ, ಭಾಷಿಕ ಮತ್ತು ಧಾರ್ಮಿಕ ವೈವಿಧ್ಯದಿಂದ ಸಮೃದ್ಧವಾಗಿದೆ. ಇದು ಭಾರತೀಯ ಸಮಾಜವನ್ನು ವ್ಯಾಖ್ಯಾನಿಸುವ ಸಾಂಸ್ಕೃತಿಕ ವಿಶೇಷತೆಯಾಗಿದೆ.

*Source*: G.S. Ghurye, *Caste and Race in India*

ಜಿ.ಎಸ್. ಘುರ್ಯೆಯವರು ಪ್ರತಿಪಾದಿಸಿದ ಭಾರತದ ಸಾಮಾಜಿಕ ವ್ಯವಸ್ಥೆಯ ವಿಶೇಷತೆಗಳೇನು?

ಐತಿಹಾಸಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಪ್ರಭಾವದಿಂದ ಉಂಟಾದ ಒಂದು ಸಂಕೀರ್ಣವಾದ ರಚನೆಯನ್ನು ಭಾರತದ ಸಾಮಾಜಿಕ ವ್ಯವಸ್ಥೆಯು ಹೊಂದಿದೆ. ಭಾರತವು ವಿವಿಧ ಜಾತಿ, ಧರ್ಮ, ಭಾಷೆ, ಗೋತ್ರ ಮತ್ತು ಸಂಸ್ಕೃತಿಗಳನ್ನು ಹೊಂದಿರುವ ಜನರು ವಾಸಿಸುವ ಒಂದು ವೈವಿಧ್ಯಗಳ ನಾಡಾಗಿದೆ. ಈ ವೈವಿಧ್ಯವು ವಿಶಿಷ್ಟವಾದ ಭಾರತದ ಸಾಮಾಜಿಕ ವ್ಯವಸ್ಥೆಯ ಬೆನ್ನೆಲುಬಾಗಿದೆ. ಭಾರತೀಯ ಸಾಮಾಜಿಕ ವ್ಯವಸ್ಥೆಯು ಸಾವಿರಾರು ವರ್ಷಗಳಿಂದ ಸಾಮಾಜಿಕವಾಗಿ ವಿಕಾಸಗೊಂಡು ರೂಪುಗೊಂಡಿದೆ. ಅದು ದೇಶದ ಇತಿಹಾಸ, ಮೌಲ್ಯಗಳು, ಪರಂಪರೆ ಮೊದಲಾದವುಗಳನ್ನು ಪ್ರತಿಫಲಿಸುತ್ತದೆ. ಭಾರತದ ಸಾಮಾಜಿಕ ವ್ಯವಸ್ಥೆಯ ಕೆಲವು ವಿಶೇಷತೆಗಳನ್ನು ನಾವು ಪರಿಶೀಲಿಸೋಣ.




## I. ಜಾತಿ ವ್ಯವಸ್ಥೆ (Caste System)

ಜಾತಿಯು ಭಾರತದ ಸಾಮಾಜಿಕ ಜೀವನದ ಅತ್ಯಂತ ವಿಶೇಷವಾದ ವ್ಯವಸ್ಥೆಯಾಗಿದೆ. ಇದೊಂದು ಕೇವಲ ಸಾಮಾಜಿಕ ಶ್ರೇಣೀಕರಣ ಮಾತ್ರವಲ್ಲ, ಬದಲಾಗಿ ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆಗಳಲ್ಲಿ ಆಳವಾಗಿ ಬೇರೂರಿದ ಜೀವನ ವಿಧಾನವಾಗಿದೆ.

*Source:* M.N. Srinivas, *Caste in Modern India: And Other Essays,*


ಎಂ.ಎನ್. ಶ್ರೀನಿವಾಸ್

ಎಂ.ಎನ್. ಶ್ರೀನಿವಾಸ್ ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿರುವ ಜಾತಿ ವ್ಯವಸ್ಥೆಯ ಕುರಿತಾಗಿ ಒಳನೋಟಗಳನ್ನು ಒದಗಿಸುವ ಅನೇಕ ಅಧ್ಯಯನಗಳನ್ನು ನಡೆಸಿದ ಒಬ್ಬ ಭಾರತೀಯ ಸಮಾಜಶಾಸ್ತ್ರಜ್ಞರಾಗಿದ್ದಾರೆ. ಭಾರತೀಯ ಸಮಾಜದ ವಿಶೇಷತೆಯಾಗಿರುವ ಜಾತಿ ವ್ಯವಸ್ಥೆಯಲ್ಲಿ ಜನರನ್ನು ಜಾತಿಯ ಆಧಾರದಲ್ಲಿ ವಿವಿಧ ಶ್ರೇಣಿಗಳಾಗಿ ವಿಂಗಡಿಸಲಾಗಿತ್ತು. ಜಾತಿ ವ್ಯವಸ್ಥೆಯು ಹಿಂದೂ ಧರ್ಮದೊಂದಿಗೆ ಆಳವಾಗಿ ಬೆಸೆದುಕೊಂಡಿದೆ. ಒಬ್ಬ ವ್ಯಕ್ತಿಯ ಜಾತಿಯನ್ನು ಹುಟ್ಟಿನ ಆಧಾರದಲ್ಲಿ ನಿಶ್ಚಯಿಸಲಾಗುತ್ತದೆ. ಅಂದರೆ, ಒಂದು ಜಾತಿಯಲ್ಲಿ ಹುಟ್ಟಿದ ವ್ಯಕ್ತಿಗೆ ಇನ್ನೊಂದು ಜಾತಿಗೆ ಬದಲಾಗಲು ಸಾಧ್ಯವಿಲ್ಲ. ಭಾರತದಲ್ಲಿ ಅನೇಕ ಜಾತಿಗಳು ಮತ್ತು ಉಪಜಾತಿಗಳು ಅಸ್ತಿತ್ವದಲ್ಲಿವೆ.

## ಒಂದು ಗ್ರಾಮದ ಕಥೆ

ಬಾಲುವು ಜಾತಿ ವ್ಯವಸ್ಥೆಯು ಅಸ್ತಿತ್ವದಲ್ಲಿದ್ದ ಒಂದು ಗ್ರಾಮದಲ್ಲಿ ವಾಸಿಸುತ್ತಿದ್ದನು. ಅಲ್ಲಿ ವರ್ಣ ಮತ್ತು ಜಾತಿಗಳ ಆಧಾರದಲ್ಲಿ ಜನರನ್ನು ವಿವಿಧ ಶ್ರೇಣಿಗಳಾಗಿ ವಿಂಗಡಿಸಲಾಗಿತ್ತು. ಬ್ರಾಹ್ಮಣರನ್ನು ಪುರೋಹಿತರಾಗಿ, ಕ್ಷತ್ರಿಯರನ್ನು ಯೋಧರಾಗಿ, ವೈಶ್ಯರನ್ನು ವ್ಯಾಪಾರಿಗಳಾಗಿ ಮತ್ತು ಶೂದ್ರರನ್ನು ಮೇಲ್ಜಾತಿಗಳ ಸೇವಕರಾಗಿಯೂ ಪರಿಗಣಿಸಿದ್ದರು. ಈ ನಾಲ್ಕು ವಿಭಾಗಗಳಲ್ಲಿ ಒಳಗೊಳ್ಳದವರನ್ನು ಪಂಚಮರು/ಕೆಳಸ್ತರದವರು ಎಂದು ಕರೆಯಲಾಗುತ್ತಿತ್ತು. ತೀರಾ ಅವಗಣಿಸಲ್ಪಟ್ಟ ಈ ವಿಭಾಗದವರು ಗ್ರಾಮಗಳ ಹೊರವಲಯಗಳಲ್ಲಿ ವಾಸಿಸುತ್ತಿದ್ದರು.

ಕಟ್ಟುನಿಟ್ಟಾದ ಜಾತಿ ವ್ಯವಸ್ಥೆಯು ನೆಲೆನಿಂತಿದ್ದ ಆ ಗ್ರಾಮದಲ್ಲಿ ಪ್ರತಿಯೊಂದು ಜಾತಿಯವರಿಗೂ ಅವರದ್ದೇ ಆದ ಕುಲಕಸುಬುಗಳಿದ್ದವು. ಇತರ ಕಸುಬುಗಳನ್ನು ಆಯ್ಕೆ ಮಾಡುವ ಸ್ವಾತಂತ್ರ್ಯವು ವ್ಯಕ್ತಿಗಳಿಗಿರಲಿಲ್ಲ. ಆದುದರಿಂದ ಆ ಗ್ರಾಮದ ಶೂದ್ರ ವಿಭಾಗದವನಾಗಿದ್ದ ಬಾಲುವಿಗೆ ಒರ್ವ ವ್ಯಾಪಾರಿಯಾಗಬೇಕೆಂಬ ಆಸೆಯಿದ್ದರೂ ಹೊಲಗಳಲ್ಲಿ ದುಡಿಯಬೇಕಾಯಿತು. ಅಲ್ಲಿ ಕಠಿಣವಾದ ಜಾತಿ ನಿಯಮಗಳು ಅಸ್ತಿತ್ವದಲ್ಲಿದ್ದವು. ಪ್ರತಿಯೊಂದು ಜಾತಿಗೂ ತಲೆತಲಾಂತರಗಳಿಂದ ಹಸ್ತಾಂತರಿಸಲ್ಪಟ್ಟ ಪ್ರತ್ಯೇಕವಾದ ಆಚಾರ ರೀತಿಗಳು ನಿಶ್ಚಯಿಸಲ್ಪಟ್ಟಿದ್ದವು. ಒಬ್ಬ ವ್ಯಕ್ತಿಗೆ ಸ್ವಜಾತಿಯಿಂದ ಮಾತ್ರವೇ ವಿವಾಹವಾಗುವ ಅನುಮತಿಯಿತ್ತು. ಇವೆಲ್ಲವೂ ಪರಂಪರೆಗಳನ್ನು ನೆಲೆನಿಲ್ಲಿಸಿ, ಸಮಾಜದ ಪ್ರತಿಯೊಂದು ಜಾತಿ ವಿಭಾಗಗಳನ್ನೂ ಪರಸ್ಪರ ದೂರವಿಟ್ಟಿತು. ಅಲ್ಲಿ ಅನೇಕ ಅಸಮಾನತೆಗಳಿದ್ದವು. ಜಾತಿ ಶ್ರೇಣಿಯಲ್ಲಿ ಅತ್ಯಂತ ಕೆಳಮಟ್ಟದವರೆಂದು ಪರಿಗಣಿಸಲ್ಪಟ್ಟವರಿಗೆ ಗ್ರಾಮದ ಸಾರ್ವಜನಿಕ ರಸ್ತೆಗಳನ್ನು ಬಳಸಲು ಅಥವಾ ದೇವಾಲಯಗಳಿಗೆ ಪ್ರವೇಶಿಸಲು ಅನುಮತಿಯಿರಲಿಲ್ಲ. ಆ ನಂತರದ ಕಾಲದಲ್ಲಿ ಶಿಕ್ಷಣ ಮತ್ತು ಸಾಮಾಜಿಕ ಚಲನಶೀಲತೆಯ ಕಾರಣದಿಂದ ಸಮಾನತೆಗಾಗಿ ಅನೇಕ ಹೋರಾಟಗಳು ಆರಂಭವಾಯಿತಲ್ಲದೆ ಜಾತಿ ನಿಯಮಗಳನ್ನು ಸಡಿಲಿಸಲಾಯಿತು. ಕಾಲಾನಂತರದಲ್ಲಿ ಗ್ರಾಮನಿವಾಸಿಗಳಿಗೆಲ್ಲಾ ಸಮಾನ ನ್ಯಾಯ ಮತ್ತು ಗೌರವವನ್ನು ಖಾತರಿಗೊಳಿಸುವ ಸಮಾಜವಾಗಿ ಆ ಗ್ರಾಮವು ಬದಲಾಯಿತು.

ಜಾತಿ ವ್ಯವಸ್ಥೆಯು ಅಸ್ತಿತ್ವದಲ್ಲಿದ್ದ ಒಂದು ಗ್ರಾಮದ ಕಥೆಯನ್ನು ನೀವು ಓದಿದಿರಲ್ಲವೇ. ಜಾತಿ ವ್ಯವಸ್ಥೆಯ ವಿಶೇಷತೆಗಳೇನು?

ಭಾರತದಲ್ಲಿ ಅಸ್ತಿತ್ವದಲ್ಲಿದ್ದ ಜಾತಿ ವ್ಯವಸ್ಥೆಯ ಪ್ರಧಾನ ವಿಶೇಷತೆಗಳು ಯಾವುವು ಎಂದು ನಾವು ನೋಡೋಣ.

### 1. ಸಾಮಾಜಿಕ ಶ್ರೇಣಿ ವ್ಯವಸ್ಥೆ (Social Hierarchy)

ಸಮಾಜದ ಸದಸ್ಯರನ್ನು ಜಾತಿಯ ಆಧಾರದಲ್ಲಿ ವಿವಿಧ ಶ್ರೇಣಿಗಳಾಗಿ ವಿಂಗಡಿಸಲಾಗಿತ್ತು. ಈ ಶ್ರೇಣಿ ವ್ಯವಸ್ಥೆಯ ಆಧಾರದಲ್ಲಿ ಸಮಾಜದಲ್ಲಿ ಒಬ್ಬ ವ್ಯಕ್ತಿಯ ಸಮಾಜದಲ್ಲಿನ ಸ್ಥಾನಮಾನ, ಗೌರವ, ಜವಾಬ್ದಾರಿಗಳು ಮೊದಲಾದವುಗಳನ್ನು ನಿಶ್ಚಯಿಸಲಾಗುತ್ತಿತ್ತು. ಪ್ರಾಚೀನ ಭಾರತದಲ್ಲಿ ಮೇಲ್ವರ್ಗಗಳೆಂದು ಪರಿಗಣಿಸಲ್ಪಟ್ಟಿದ್ದ ಜಾತಿಗಳಿಗೆ ಸಮಾಜದಲ್ಲಿ ಉನ್ನತ ಸ್ಥಾನಮಾನಗಳು ಲಭಿಸಿದ್ದವು. ಆದರೆ ಕೆಳವರ್ಗದವರಿಗೆ ಯಾವುದೇ ಸ್ಥಾನಮಾನಗಳು ಮತ್ತು ಹಕ್ಕುಗಳು ಲಭಿಸಿರಲಿಲ್ಲ.

## 2. ಕೆಲಸದ ವಿಭಜನೆ (Division of Labour)

ಪ್ರತಿಯೊಂದು ಜಾತಿಗೂ ಕುಲಕಸುಬುಗಳನ್ನು ನಿಶ್ಚಯಿಸಿ ನೀಡಲಾಗಿತ್ತು. ಬ್ರಾಹ್ಮಣರಿಗೆ ಪೌರೋಹಿತ್ಯ, ಕ್ಷತ್ರಿಯರಿಗೆ ದೇಶ ಸಂರಕ್ಷಣೆ ಮತ್ತು ವೈಶ್ಯರಿಗೆ ವ್ಯಾಪಾರವು ಲಭಿಸಿದಾಗ ಶೂದ್ರರು ಇತರ ಉನ್ನತ ವಿಭಾಗದವರ ಸೇವಕರಾಗಿ ಬದಲಾದರು. ಒಬ್ಬ ವ್ಯಕ್ತಿಗೆ ತನ್ನ ಕುಲಕಸುಬಲ್ಲದೆ ಇತರ ಕೆಲಸಗಳನ್ನು ಆಯ್ಕೆ ಮಾಡುವ ಅನುಮತಿ ಇರಲಿಲ್ಲ. ಈ ಪರಿಸ್ಥಿತಿಯು ಸಾಮಾಜಿಕ ಚಲನಶೀಲತೆಯೇ (Social Mobility) ಇಲ್ಲದ ಸಮಾಜವನ್ನು ಸೃಷ್ಟಿಸಿತು.

> **ಸಾಮಾಜಿಕ ಚಲನಶೀಲತೆ**
> **(Social Mobility)**
>
> ಸಾಮಾಜಿಕ ಚಲನಶೀಲತೆಯು ವ್ಯಕ್ತಿ ಅಥವಾ ವ್ಯಕ್ತಿಗಳ ಒಂದು ಸಾಮಾಜಿಕ ಸ್ಥಾನಮಾನದಿಂದ ಇನ್ನೊಂದರೆಡೆಗಿರುವ ಚಲನೆಯಾಗಿದೆ/ ಬದಲಾವಣೆಯಾಗಿದೆ.
>
> *(Wallace and Wallace)*
>
> ಕೆಲಸದಲ್ಲಿ ಒಂದು ವ್ಯಕ್ತಿಗೆ ಸಿಗುವ ಭಡ್ತಿಯು ಸಾಮಾಜಿಕ ಚಲನೆಗೆ ಉದಾಹರಣೆಯಾಗಿದೆ.

## 3. ಸಾಮಾಜಿಕ ನಿಯಂತ್ರಣ ಮತ್ತು ಕ್ರಮ (Social control and order)

ಪ್ರಾಚೀನ ಭಾರತದಲ್ಲಿ ಜಾತಿ ವ್ಯವಸ್ಥೆಯು ಸಾಮಾಜಿಕ ನಿಯಂತ್ರಣಕ್ಕಿರುವ ಒಂದು ಮಾರ್ಗವಾಗಿ ಕಾರ್ಯನಿರ್ವಹಿಸುತ್ತಿತ್ತು. ಪ್ರತಿಯೊಂದು ಜಾತಿಯ ಸದಸ್ಯರು ತಮ್ಮ ಜಾತಿ ಆಧಾರಿತವಾದ ಕಟ್ಟಳೆಗಳನ್ನು ಮತ್ತು ಕರ್ತವ್ಯಗಳನ್ನು ಒತ್ತಾಯಪೂರ್ವಕವಾಗಿ ನಿರ್ವಹಿಸಬೇಕಾಗಿತ್ತು. ಶುದ್ಧಿ – ಅಶುದ್ಧಿ (Purity-Pollution) ಎಂಬ ಕಲ್ಪನೆಯು ಜಾತಿ ವ್ಯವಸ್ಥೆಯ ತಳಹದಿಯಾಗಿತ್ತು. ಇದು ಜಾತಿ ವ್ಯತ್ಯಾಸಗಳನ್ನು ಕಟ್ಟುನಿಟ್ಟಾಗಿ ಅಸ್ತಿತ್ವದಲ್ಲಿರಿಸಲು ಕಾರಣವಾಯಿತು. ಕೆಳಜಾತಿಯವರೆಂದು ಪರಿಗಣಿಸಲ್ಪಟ್ಟವರು ಮೇಲ್ಜಾತಿಯೆಂದು ಪರಿಗಣಿಸಲ್ಪಟ್ಟವರಿಂದ ನಿಶ್ಚಿತ ಸಾಮಾಜಿಕ ಅಂತರ (Social Distance)ವನ್ನು ಪಾಲಿಸಬೇಕಾಗಿತ್ತು. 'ಅಸ್ಪೃಶ್ಯತೆ' (Untouchability) ಎಂಬ ಅನಾಚಾರವು ಅಂದು ಅಸ್ತಿತ್ವದಲ್ಲಿತ್ತು. ಎಲ್ಲಾ ಜಾತಿಯವರಿಗೆ ಒಟ್ಟಿಗೆ ಕುಳಿತು ಆಹಾರ ಸೇವಿಸಲು ಅವಕಾಶವಿರಲಿಲ್ಲ. ನಾಗರಿಕ ಹಕ್ಕುಗಳ ಸಂರಕ್ಷಣಾ ಅಧಿನಿಯಮ 1955 ರ ಪ್ರಕಾರ ಭಾರತದಲ್ಲಿ 'ಅಸ್ಪೃಶ್ಯತೆ' ಎಂಬ ಸಾಮಾಜಿಕ ಅನಾಚಾರವನ್ನು ನಡೆಸುವುದು ಮತ್ತು ಪ್ರಚಾರ ಮಾಡುವುದನ್ನು ನಿಷೇಧಿಸಲಾಗಿದೆ.

> **ನಾಗರಿಕ ಹಕ್ಕುಗಳ ಸಂರಕ್ಷಣಾ ಅಧಿನಿಯಮ, 1955**
> **(The Protection of Civil Rights Act, 1955)**
>
> ನಾಗರಿಕ ಹಕ್ಕುಗಳ ಸಂರಕ್ಷಣಾ ಅಧಿನಿಯಮವು ಅಸ್ಪೃಶ್ಯತೆಯನ್ನು ಆಚರಿಸುವುದು ಮತ್ತು ಬೋಧಿಸುವುದನ್ನು ತಡೆಯಲು 1955 ರಲ್ಲಿ ಭಾರತದ ಸಂಸತ್ತು ಜಾರಿಗೊಳಿಸಿದ ಕಾನೂನಾಗಿದೆ. 1955 ರಲ್ಲಿ ಜಾರಿಗೊಳ್ಳುವಾಗ ಈ ಕಾನೂನನ್ನು ಅಸ್ಪೃಶ್ಯತಾ (ಅಪರಾಧಗಳ) ಕಾಯಿದೆ, 1955 [Untouchability (Offences) Act, 1955] ಎಂದು ಕರೆಯುತ್ತಿದ್ದರು. 1976 ರ ತಿದ್ದುಪಡಿಯ ಮೂಲಕ ಅದನ್ನು ನಾಗರಿಕ ಹಕ್ಕುಗಳ ಸಂರಕ್ಷಣಾ ಅಧಿನಿಯಮವೆಂದು ಮರುನಾಮಕರಣ ಮಾಡಿದರು.

## 4. ವಿವಾಹದಲ್ಲಿರುವ ನಿಯಂತ್ರಣಗಳು (Restrictions on Marriage)

ಜಾತಿ ವ್ಯವಸ್ಥೆಯು ಸ್ವಜಾತಿ ವಿವಾಹ (Endogamy)ವನ್ನು ಪ್ರೋತ್ಸಾಹಿಸುತ್ತಿತ್ತು. ಸ್ವಜಾತೀಯ ವಿವಾಹವೆಂದರೆ ಸ್ವಂತ ಜಾತಿಯಿಂದಿರುವ ವಿವಾಹವಾಗಿದೆ. ಅಂತರ್ಜಾತೀಯ ವಿವಾಹ (Exogamy) ಆಗುವವರನ್ನು ಜಾತಿಯಿಂದ ಹೊರಗಿಡುವ ಸಂಪ್ರದಾಯವೂ ಅಸ್ತಿತ್ವದಲ್ಲಿತ್ತು. ಪ್ರತಿಯೊಂದು ಜಾತಿಯವರೂ ಇತರ ಜಾತಿಗಳೊಂದಿಗೆ ಬೆರೆಯದೆ, ಅವರದೇ ಆದ ಮೇರೆಗಳೊಳಗೆ ನಿಲ್ಲಿಸುವುದಕ್ಕಾಗಿ ಸ್ವಜಾತಿ ವಿವಾಹವನ್ನು ಅನುಸರಿಸುತ್ತಿದ್ದರು.

## 5. ಅಸಮಾನತೆ ಮತ್ತು ಕಡೆಗಣಿಸುವಿಕೆ (Inequality and Marginalisation)

ಜಾತಿ ವ್ಯವಸ್ಥೆಯು ಸಾಮಾಜಿಕ ರಚನೆಯ ಆಧಾರವಾಗಿ ಕಾರ್ಯನಿರ್ವಹಿಸಿದರೂ ಅದು ಸಮಾಜದಲ್ಲಿ ಅಸಮಾನತೆಯನ್ನು ಬೆಳೆಸಿತ್ತು. ನಿರ್ದಿಷ್ಟವಾಗಿ ಹೇಳುವುದಾದರೆ, ಕೆಳಜಾತಿಗಳೆಂದು ಪರಿಗಣಿಸಲ್ಪಟ್ಟ ಜನವಿಭಾಗಗಳಿಗೆ ಶಿಕ್ಷಣ, ಭೂಮಿ, ಸಂಪನ್ಮೂಲಗಳು ಮೊದಲಾದವುಗಳನ್ನು ನಿಷೇಧಿಸಲಾಗಿತ್ತು. ಇದು ಅವಗಣಿಸುವಿಕೆಯನ್ನು ಪ್ರೋತ್ಸಾಹಿಸಿತು.

ಜಾತಿ ವ್ಯವಸ್ಥೆಯಲ್ಲಿದ್ದ ಅಸಮಾನತೆಗಳನ್ನು ಪ್ರಶ್ನಾತೀತವೆಂದು ಪರಿಗಣಿಸಲಾಗಿತ್ತು. ಇದು ಸಂಪನ್ಮೂಲಗಳ ಸಮಾನ ಹಂಚಿಕೆಗೆ ಮತ್ತು ಸಮಾನತೆಯ ಬೆಳವಣಿಗೆಗೆ ಅಡ್ಡಿಯಾಯಿತು. ಕೆಲವು ವಿಭಾಗಗಳಿಗೆ ಹೆಚ್ಚಿನ ಪ್ರಾಧಾನ್ಯತೆವು ಲಭಿಸಿದಾಗ, ಮತ್ತೆ ಕೆಲವು ವಿಭಾಗಗಳು ಅವಗಣನೆಗೀಡಾದವು. ಕಾಲಾನಂತರದಲ್ಲಿ, ಜಾತಿ ಆಧಾರಿತ ಅಸಮಾನತೆಗಳು ಮತ್ತು ದಬ್ಬಾಳಿಕೆಗಳಿಗೆದುರಾಗಿ ಅನೇಕ ಹೋರಾಟಗಳು ಭಾರತದಾದ್ಯಂತ ಭುಗಿಲೆದ್ದವು. ಕಲ್ಲುಮಾಲೆ ಹೋರಾಟ, ಮೂಗುತಿ ಹೋರಾಟ, ಸಹಪಂಕ್ತಿ ಭೋಜನ, ಚನ್ನಾರ್ ದಂಗೆ ಮೊದಲಾದವುಗಳು ಕೇರಳದಲ್ಲಿ ನಡೆದ ಹೋರಾಟಗಳಿಗೆ ಉದಾಹರಣೆಗಳಾಗಿವೆ.

ಭಾರತದ ಸಂವಿಧಾನವು ಸಮಾಜದಲ್ಲಿನ ಅಸಮಾನತೆಗಳನ್ನು ನಿಷೇಧಿಸುತ್ತದೆ ಮತ್ತು ಎಲ್ಲಾ ಪೌರರಿಗೆ ಸಮಾನತೆಯನ್ನು ಖಚಿತಪಡಿಸುತ್ತದೆ. ಆಧುನಿಕ ಭಾರತದಲ್ಲಿ ಪ್ರಜಾಪ್ರಭುತ್ವ ಮೌಲ್ಯಗಳು, ಸಾಂವಿಧಾನಿಕ ವ್ಯವಸ್ಥೆಗಳು, ಸಾಮಾಜಿಕ ಚಳುವಳಿಗಳು ಎಂಬಿವುಗಳು ಜಾತಿ ವ್ಯವಸ್ಥೆಯ ಸಾಂಪ್ರದಾಯಿಕ ಕಟ್ಟುನಿಟ್ಟಿನ ಕ್ರಮಗಳಿಗೆ ಸವಾಲೆಸೆದವು. ಇದು ಸಾಮಾಜಿಕ ಚಲನಶೀಲತೆಯ ಮೇಲೆ ಪ್ರಭಾವ ಬೀರಿದ್ದಲ್ಲದೆ, ನೀತಿಯುಕ್ತ ಸಮಾಜವನ್ನು ಕಟ್ಟಲು, ಸಮಾನತೆಯನ್ನು ಉತ್ತೇಜಿಸಿ ಜಾತಿವಿವೇಚನೆಯನ್ನು ತೊಡೆದುಹಾಕಲು ದಾರಿ ಮಾಡಿಕೊಟ್ಟಿತು.



ಭಾರತದ ಸಂವಿಧಾನವು ಜಾತಿ ತಾರತಮ್ಯವನ್ನು ಹೇಗೆ ವಿಶ್ಲೇಷಿಸುತ್ತದೆ ಎಂಬುದನ್ನು ಕಂಡುಹಿಡಿಯಿರಿ. ಸಾಂವಿಧಾನಿಕ ಷರತ್ತುಗಳು, ಅನುಚ್ಛೇದಗಳು, ನ್ಯಾಯಾಲಯದ ಪ್ರಮುಖ ತೀರ್ಪುಗಳು ಮೊದಲಾದವುಗಳನ್ನು ಒಳಗೊಂಡ ವರದಿಯನ್ನು ತಯಾರಿಸಿ ಸಮಾಜ ವಿಜ್ಞಾನ ಕ್ಲಬ್ ನಲ್ಲಿ ಮಂಡಿಸಿರಿ.

## II. ಮತ (Religion)

ಭಾರತದ ಸಂವಿಧಾನದ ಮುನ್ನುಡಿಯಲ್ಲಿ ಭಾರತವು ಒಂದು ಜಾತ್ಯತೀತ ರಾಷ್ಟ್ರವೆಂದು ದಾಖಲಿಸಲ್ಪಟ್ಟಿದೆ. ಸರಕಾರವು ಯಾವುದೇ ಮತಕ್ಕೆ ವಿಶೇಷ ಪರಿಗಣನೆಯನ್ನು ನೀಡುವುದಿಲ್ಲ ಎಂಬುದು ಭಾರತದ ಜಾತ್ಯತೀತತೆಯ (Secularism) ವಿಶೇಷತೆಯಾಗಿದೆ. ಭಾರತದ ಸಂವಿಧಾನದ 15ನೇ ವಿಧಿಯು ಮತ, ಜನಾಂಗ, ಜಾತಿ, ಲಿಂಗ, ಜನ್ಮಸ್ಥಳ ಮೊದಲಾದವುಗಳ ಆಧಾರದಲ್ಲಿನ ಯಾವುದೇ ತಾರತಮ್ಯವನ್ನು ನಿಷೇಧಿಸುತ್ತದೆ. ಭಾರತದೊಳಗೆ ಮತ್ತು ಭಾರತದ ಹೊರಗೆ ಹುಟ್ಟಿಕೊಂಡ ಮತಗಳು ಇಲ್ಲಿ ಸಾಮರಸ್ಯದಿಂದ ಸಹಬಾಳ್ವೆ ನಡೆಸುವುದು ಭಾರತೀಯ ಸಾಮಾಜಿಕ ವ್ಯವಸ್ಥೆಯ ವಿಶೇಷತೆಗಳಲ್ಲೊಂದಾಗಿದೆ. ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಮತಗಳ ಪಾತ್ರವೇನೆಂದು ನೋಡೋಣ.

### 1. ಸಾಮಾಜಿಕ ನಿಯಂತ್ರಣಕ್ಕಿರುವ ಮಾರ್ಗ

ಮತ ಸೌಹಾರ್ದ ಸಮ್ಮೇಳನದಲ್ಲಿ ಪ್ರದರ್ಶಿಸಲಾದ ಫಲಕಗಳನ್ನು ಗಮನಿಸಿರಿ.




ಭಾರತದ ವಿವಿಧ ಮತಗಳು ಸಮಾಜಕ್ಕೆ ನೀಡುವ ಮೌಲ್ಯಗಳ ಕುರಿತಾದ ಸೂಚನೆಗಳನ್ನು ಮೇಲಿನ ಸಂದೇಶಗಳು ಒಳಗೊಂಡಿವೆ.

ಪ್ರತಿಯೊಂದು ಮತವೂ ಸತ್ಯಸಂಧತೆ, ಕರುಣೆ, ಪರಸ್ಪರ ಗೌರವ, ಪರಸ್ಪರ ಪ್ರೀತಿ, ಕಾಳಜಿ, ಸಾಮಾಜಿಕ ಜವಾಬ್ದಾರಿ, ನೈತಿಕತೆ, ನೀತಿ ಮೊದಲಾದ ಮಾನವೀಯ ಮೌಲ್ಯಗಳನ್ನು ಕಲಿಸುತ್ತದೆ ಮತ್ತು ಆ ಮೂಲಕ ಸಮಾಜೀಕರಣ ಪ್ರಕ್ರಿಯೆಯನ್ನು ಶ್ರೀಮಂತಗೊಳಿಸುತ್ತದೆ. ಈ ಮೂಲಕ ಸಮಾಜದಲ್ಲಿ ಸಹಬಾಳ್ವೆ ಮತ್ತು ಸುವ್ಯವಸ್ಥೆಯನ್ನು ಖಾತರಿಗೊಳಿಸಲು ಸಾಧ್ಯವಾಗುತ್ತದೆ. ಹೀಗೆ, ಧಾರ್ಮಿಕ ಮೌಲ್ಯಗಳು ವ್ಯಕ್ತಿಗಳ ನಡವಳಿಕೆಯ ಮೇಲೆ ಪ್ರಭಾವ ಬೀರುವ ಮತ್ತು ನಿಯಂತ್ರಿಸುವ ಮೂಲಕ ಸಾಮಾಜಿಕ ನಿಯಂತ್ರಣದ ಮಾರ್ಗವಾಗಿ ಕಾರ್ಯನಿರ್ವಹಿಸುತ್ತದೆ.

## 2. ಸಾಂಸ್ಕೃತಿಕ ವೈವಿಧ್ಯವನ್ನು ಶ್ರೀಮಂತಗೊಳಿಸುತ್ತವೆ

ಕೆಳಗಿನ ಚಿತ್ರಗಳನ್ನು ನಿರೀಕ್ಷಿಸಿರಿ.


ಬಾಂದ್ರಾದಲ್ಲಿನ ಮೌಂಟ್ ಮೇರಿ ಚರ್ಚ್


ಪಂಜಾಬಿನ ಮುರಿಷ್ ಮೋಸ್ಕ್


ಸಿಕ್ಕಿಂನ ರುಂಟೆಕ್ ಧರ್ಮಚಕ್ರ ಸೆಂಟರ್


ಅಮೃತಸರದ ಸ್ವರ್ಣ ಮಂದಿರ


ತಿರುವನಂತಪುರದ ಶ್ರೀಪದ್ಮನಾಭಸ್ವಾಮಿ ದೇವಸ್ಥಾನ


ಮೌಂಟ್ ಅಬುವಿನಲ್ಲಿರುವ ದಿಲ್ ವಾರ ಜೈನ ಕ್ಷೇತ್ರ

ಭಾರತದ ಕೆಲವು ಪ್ರಮುಖ ಮತೀಯ ಕೇಂದ್ರಗಳಲ್ಲಿನ ವರ್ಣಚಿತ್ರಗಳು ಮತ್ತು ಕೆತ್ತನೆಗಳನ್ನು ಮೇಲಿನ ಚಿತ್ರಗಳಲ್ಲಿ ನೀಡಲಾಗಿದೆ. ಮತಗಳಿಗೆ ನಂಬಿಕೆಗಳು, ಕಲೆಗಳು ಮತ್ತು ಸಾಹಿತ್ಯದ ಮೂಲಕ ನಮ್ಮ ದೇಶದ ಸಾಂಸ್ಕೃತಿಕ ವೈವಿಧ್ಯತೆಯನ್ನು ಶ್ರೀಮಂತಗೊಳಿಸಲು ಸಾಧ್ಯವಿದೆ. ದೇವಾಲಯಗಳು, ಚರ್ಚುಗಳು, ಮಸೀದಿಗಳು, ವಿಹಾರಗಳು ಮತ್ತು ಗುರುದ್ವಾರಗಳು ಮೊದಲಾದ ಮತೀಯ ಸಂಸ್ಥೆಗಳಲ್ಲಿನ ವರ್ಣಚಿತ್ರಗಳು ಮತ್ತು ಕೆತ್ತನೆಗಳು ಇದನ್ನು ಸ್ಪಷ್ಟಪಡಿಸುತ್ತವೆ.

ಹಿಂದೂ-ಮುಸ್ಲಿಂ ಮೈತ್ರಿಗಾಗಿ ಪ್ರಯತ್ನಿಸಿದ ಕಬೀರ್ ದಾಸ್, ಮಹಿಳೆಯರ ಆರಾಧನಾ ಸ್ವಾತಂತ್ರ್ಯಕ್ಕಾಗಿ ಪ್ರಯತ್ನಿಸಿದ ಮೀರಾಬಾಯಿ, ಜಾತಿ ತಾರತಮ್ಯ ಮತ್ತು ಆರ್ಥಿಕ ಅಸಮಾನತೆಯನ್ನು ವಿರೋಧಿಸಿದ ಗುರುನಾನಕ್ ಮೊದಲಾದ ಅನೇಕ ವ್ಯಕ್ತಿಗಳ ಆದರ್ಶ ಚಟುವಟಿಕೆಗಳಲ್ಲಿ ಭಾರತದ ಸಾಂಸ್ಕೃತಿಕ ವೈವಿಧ್ಯವನ್ನು ಶ್ರೀಮಂತಗೊಳಿಸುವ ಅನೇಕ ಅಂಶಗಳನ್ನು ಕಾಣಬಹುದು.

ಭಾರತದಲ್ಲಿನ ವಿವಿಧ ಮತೀಯ ಆಚರಣೆಗಳು ಯಾವುವು?

ವಿವಿಧ ಮತದವರು ಇಂತಹ ಆಚರಣೆಯಲ್ಲಿ ಪಾಲ್ಗೊಳ್ಳುವುದು ಸಮಾಜದಲ್ಲಿ ಒಗ್ಗಟ್ಟು ಮತ್ತು ಮೈತ್ರಿಯನ್ನು ದೃಢಗೊಳಿಸಲು ಕಾರಣವಾಗಬಹುದೆ? ಅನ್ವೇಷಿಸಿರಿ.

### 3. ಸಾಮಾಜಿಕ ಬದಲಾವಣೆಯ ವೇಗವನ್ನು ಹೆಚ್ಚಿಸುತ್ತವೆ

ಭಾರತದ ನವೋತ್ಥಾನಕ್ಕೆ ಸಂಬಂಧಿಸಿದ ಅನೇಕ ಚಳುವಳಿಗಳ ಕುರಿತು ನೀವು ಹಿಂದಿನ ತರಗತಿಗಳಲ್ಲಿ ಚರ್ಚಿಸಿದ್ದೀರಲ್ಲವೇ. ಕೆಲವು ಮತೀಯ ಚಳುವಳಿಗಳು ಸಾಮಾಜಿಕ ಚಳುವಳಿಗಳಾಗಿ ವಿಕಾಸಹೊಂದಿ ಸಾಮಾಜಿಕ ಬದಲಾವಣೆಗಳಿಗೆ ದಾರಿ ಮಾಡಿಕೊಟ್ಟಿವೆ. ಅವು ಜಾತಿ ತಾರತಮ್ಯವನ್ನು ಪ್ರಶ್ನಿಸಿ, ಸಮಾನತೆಯನ್ನು ಪ್ರೋತ್ಸಾಹಿಸಿದವು. ರಾಜಾರಾಮ್ ಮೋಹನ್ ರಾಯ್‌ರವರ ನೇತೃತ್ವದಲ್ಲಿದ್ದ ಬ್ರಹ್ಮ ಸಮಾಜವು ಇದಕ್ಕೊಂದು ಉದಾಹರಣೆಯಾಗಿದೆ.

ಮತಗಳು ಸಮಾಜದಲ್ಲಿ ನವೀಕರಣ ಮತ್ತು ಒಗ್ಗಟ್ಟನ್ನು ಪ್ರೋತ್ಸಾಹಿಸುತ್ತವೆಯಾದರೂ ಮತದ ಹೆಸರಿನಲ್ಲಿ ನಡೆಯುವ ವಿಭಾಗೀಯತೆ ಮತ್ತು ಸಂಘರ್ಷಗಳು ಕೆಲವೊಮ್ಮೆ ಭಾರತದ ಸಾಮಾಜಿಕ ವ್ಯವಸ್ಥೆಯ ಸಮತೋಲನಕ್ಕೆ ಸವಾಲೊಡ್ಡುತ್ತವೆ. ಇಂತಹ ಒಲವುಗಳು ನಮ್ಮ ಸಾಮಾಜಿಕ ಒಗ್ಗಟ್ಟಿನ ಮೇಲೆ ಹಾನಿಕಾರಕ ಪರಿಣಾಮವನ್ನು ಬೀರುತ್ತವೆ.

ಭಾರತದ ಜಾತ್ಯತೀತತೆಯ ಪ್ರಾಧಾನ್ಯವನ್ನು ಎತ್ತಿ ಹಿಡಿಯುವ ಕಥೆ, ಸಣ್ಣಕಥೆ, ಕವನ, ಲೇಖನ, ಚಿತ್ರಗಳು, ಕಾರ್ಟೂನ್ ಮೊದಲಾದವುಗಳನ್ನು ಒಳಗೊಂಡ ಒಂದು ಡಿಜಿಟಲ್ ಮ್ಯಾಗಜೀನ್ ತಯಾರಿಸಿ ಸ್ಕೂಲ್ ವಿಕ್ಕಿಯಲ್ಲಿ ಸೇರಿಸಿರಿ.

## III. ಭಾಷೆ (Language)



ಭಾರತವು ಜಗತ್ತಿನಲ್ಲಿ ಅತ್ಯಂತ ಹೆಚ್ಚು ಭಾಷಾ ವೈವಿಧ್ಯವಿರುವ ದೇಶಗಳಲ್ಲೊಂದಾಗಿದೆ. 22 ಅಧಿಕೃತ ಭಾಷೆಗಳು ಮತ್ತು ಅನೇಕ ಭಾಷಾ ಪ್ರಭೇದಗಳು ಭಾರತದಲ್ಲಿವೆ.

ಭಾಷೆಯು ಕೇವಲ ಸಂವಹನ ಮಾಧ್ಯಮ ಮಾತ್ರವಲ್ಲ, ಅದು ಸಂಸ್ಕೃತಿ ಮತ್ತು ಸ್ವಂತಿಕೆಯ ಸಂಕೇತವೂ ಹೌದು. ಸ್ವಾತಂತ್ರ್ಯಾನಂತರ ಭಾರತದಲ್ಲಿ ರಾಜ್ಯಗಳನ್ನು ಭಾಷೆಯ ಆಧಾರದಲ್ಲಿ ಪುನರ್ವಿಂಗಡಣೆ ಮಾಡಲಾಯಿತೆಂದು ನಿಮಗೆ ತಿಳಿದಿದೆಯಲ್ಲವೇ. ವಿಭಿನ್ನ ಭಾಷೆಗಳನ್ನು ಮಾತನಾಡುವವರ ನಡುವೆ ಸಾಮಾಜಿಕ ವ್ಯವಸ್ಥೆ ಮತ್ತು ಸಂಸ್ಕೃತಿಯಲ್ಲಿ ಹಲವು ವ್ಯತ್ಯಾಸಗಳಿವೆ.



ಪ್ರಸಿದ್ಧ ಸಮಾಜಶಾಸ್ತ್ರಜ್ಞೆ ಮತ್ತು ಭಾರತದ ಮೊದಲ ಮಾನವ ಶಾಸ್ತ್ರಜ್ಞೆಯಾದ ಪ್ರೊ. ಇರಾವತಿ ಕರ್ವೆಯವರ ಅಧ್ಯಯನಗಳು ಭಾರತದ ಭಾಷಾ ಪ್ರಭೇದಗಳನ್ನು ಈ ಕೆಳಗಿನಂತೆ ವರ್ಗೀಕರಿಸುತ್ತದೆ.

| ಭಾಷಾ ಕುಟುಂಬ | ಪ್ರಧಾನ ಭಾಷೆಗಳು | ಅಸ್ತಿತ್ವದಲ್ಲಿರುವ ಭಾಷಾವಾರು ಪ್ರದೇಶಗಳು |
|---|---|---|
| ಇಂಡೋ-ಯುರೋಪಿಯನ್ | ಪಂಜಾಬಿ, ಸಿಂಧಿ, ಹಿಂದಿ, ಬಿಹಾರಿ, ಬಂಗಾಳಿ, ಅಸ್ಸಾಮಿ, ರಾಜಸ್ಥಾನಿ, ಗುಜರಾತಿ, ಮರಾಠಿ, ಕೊಂಕಣಿ, ಒಡಿಯಾ | ಪಂಜಾಬು, ಸಿಂಧ್, ಉತ್ತರ ಪ್ರದೇಶ, ಮಧ್ಯಪ್ರದೇಶದ ಕೆಲವು ಭಾಗಗಳು, ಬಿಹಾರ, ಬಂಗಾಳ, ಅಸ್ಸಾಂ, ರಾಜಸ್ಥಾನ, ಕಾಥೇವಾಡ, ಗುಜರಾತ್, ಮಹಾರಾಷ್ಟ್ರ, ದಕ್ಷಿಣ ಕೊಂಕಣ, ಒರಿಸ್ಸಾ |
| ದ್ರಾವಿಡ | ತೆಲುಗು, ಕನ್ನಡ, ತಮಿಳು, ಮಲಯಾಳ, ತುಳು, ಕೊಡವ, ತೋಡ | ಆಂಧ್ರ/ತೆಲಂಗಾಣ, ಕರ್ನಾಟಕ, ತಮಿಳುನಾಡು, ಕೇರಳ, ತುಳುನಾಡು, ಕೊಡಗಿನ ಬೆಟ್ಟಗಳು, ನೀಲಗಿರಿ ಬೆಟ್ಟಗಳು |
| ಆಸ್ಟ್ರೋ-ಏಷ್ಯಾಟಿಕ್ | ಮುಂಡರಿ, ಸವೋರ, ಜುವಾಂಗ್, ಬೋಂಡೋ, ಗಡಾಬ, ಭೂಮಿಯಾ, ಸಂತಾಲಿ, ಖಾಸಿ | ದಕ್ಷಿಣ ಬಿಹಾರ, ದಕ್ಷಿಣ ಒರಿಸ್ಸಾದ ಆಗ್ನೇಯ ಮತ್ತು ಮಧ್ಯಭಾಗಗಳು, ಪಶ್ಚಿಮ ಬಂಗಾಳ, ಸಂತಾಳ ಪರ್ಗಾಣ ಜಿಲ್ಲೆ, ಅಸ್ಸಾಂ ಬೆಟ್ಟಗಳು |

*Source:* Irawathi Karve, *Kinship Organisation in India (1953)*

ಜನರನ್ನು ಪರಸ್ಪರ ಜೋಡಿಸುವಲ್ಲಿ, ಸಂಸ್ಕೃತಿಯನ್ನು ಪೋಷಿಸುವಲ್ಲಿ ಮತ್ತು ಐಕ್ಯವನ್ನು ಖಾತರಿಗೊಳಿಸಿ ಭಾರತದ ಸಾಮಾಜಿಕ ವ್ಯವಸ್ಥೆಯನ್ನು ಕಾಪಾಡುವುದರಲ್ಲಿ ಭಾಷೆಗಳ ಪಾತ್ರವನ್ನು ನಾವು ಪರಿಶೀಲಿಸೋಣ.

### 1. ಸಾಂಸ್ಕೃತಿಕ ಸಂಪ್ರದಾಯಗಳನ್ನು ಸಜೀವಗೊಳಿಸುತ್ತವೆ

ನೀವು ಜನಪದ ಹಾಡುಗಳ ಕುರಿತು ಕೇಳಿರುವಿರಾ? ಕೇರಳದ ವಡಕ್ಕನ್ ಪಾಟುಗಳು ಜನಪದ ಹಾಡುಗಳಿಗೆ ಉದಾಹರಣೆಗಳಾಗಿವೆ. ಇಂತಹ ಹಾಡುಗಳ ಮೂಲಕ ಸಾಂಪ್ರದಾಯಿಕ ಮೌಲ್ಯಗಳು, ಸಾಮಾಜಿಕ ಆಚಾರಗಳು ಮತ್ತು ಐತಿಹಾಸಿಕ ಘಟನೆಗಳು ಸಂರಕ್ಷಿಸಲ್ಪಡುತ್ತವೆ. ಜನಪದ ಹಾಡುಗಳಿಗೆ ಹೆಚ್ಚಿನ ಉದಾಹರಣೆಗಳನ್ನು ಕಂಡುಹಿಡಿಯಿರಿ.

ಭಾಷೆಗಳು ಕಾಲಕ್ಕನುಗುಣವಾಗಿ ಮೌಖಿಕವಾಗಿ ಮತ್ತು ಬದಲಾವಣೆಗಳಿಗೆ ಅನುಗುಣವಾಗಿ ಲಿಖಿತವಾಗಿ ಆಯಾ ಸಮಾಜದ ಸಂಪ್ರದಾಯಗಳನ್ನು ಜೀವಂತಗೊಳಿಸುತ್ತವೆ. ಪ್ರತಿಯೊಂದು ಸಮಾಜದ ಸಂಪ್ರದಾಯಗಳು, ಕಥೆಗಳು ಮತ್ತು ಮೌಲ್ಯಗಳು ಆಯಾ ಸಮಾಜದ ಸಂಸ್ಕೃತಿಯನ್ನು ಪೋಷಿಸುತ್ತವೆ.

### 2. ಅಸ್ಮಿತೆಯನ್ನು ನೀಡುತ್ತದೆ

ಮಲಯಾಳ ಭಾಷೆ ಮಾತನಾಡುವವರನ್ನು 'ಮಲಯಾಳಿ'ಗಳೆಂದು ಕರೆಯುವಂತೆ, ಭಾಷೆಯು ವ್ಯಕ್ತಿಗಳನ್ನು ಅವರ ಅಸ್ಮಿತೆಯೊಂದಿಗೆ ಬೆಸೆಯುತ್ತದೆ. ತಮಿಳರು, ಬಿಹಾರಿಗಳು, ಪಂಜಾಬಿಗಳು ಮೊದಲಾದ ಪ್ರಯೋಗಗಳು ವ್ಯಕ್ತಿಗಳ ಭಾಷೆ ಮತ್ತು ಅಸ್ಮಿತೆಯು ಹೇಗೆ ಬೆಸೆಯುತ್ತದೆ ಎಂಬುದಕ್ಕಿರುವ ಉದಾಹರಣೆಗಳಾಗಿವೆ. ಹೀಗೆ ಭಾಷೆಯು ವ್ಯಕ್ತಿಗಳ ಅಸ್ಮಿತೆಯೊಂದಿಗೆ ಬೆಸೆದುಕೊಂಡಿದೆ.

### 3. ಸಾಂಸ್ಕೃತಿಕ ವೈವಿಧ್ಯಗಳೊಂದಿಗಿನ ಗೌರವ ಮತ್ತು ಸಹಬಾಳ್ವೆಯನ್ನು ಬೆಳೆಸುತ್ತದೆ

**ವಡಕ್ಕನ್ ಪಾಟ್ಟುಗಳು**

ವಡಕ್ಕನ್ ಪಾಟ್ಟುಗಳು ಉತ್ತರ ಕೇರಳದಲ್ಲಿ ಹುಟ್ಟಿಕೊಂಡ ವೀರಾರಾಧನೆಯ ಜನಪದ ಗೀತೆಗಳಾಗಿವೆ. ಉತ್ತರ ಮಲಬಾರಿನ ಕಡತ್ತನಾಡು, ಕೋಲತ್ತುನಾಡು, ವಯನಾಡು ಮೊದಲಾದ ಪ್ರದೇಶಗಳ, ಕಳರಿ ಅಭ್ಯಾಸಗಳಿಗೆ ಹೆಸರುವಾಸಿಯಾದ ಪುತ್ತೂರಂ, ತಚ್ಚೋಳಿ ಮೊದಲಾದ ತರವಾಡುಗಳಲ್ಲಿನ ಅಭ್ಯಾಸಿಗಳ ಜೀವನ ಚರಿತ್ರೆ ಮತ್ತು ಅವರ ಸ್ತುತಿಯು ವಡಕ್ಕನ್ ಪಾಟ್ಟುಗಳ ಸಾರವಾಗಿದೆ. ಈ ಹಾಡುಗಳು ಮಲಯಾಳ ಭಾಷೆಯ ಮೂಲಕ ಹಸ್ತಾಂತರವಾಗುತ್ತವೆ.

ಮಾತೃಭಾಷೆಯಲ್ಲದೆ ಬೇರೆ ಯಾವೆಲ್ಲಾ ಭಾಷೆಗಳನ್ನು ನೀವು ಕಲಿಯುತ್ತೀರಿ? ಇತರ ಭಾಷೆಗಳಲ್ಲಿನ ಕಥೆಗಳು, ಕವನಗಳು, ಸಾಹಿತ್ಯ ರಚನೆಗಳು ಆ ಭಾಷೆಯನ್ನಾಡುವ ಜನರ ಸಂಸ್ಕೃತಿಯನ್ನು ತಿಳಿಯಲು ನಮಗೆ ಸಹಾಯಕವಾಗುವುದಿಲ್ಲವೆ? ವಿವಿಧ ಭಾಷೆಗಳಿಂದ ವಿಭಿನ್ನ ಸಂಸ್ಕೃತಿಯ ಕುರಿತು ತಿಳಿಯಲು, ಅವುಗಳನ್ನು ಗೌರವಿಸಲು ಮತ್ತು ಸಹಬಾಳ್ವೆಯನ್ನು ಬೆಳೆಸಲು ಸಾಧ್ಯವಿದೆ. ಪ್ರಾದೇಶಿಕ ಭಾಷೆಗಳನ್ನೊಳಗೊಂಡು ವಿಭಿನ್ನ ಭಾಷೆಗಳನ್ನು ನಿರ್ವಹಿಸುವ ಸಾಮರ್ಥ್ಯವು ವ್ಯಕ್ತಿಗಳಿಗೆ ವಿಭಿನ್ನ ಜೀವನ ದೃಷ್ಟಿಕೋನಗಳನ್ನು ಮತ್ತು ಅವಕಾಶಗಳನ್ನು ನೀಡುತ್ತದೆ.

ಭಾರತದ ಭಾಷಾ ವೈವಿಧ್ಯ ಮತ್ತು ಸಾಂಸ್ಕೃತಿಕ ವಿನಿಮಯ ಎಂಬ ವಿಷಯದಲ್ಲಿ ಒಂದು ಲೇಖನವನ್ನು ತಯಾರಿಸಿರಿ.

ಭಾರತೀಯ ಸಾಮಾಜಿಕ ವ್ಯವಸ್ಥೆಯ ಸಮತೋಲನವನ್ನು ಕಾಪಾಡಿಕೊಳ್ಳಲು ಭಾಷಾ ವೈವಿಧ್ಯವನ್ನು ಗುರುತಿಸುವುದು ಮತ್ತು ಗೌರವಿಸುವುದು ಅತ್ಯಗತ್ಯವಾಗಿದೆ.

ದೇಶದ ಏಕತೆ, ಅಖಂಡತೆ, ಸಹೋದರತೆ, ಮಾನವೀಯತೆ ಮೊದಲಾದ ಆಶಯಗಳು ಮತ್ತು ಮೌಲ್ಯಗಳನ್ನು ಪ್ರತಿಪಾದಿಸುವ ಒಂದು ದೇಶಭಕ್ತಿಗೀತೆಯನ್ನು ಆಯ್ಕೆ ಮಾಡಿರಿ. ಆ ಆಶಯಗಳು ಮತ್ತು ಮೌಲ್ಯಗಳು ಹೇಗೆ ಅದರಲ್ಲಿನ ಭಾಷೆಯ ಮೂಲಕ ಪ್ರತಿಫಲಿಸಲ್ಪಟ್ಟಿವೆಯೆಂದು ವಿಶ್ಲೇಷಿಸಿ ಟಿಪ್ಪಣಿ ಬರೆಯಿರಿ.

## IV. ಬುಡಕಟ್ಟು ಸಮಾಜ (Tribal Society)

**ನೀಲಗಿರಿ ತಹರ್‌ಗಳ ಸಂರಕ್ಷಣೆಗಾಗಿ ಮುತುವಾನ್ ಬುಡಕಟ್ಟಿನ ಜ್ಞಾನವನ್ನು ಉಪಯೋಗಿಸಿದ ಅರಣ್ಯ ಇಲಾಖೆ**

**ಪಶ್ಚಿಮ ಘಟ್ಟದ ಸಂರಕ್ಷಣೆಯಲ್ಲಿ ಕರ್ನಾಟಕದ ಸೋಲಿಗ ಬುಡಕಟ್ಟಿನ ಕೊಡುಗೆ ಅಪಾರ**

**ಸಾಂಪ್ರದಾಯಿಕ ಭತ್ತದ ತಳಿಗಳು ಮತ್ತು ಕೃಷಿ ರೀತಿಗಳ ಸಂರಕ್ಷಣೆಗೆ ಕುರುಚಿಯಾ ಬುಡಕಟ್ಟಿನ ಕೃಷಿಕರಾದ ಚೆರುವಯಲ್ ರಾಮನ್‌ರಿಗೆ ಪದ್ಮಶ್ರೀ**

ವಾರ್ತಾಶೀರ್ಷಿಕೆಗಳನ್ನು ಓದಿದಿರಲ್ಲವೇ. ಭಾರತದ ಸಾಮಾಜಿಕ ವ್ಯವಸ್ಥೆಯ ಅಸ್ತಿತ್ವಕ್ಕೆ ವಿವಿಧ ಬುಡಕಟ್ಟು ಸಮಾಜಗಳು ನೀಡಿದ ಕೊಡುಗೆಯನ್ನು ಈ ವಾರ್ತೆಗಳಲ್ಲಿ ನೀಡಲಾಗಿದೆ. ಈ ವಾರ್ತಾಶೀರ್ಷಿಕೆಗಳಿಂದ ಬುಡಕಟ್ಟು ಸಮಾಜದ ಯಾವೆಲ್ಲಾ ಕೊಡುಗೆಗಳನ್ನು ನೀವು ಅರ್ಥೈಸಿಕೊಳ್ಳುವಿರಿ?

ಭಾರತೀಯ ಸಮಾಜವನ್ನು ಸಾಮಾಜಿಕ, ಸಾಂಸ್ಕೃತಿಕ ಮತ್ತು ಭೌಗೋಳಿಕ ವಿಶೇಷತೆಗಳ ಆಧಾರದಲ್ಲಿ ಬುಡಕಟ್ಟು ಸಮಾಜ, ಗ್ರಾಮೀಣ ಸಮಾಜ ಮತ್ತು ನಗರ ಸಮಾಜವೆಂದು ವರ್ಗೀಕರಿಸಲಾಗಿದೆ. ಬುಡಕಟ್ಟು ಸಮಾಜವು ಭಾರತೀಯ ಸಮಾಜದ ಅವಿಭಾಜ್ಯ ಘಟಕವಾಗಿದೆ. ಭಾರತದಲ್ಲಿ ವೈವಿಧ್ಯಮಯ ಬುಡಕಟ್ಟು ಸಮಾಜಗಳಿವೆ. ಜಗತ್ತಿನಲ್ಲೇ ಅತ್ಯಧಿಕ ಬುಡಕಟ್ಟು ಜನರು ಆಫ್ರಿಕಾದಲ್ಲಿದ್ದಾರೆ. ಭಾರತವು ಎರಡನೆಯ ಸ್ಥಾನದಲ್ಲಿದೆ.

ಬುಡಕಟ್ಟು ಸಮಾಜದವರು ಭಾರತದ ಮೂಲನಿವಾಸಿಗಳಾಗಿದ್ದಾರೆ. ಭಾರತದ ಜನಸಂಖ್ಯೆಯ 8.6 ಶೇಕಡಾವು (2011 ಜನಗಣತಿ ಪ್ರಕಾರ) ಬುಡಕಟ್ಟು ಸಮಾಜದವರಾಗಿದ್ದಾರೆ. ಈಶಾನ್ಯ ರಾಜ್ಯಗಳಾದ ಮಿಜೋರಾಂ, ನಾಗಾಲ್ಯಾಂಡ್, ಮೇಘಾಲಯ, ಅರುಣಾಚಲ ಪ್ರದೇಶ ಎಂಬೆಡೆಗಳಲ್ಲಿ ಹಾಗೂ ಕೇಂದ್ರಾಡಳಿತ ಪ್ರದೇಶವಾದ ಲಕ್ಷದ್ವೀಪದಲ್ಲಿ ಜನಸಂಖ್ಯೆಯ ಬಹುಭಾಗವೂ ಬುಡಕಟ್ಟು ವಿಭಾಗಗಳಾಗಿವೆ.

ಗ್ರಾಮ–ನಗರ ಸಮಾಜಗಳಿಗಿಂತ ವಿಭಿನ್ನವಾದ ವಿಶೇಷತೆಗಳನ್ನು ಬುಡಕಟ್ಟು ಸಮಾಜದಲ್ಲಿ ಕಾಣಬಹುದು. ಪ್ರತಿಯೊಂದು ಬುಡಕಟ್ಟು ಸಮಾಜಕ್ಕೂ ಅವರದ್ದೇ ಆದ ಭಾಷೆ, ಆಚಾರಗಳು, ಆಡಳಿತ ವ್ಯವಸ್ಥೆ ಮೊದಲಾದವುಗಳಿವೆ. ಬುಡಕಟ್ಟು ಜನತೆಯು ಪ್ರಕೃತಿಯೊಂದಿಗೆ ನಿಕಟ ಸಂಬಂಧವನ್ನು ಹೊಂದಿ ಜೀವಿಸುವವರೂ ಸುಸ್ಥಿರ ಕೃಷಿ ಮತ್ತು ಅರಣ್ಯ ನಿರ್ವಹಣೆಯಲ್ಲಿ ತೊಡಗಿಸಿಕೊಳ್ಳುವವರೂ ಆಗಿದ್ದಾರೆ. ಈ ಮೂಲಕ ಬುಡಕಟ್ಟು ಸಮಾಜಗಳಿಗೆ ಪರಿಸರವನ್ನು ಸಂರಕ್ಷಿಸಲು ಮತ್ತು ಪರಿಸರ ಸಮತೋಲನವನ್ನು ಕಾಪಾಡಲು ಸಾಧ್ಯವಾಗುತ್ತದೆ.

ಭಾರತದ ಬುಡಕಟ್ಟು ಸಮಾಜದ ವಿಭಿನ್ನ ಭಾಷೆಗಳು, ನಂಬಿಕೆಗಳು, ಆಚಾರಗಳು, ಆಹಾರ ರೀತಿ, ಜೀವನ ಶೈಲಿ ಮೊದಲಾದವು ನಮ್ಮ ವೈವಿಧ್ಯದ ಭಾಗವಾಗಿವೆ. ಕಾಡು, ಜೈವವೈವಿಧ್ಯ ಮೊದಲಾದವುಗಳನ್ನು ನೈಜವಾಗಿ ಸಂರಕ್ಷಿಸುವಲ್ಲಿ ಬುಡಕಟ್ಟು ಸಮಾಜದ ಕೊಡುಗೆಗಳು ಅಪಾರವಾಗಿವೆ. ಸಾಂಪ್ರದಾಯಿಕ ಜ್ಞಾನ, ಕಲೆ, ಸಂಸ್ಕೃತಿ ಮೊದಲಾದವು

ತಲೆತಲಾಂತರಗಳಿಂದ ಕೈಬದಲಾಯಿಸಲ್ಪಡುವ ಮೂಲಕ ಭಾರತದ ಸಾಂಸ್ಕೃತಿಕ ಸಂರಕ್ಷಣೆಯಲ್ಲಿ ಬುಡಕಟ್ಟು ಸಮಾಜಗಳು ಪ್ರಧಾನ ಪಾತ್ರವಹಿಸುತ್ತವೆ.

## 1. ಸಾಂಪ್ರದಾಯಿಕ ಜ್ಞಾನ

ಬುಡಕಟ್ಟು ಸಮಾಜಗಳು ಕೃಷಿ, ಔಷಧಿಗಳು, ಜೈವವೈವಿಧ್ಯ ಸಂರಕ್ಷಣೆ ಮೊದಲಾದವುಗಳ ಕುರಿತು ಅಮೂಲ್ಯವಾದ ಜ್ಞಾನವನ್ನು ಹೊಂದಿವೆ. ಉದಾಹರಣೆಗೆ, ವಿವಿಧ ಬುಡಕಟ್ಟು ಜನಾಂಗದವರು ವಿಭಿನ್ನ ಹವಾಮಾನ ಪರಿಸ್ಥಿತಿಯನ್ನು ಎದುರಿಸಿ ಬೆಳೆಯಲು ಸಾಮರ್ಥ್ಯವಿರುವ ಬೆಳೆಗಳನ್ನು ಬೆಳೆಸುತ್ತಾರೆ ಮತ್ತು ಅವುಗಳ ಬೀಜಗಳನ್ನು ತಮ್ಮದೇ ಆದ ರೀತಿಯಲ್ಲಿ ಸಂರಕ್ಷಿಸುತ್ತಾರೆ. ಆರೋಗ್ಯ ಸಂರಕ್ಷಣೆಗಾಗಿ ವಿಶೇಷ ನೈಸರ್ಗಿಕ ಸಂಪನ್ಮೂಲಗಳನ್ನು ಉಪಯೋಗಿಸುತ್ತಾರೆ. ಬುಡಕಟ್ಟು ಸಮಾಜಗಳ ಕಟ್ಟಳೆಗಳು ಮತ್ತು ಮೌಖಿಕ ಚರಿತ್ರೆಗಳು ಭಾರತೀಯ ಸಂಸ್ಕೃತಿಗೆ ಅಮೂಲ್ಯವಾದ ಕೊಡುಗೆಗಳನ್ನು ನೀಡುತ್ತವೆ.



ಶ್ರೀಮತಿ ಲಕ್ಷ್ಮಿಕುಟ್ಟಿ

*(ಸಾಂಪ್ರದಾಯಿಕ ಔಷಧ ಚಿಕಿತ್ಸಾ ರೀತಿಗೆ 2018 ರಲ್ಲಿ ಪದ್ಮಶ್ರೀ ಪ್ರಶಸ್ತಿಯನ್ನು ಭಾರತದ ರಾಷ್ಟ್ರಪತಿಗಳಾದ ಶ್ರೀ. ರಾಮ್‌ನಾಥ್ ಕೋವಿಂದ್ ಅವರಿಂದ ಸ್ವೀಕರಿಸುತ್ತಿದ್ದಾರೆ)*



**ಶ್ರೀ ಚೆರುವಯಲ್ ರಾಮನ್**

*(ಸಾಂಪ್ರದಾಯಿಕ ಭತ್ತದ ತಳಿಗಳ ಸಂರಕ್ಷಣೆ ಮತ್ತು ಪ್ರಚಾರಕ್ಕಾಗಿ 2023 ರಲ್ಲಿ ಪದ್ಮಶ್ರೀ ಪ್ರಶಸ್ತಿಯನ್ನು ಭಾರತದ ರಾಷ್ಟ್ರಪತಿಗಳಾದ ಶ್ರೀಮತಿ ದ್ರೌಪದಿ ಮುರ್ಮು ಅವರಿಂದ ಸ್ವೀಕರಿಸುತ್ತಿದ್ದಾರೆ)*

## 2. ಕಲೆ ಮತ್ತು ಸಂಸ್ಕೃತಿ

ಬುಡಕಟ್ಟು ಸಮಾಜಗಳು ತಮ್ಮ ವಿಶಿಷ್ಟ ಭಾಷೆ, ಕಲಾಪ್ರಕಾರಗಳು, ಆಚರಣೆಗಳು, ಸಂಗೀತ, ನೃತ್ಯ ಮೊದಲಾದವುಗಳ ಮೂಲಕ ಭಾರತೀಯ ಸಂಸ್ಕೃತಿಯನ್ನು ಪೋಷಿಸುತ್ತಾರೆ. ಗ್ರಾಮ-ನಗರ ಸಮಾಜಗಳಂತೆಯೇ ಭಾರತದ 'ವಿವಿಧತೆಯಲ್ಲಿ ಏಕತೆ' ಎಂಬ ಆಶಯವನ್ನು ಬುಡಕಟ್ಟು ಸಮಾಜವೂ ಬಲಪಡಿಸುತ್ತದೆ. ಬುಡಕಟ್ಟು ಕಲೆಗಳು (ವರ್ಲಿ ಚಿತ್ರಕಲೆಯಂತಹ) ಮತ್ತು ಸಾಂಸ್ಕೃತಿಕ ಉತ್ಸವಗಳು, ಜಾಗತಿಕ ಮಟ್ಟದಲ್ಲಿ ಆಕರ್ಷಿಸಲ್ಪಡುವುದಲ್ಲದೆ ಪ್ರವಾಸೋದ್ಯಮಕ್ಕೆ ಪ್ರೋತ್ಸಾಹವನ್ನೀಯುತ್ತವೆ.


ವರ್ಲಿ ಚಿತ್ರಕಲೆ



ಇರುಳ ನೃತ್ಯ


ಪಣಿಯ ನೃತ್ಯ


ಮಲಪ್ಪುಲಯಾಟಂ


ಪಳಿಯ ನೃತ್ಯ


ಮಂಗಲಂ ಕಳಿ

ಬುಡಕಟ್ಟು ಕಲೆಗಳು

## 3. ಸುಸ್ಥಿರ ಜೀವನ

ಬುಡಕಟ್ಟು ಸಮಾಜದ ಜನರು ಪ್ರಕೃತಿಯೊಂದಿಗೆ ಹೊಂದಾಣಿಕೆಯಿಂದ ಜೀವಿಸುತ್ತಾರಲ್ಲದೆ ಕಾಡು, ನೀರು ಸೇರಿದಂತೆ ಭೂಮಿಯಲ್ಲಿರುವ ಎಲ್ಲಾ ಪ್ರಾಕೃತಿಕ ಸಂಪನ್ಮೂಲಗಳನ್ನು ಪರಿಸರ ಸ್ನೇಹಿಯಾಗಿ ಜೀವನದ ಭಾಗವನ್ನಾಗಿಸುತ್ತಾರೆ. ಈ ಸಮಾಜದ ಸಂಪ್ರದಾಯಗಳು ಪರಿಸರ ಸಂರಕ್ಷಣೆ ಮತ್ತು ಸಂಪನ್ಮೂಲ ನಿರ್ವಹಣೆಗೆ ಅತ್ಯುತ್ತಮ ಮಾದರಿಗಳನ್ನು ನೀಡುತ್ತವೆ. ಅರಣ್ಯಗಳ ಕುರಿತಾದ ಬುಡಕಟ್ಟು ಸಮಾಜದ ಜ್ಞಾನವು ಇಕೋ-ಟೂರಿಸಂ (ಪರಿಸರ ಪ್ರವಾಸೋದ್ಯಮ) ವಲಯದ ಅಭಿವೃದ್ಧಿಗೆ ಉತ್ತೇಜನ ನೀಡುತ್ತದೆ. ಬುಡಕಟ್ಟು ಸಮಾಜದ ಜ್ಞಾನವು ನಮ್ಮ ದೇಶದ ಜ್ಞಾನಾಧಾರಿತ ಆರ್ಥಿಕ ವ್ಯವಸ್ಥೆಗೆ ಹೇಗೆ ಪ್ರಯೋಜನಕಾರಿ ಎಂಬುದಕ್ಕೆ ಇದು ಒಂದು ಉದಾಹರಣೆಯಾಗಿದೆ.

## 4. ಅಸಮಾನತೆಗೆದುರಾದ ಪ್ರತಿಭಟನೆಗಳು



**ಸಂತಾಳ ದಂಗೆ (1855-1856)**

ಕಾರಣಗಳು:
ಭೂಮಾಲೀಕರ, ಲೇವಾದೇವಿಗಾರರ ಮತ್ತು ಬ್ರಿಟಿಷ್ ಅಧಿಕಾರಿಗಳ ಶೋಷಣೆ; ಪೂರ್ವಜರಿಂದ ಲಭಿಸಿದ ಭೂಮಿಯಿಂದ ಬಲವಂತದ ಒಕ್ಕಲೆಬ್ಬಿಸುವಿಕೆ.

ಸ್ಥಳ:
ಇಂದಿನ ಬಂಗಾಳ, ಜಾರ್ಖಂಡ್, ಒಡಿಶಾ, ಬಿಹಾರವನ್ನು ಒಳಗೊಂಡಿರುವ ಪ್ರದೇಶಗಳು.

ಪ್ರಮುಖ ನೇತಾರರು:
ಸಿದ್ದು ಮುರ್ಮು, ಕಾನ್ಹು ಮುರ್ಮು



**ಮುಂಡಾ ದಂಗೆ (1899-1900) (ಉಲ್ಗುಲಾನ್ ಚಳುವಳಿ)**

ಕಾರಣಗಳು :
ಭೂಮಾಲೀಕರಿಂದ ಮುಂಡಾ ಬುಡಕಟ್ಟು ಸಮುದಾಯಗಳ ಶೋಷಣೆ ಮತ್ತು ದಬ್ಬಾಳಿಕೆ. ಭೂಮಾಲೀಕತ್ವದಲ್ಲಿ ಬ್ರಿಟಿಷರ ಹಸ್ತಕ್ಷೇಪ.

ಸ್ಥಳ :
ಜಾರ್ಖಂಡ್ ಒಳಗೊಂಡ ಛೋಟಾನಾಗಪುರ ಪ್ರದೇಶಗಳು.

ಪ್ರಮುಖ ನೇತಾರ :
ಬಿರ್ಸಾ ಮುಂಡ



**ಕುರುಚಿಯಾ, ಕುರುಂಬ ದಂಗೆ (1812)**

ಕಾರಣಗಳು :
ಅತಿಯಾದ ತೆರಿಗೆ, ಸ್ಥಳೀಯ ಆಡಳಿತದಲ್ಲಿ ಬ್ರಿಟಿಷರ ಹಸ್ತಕ್ಷೇಪ, ಪರಂಪರಾಗತ ಭೂಮಿಯಿಂದ ಬಲವಂತದ ಒಕ್ಕಲೆಬ್ಬಿಸುವಿಕೆ, ಭೂಮಿಯನ್ನು ಮುಟ್ಟುಗೋಲು ಹಾಕಿದ್ದು

ಸ್ಥಳ :
ವಯನಾಡು (ಕೇರಳ)

ಪ್ರಮುಖ ನೇತಾರ :
ರಾಮನ್ ನಂಬಿ

ಇತಿಹಾಸ ವಸ್ತು ಸಂಗ್ರಹಾಲಯದಲ್ಲಿ ಪ್ರದರ್ಶಿಸಲಾದ, ಭಾರತದ ಪ್ರಮುಖ ಬುಡಕಟ್ಟು ದಂಗೆಗಳ ಕುರಿತಾದ ಸಚಿತ್ರ ವಿವರಣೆಗಳನ್ನು ಗಮನಿಸಿರಿ. ಭಾರತದ ಬುಡಕಟ್ಟು ಸಮಾಜಗಳು ಅಸಮಾನತೆ ಮತ್ತು ದಬ್ಬಾಳಿಕೆಗಳಿಗೆ ಎದುರಾಗಿ ಅನೇಕ ಪ್ರತಿರೋಧಗಳನ್ನೊಡ್ಡಿ ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿವೆ.

ಬುಡಕಟ್ಟು ಸಮಾಜಗಳ ಸಂಸ್ಕೃತಿ, ಪರಿಸರ ಜ್ಞಾನ, ಅಸಮಾನತೆಗೆದುರಾದ ಪ್ರತಿಭಟನೆ ಮೊದಲಾದವು ಭಾರತದ ಸಾಮಾಜಿಕ ವ್ಯವಸ್ಥೆಯನ್ನು ಪೋಷಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಬುಡಕಟ್ಟು ಸಮಾಜಗಳು ಭಾರತದ ಪ್ರಾಕೃತಿಕ ಸಂಪನ್ಮೂಲ ಮತ್ತು ಸಾಂಸ್ಕೃತಿಕ ಶ್ರೀಮಂತಿಕೆಯ ಒಡೆತನವನ್ನು ಹೊಂದಿದೆ. ಶಿಕ್ಷಣ, ಆರೋಗ್ಯ ಮತ್ತು ಸಾಮಾಜಿಕ – ಆರ್ಥಿಕ ಅಭಿವೃದ್ಧಿ ಮೊದಲಾದವುಗಳಲ್ಲಿ ಬುಡಕಟ್ಟು ಸಮಾಜಗಳನ್ನು ಸಬಲೀಕರಣಗೊಳಿಸುವ ಮೂಲಕ ದೇಶದ ರಾಷ್ಟ್ರೀಯ ಭಾವೈಕ್ಯವನ್ನು ಮತ್ತಷ್ಟು ಬಲಗೊಳಿಸಬಹುದು.

ಭಾರತದ ಸಾಮಾಜಿಕ ವ್ಯವಸ್ಥೆಯನ್ನು ನೆಲೆನಿಲ್ಲಿಸುವಲ್ಲಿ ಬುಡಕಟ್ಟು ಸಮಾಜದ ಪಾತ್ರವನ್ನು ವಿವರಿಸುವ ಅಂಕಿ-ಅಂಶಗಳು, ಚಿತ್ರಗಳು ಮತ್ತು ಲಘು ವಿವರಣೆಗಳನ್ನೊಳಗೊಂಡ ಇನ್ ಫೊಗ್ರಾಫಿಕ್ಸ್ ತಯಾರಿಸಿರಿ.

## V. ಗ್ರಾಮ – ನಗರ ಸಮಾಜಗಳು (Rural-Urban Societies)



ಆರವ್, ಪಶ್ಚಿಮ ಬಂಗಾಳದ ಒಂದು ಗ್ರಾಮದಲ್ಲಿ ವಾಸಿಸುತ್ತಾನೆ. ಬೆಟ್ಟಗಳೆಡೆಯಲ್ಲಿರುವ ಆ ಗ್ರಾಮದ ಪ್ರಾಕೃತಿಕ ಸೌಂದರ್ಯವು ಎಲ್ಲರನ್ನೂ ಮೋಡಿ ಮಾಡುವಂತಿದೆ. ಗ್ರಾಮ ನಿವಾಸಿಗಳಲ್ಲಿ ಹೆಚ್ಚಿನವರು ಕೃಷಿಕರಾಗಿದ್ದಾರೆ. ಆದುದರಿಂದ ಅಲ್ಲಿ ಧಾರಾಳ ಕೃಷಿ ತೋಟಗಳಿವೆ. ಆರವ್ ಪ್ರತಿದಿನವೂ ಹೆತ್ತವರಿಗೆ ಕೃಷಿ ಕೆಲಸಗಳಲ್ಲಿ ಸಹಾಯ ಮಾಡಿ ಶಾಲೆಗೆ ತೆರಳುತ್ತಿದ್ದನು. ಮನೆಯಿಂದ ಸ್ವಲ್ಪ ದೂರದಲ್ಲಿ ಅವನ ಶಾಲೆಯಿದೆ. ಶಾಲೆಗೆ ತಲುಪಲು ಅನೇಕ ಓಣಿಗಳನ್ನು ಮತ್ತು ರಸ್ತೆಗಳನ್ನು ದಾಟಬೇಕಿದೆ. ಕೆಲವೇ ತರಗತಿ ಕೊಠಡಿಗಳಿರುವ ಅವನ ಶಾಲೆಯಲ್ಲಿ ಅಗತ್ಯಕ್ಕೆ ಪುಸ್ತಕಗಳೋ ಇಂಟರ್ನೆಟ್ ಸೌಲಭ್ಯಗಳೋ ಇಲ್ಲದೆ ಸೀಮಿತ ಸೌಲಭ್ಯಗಳು ಮಾತ್ರವಿದೆ. ಅವನ ಗ್ರಾಮದ ಪರಿಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ. ಗ್ರಾಮಸ್ಥರಿಗೆ ಆಸ್ಪತ್ರೆಗೆ ತೆರಳಲು ಬಹಳ ದೂರ ಸಂಚರಿಸಬೇಕು. ಇಷ್ಟೆಲ್ಲಾ ಅನಾನುಕೂಲತೆಗಳಿದ್ದರೂ, ಆರವ್‌ಗೆ ತನ್ನ ಹಳ್ಳಿಯೆಂದರೆ ತುಂಬಾ ಪ್ರೀತಿ. ಗ್ರಾಮಸ್ಥರೆಲ್ಲರೂ ಅಲ್ಲಿ ಬಹಳ ಆಪ್ತರಾಗಿ ಪ್ರೀತಿಯಿಂದ ಒಂದು ಕುಟುಂಬದಂತೆ ಪರಸ್ಪರ ಸಹಕಾರದಿಂದ ಜೀವಿಸುತ್ತಾರೆ.



ಕಲ್ಕತ್ತಾ ನಗರದಲ್ಲಿ ವಾಸಿಸುವ ಮಾಯಾಳ ಜೀವನವು ಇದಕ್ಕಿಂತ ಸಂಪೂರ್ಣವಾಗಿ ಭಿನ್ನವಾಗಿತ್ತು. ಜನದಟ್ಟಣೆಯ ಹಾದಿಗಳು ಮತ್ತು ಸಾಲುಸಾಲಾಗಿ ಸಂಚರಿಸುವ ವಾಹನಗಳಿಂದ ಕಿಕ್ಕಿರಿದ ರಸ್ತೆಗಳು ಅಲ್ಲಿನ ಸಾಮಾನ್ಯ ದೃಶ್ಯವಾಗಿದೆ. ನಗರವು ಯಾವಾಗಲೂ ಗದ್ದಲದಿಂದ ಕೂಡಿದೆ. ಎಲ್ಲರದ್ದೂ ಸದಾ ಬಿಡುವಿಲ್ಲದ ಜೀವನ. ಬೆಳಗ್ಗೆ ತಂದೆ ತಾಯಿಯಲ್ಲಿ ಸರಿಯಾಗಿ ಮಾತನಾಡಲೂ ಅವಳಿಗೆ ಸಾಧ್ಯವಾಗುವುದಿಲ್ಲ. ಅವರೂ ಕಚೇರಿಗೆ ತೆರಳುವ ಗಡಿಬಿಡಿಯಲ್ಲಿರುತ್ತಾರೆ. ನಗರವು ದೊಡ್ಡ ಕಟ್ಟಡಗಳು, ಕಚೇರಿ ಸಂಕೀರ್ಣಗಳು, ಕೈಗಾರಿಕಾ ಕೇಂದ್ರಗಳು ಸೇರಿದಂತೆ ಆಧುನಿಕ ಸೌಲಭ್ಯಗಳಿಂದ ಕೂಡಿದೆ. ಮಾಯಾಳು ಬಹಳ

ವಿಸ್ತಾರವಾಗಿರುವ ಇಂಟರ್ನೆಟ್ ಸೌಲಭ್ಯದಿಂದೊಡಗೂಡಿದ ಸ್ಮಾರ್ಟ್ ಕ್ಲಾಸ್ ರೂಂಗಳಿರುವ ಮತ್ತು ವಿಶಾಲವಾದ ಗ್ರಂಥಾಲಯವಿರುವ ಶಾಲೆಯಲ್ಲಿ ಕಲಿಯುತ್ತಾಳೆ. ಇಷ್ಟೊಂದು ಸೌಕರ್ಯಗಳು ಆ ನಗರದಲ್ಲಿದ್ದರೂ ಜನರ ನಡುವಿನ ಸಾಮಾಜಿಕ ಸಂಬಂಧಗಳಲ್ಲಿ ಅಂತರವಿದೆ. ಮಾಯಾಳಿಗೆ ತನ್ನ ನೆರೆಕರೆಯವರ ಪರಿಚಯ ಕೂಡಾ ಸರಿಯಾಗಿ ಇಲ್ಲ. ಬಿಡುವಿಲ್ಲದ ಜೀವನದ ಹೊರತಾಗಿಯೂ ನಗರವಾಸಿಗಳು ಉದ್ಯಾನಗಳು ಮತ್ತು ಮೈದಾನಗಳಂತಹ ಸ್ಥಳಗಳಲ್ಲಿ ಪರಸ್ಪರ ಸಂವಹನ ನಡೆಸಲು ಮತ್ತು ಸಂಬಂಧಗಳನ್ನು ಬೆಳೆಸಲು ಪ್ರಯತ್ನಿಸುತ್ತಾರೆ.

ಆರವ್ ಮತ್ತು ಮಾಯಾಳ ಕುರಿತಾದ ವಿವರಣೆಯನ್ನು ಓದಿದಿರಲ್ಲವೇ. ಇಬ್ಬರೂ ಒಂದೇ ರಾಜ್ಯದಲ್ಲಿ ವಾಸಿಸುವವರಾಗಿದ್ದರೂ ಅವರ ವಾಸಸ್ಥಳಗಳಿಗೆ ತಮ್ಮದೇ ಆದ ಕೆಲವು ವಿಶೇಷತೆಗಳಿರುವುದನ್ನು ಗಮನಿಸಿದಿರಲ್ಲವೇ. ಅವು ಯಾವುವೆಂದು ಕೆಳಗಿನ ಪಟ್ಟಿಯಲ್ಲಿ ಬರೆಯಿರಿ.

| ಗ್ರಾಮ ಸಮಾಜ | ನಗರ ಸಮಾಜ |
|---|---|
| • ಕೃಷಿ | • ಕೈಗಾರಿಕೆ |
| • | • |
| • | • |

ಭಾರತದಲ್ಲಿ ಪುರಾತನ ಕಾಲದಿಂದಲೇ ಸ್ವಯಂ ಆಡಳಿತವಿರುವ ಗ್ರಾಮಗಳಿದ್ದುವು. ಗ್ರಾಮ ಸಮಾಜಗಳು ಕೃಷಿ ಮತ್ತು ಗುಡಿಕೈಗಾರಿಕೆಗಳನ್ನು ಆಧರಿಸಿರುತ್ತವೆ. ನಿಕಟ ಸಂಬಂಧಗಳು ಮತ್ತು ಸಾಂಪ್ರದಾಯಿಕ ಜೀವನ ವಿಧಾನಗಳು ಈ ಸಮಾಜದ ವಿಶೇಷತೆಗಳಾಗಿವೆ. ಗ್ರಾಮ ಸಮಾಜಗಳು ಭಾರತದ ಕೃಷಿ ಆಧಾರಿತ ಆರ್ಥಿಕ ವ್ಯವಸ್ಥೆಯ ಬೆನ್ನೆಲುಬಾಗಿವೆ.

ವೈವಿಧ್ಯಮಯವಾದ ಕೈಗಾರಿಕೆಗಳು, ವಿವಿಧ ಸೇವೆಗಳು, ಆಧುನಿಕ ಮೂಲಸೌಕರ್ಯಗಳು ಮೊದಲಾದವುಗಳೆಲ್ಲಾ ನಗರ ಸಮಾಜದ ವಿಶೇಷತೆಗಳಾಗಿವೆ. ಹಳ್ಳಿಗಳಿಗೆ ಹೋಲಿಸಿದರೆ, ವೈವಿಧ್ಯಮಯ ಮಾನವ ಸಮೂಹಗಳು ಮತ್ತು ಬಿಡುವಿಲ್ಲದ ಜೀವನ ಶೈಲಿಯು ನಗರ ಜೀವನದ ವಿಶೇಷತೆಗಳಾಗಿವೆ.



ಪಂಜಾಬಿನ ಗ್ರಾಮವೊಂದರಲ್ಲಿ ವಾಸಿಸುವ ಜಬೀರ್ ಸಿಂಗ್ ಮತ್ತು ಅವರ ಕುಟುಂಬದ ಪ್ರಧಾನ ಉದ್ಯೋಗವು ಗೋಧಿ ಕೃಷಿಯಾಗಿದೆ. ಗ್ರಾಮದಲ್ಲಿ ಉತ್ಪಾದಿಸುವ ಗೋಧಿಯನ್ನು ನಗರದಲ್ಲಿ ಮಾರಾಟ ಮಾಡುತ್ತಾರೆ.



ನಗರದ ಟೆಕ್ನೋ ಪಾರ್ಕ್ ನಲ್ಲಿ ಕೆಲಸ ಮಾಡುವ ರಿನು ಮತ್ತು ಅವನ ಗೆಳೆಯರು ವಿವಿಧ ಬೆಳೆಗಳಿಗೆ ಸೂಕ್ತವಾದ ಮಣ್ಣನ್ನು ಗುರುತಿಸಲು ಮತ್ತು ರೈತರಿಗೆ ಸಹಾಯ ಮಾಡಲು ಮೊಬೈಲ್ ಆಪ್ಲಿಕೇಷನ್ ಅಭಿವೃದ್ಧಿಪಡಿಸಿದರು. ಇದು ಗ್ರಾಮಗಳ ಕೃಷಿ ವಿಧಾನಗಳನ್ನು ಉತ್ತಮಗೊಳಿಸಲು ಮತ್ತು ಹೆಚ್ಚಿನ ಉತ್ಪಾದನೆಯನ್ನು ಖಚಿತಪಡಿಸಲು ಸಹಾಯಕವಾಯಿತು.

ರಿನು ಮತ್ತು ಜಬೀರ್ ಸಿಂಗ್‌ನ ಉದ್ಯೋಗಗಳನ್ನು ಗಮನಿಸಿದಿರಲ್ಲವೆ? ಅವುಗಳ ವಿಶೇಷತೆಗಳೇನು? ಇವರ ಉದ್ಯೋಗಗಳು ಪರಸ್ಪರ ಅವಲಂಬಿತವಾಗಿವೆಯೆ? ಹೇಗೆ?

ನಮ್ಮ ಕೃಷಿವಲಯಕ್ಕೆ ಪ್ರಯೋಜನಕಾರಿಯಾಗಿರುವ ಸರಕಾರದ ಮೊಬೈಲ್ ಆಪ್‌ಗಳು ಯಾವುವು?

ಆಹಾರವಸ್ತುಗಳಿಗೆ ಅಗತ್ಯವಾದ ಕಚ್ಚಾವಸ್ತುಗಳಿಗಾಗಿ ನಗರಗಳು ಗ್ರಾಮಗಳನ್ನು ಅವಲಂಬಿಸುವಾಗ, ತಂತ್ರಜ್ಞಾನಗಳು ಮತ್ತು ಮಾರುಕಟ್ಟೆಗಳಿಗಾಗಿ ಗ್ರಾಮಗಳು ನಗರಗಳನ್ನು ಅವಲಂಬಿಸುತ್ತವೆ. ನಗರಗಳ ಆಧುನಿಕ ಒಲವುಗಳು ಗ್ರಾಮಗಳ ಮೇಲೆ ಪ್ರಭಾವ ಬೀರುವುದಿದೆ. ನಗರಗಳಿಗೆ ಹೋಲಿಸಿದರೆ, ಗ್ರಾಮಗಳು ಪರಸ್ಪರ ಸಂಬಂಧಗಳಿಗೆ ಮತ್ತು ಸಾಮಾಜಿಕ ಸಹಕಾರಕ್ಕೆ ಹೆಚ್ಚು ಒತ್ತು ನೀಡುತ್ತವೆ.

ಗ್ರಾಮ–ನಗರ ವಲಸೆಗಳು ಎರಡು ಸಮಾಜಗಳನ್ನು ಪರಸ್ಪರ ಜೋಡಿಸುತ್ತವೆ. ಗ್ರಾಮಗಳಿಗೆ ಹೋಲಿಸಿದರೆ ನಗರ ಸಮಾಜಗಳು ಕೈಗಾರಿಕೀಕರಣಕ್ಕೆ ಪ್ರೋತ್ಸಾಹವನ್ನೀಯುತ್ತವೆ ಮತ್ತು ನೂತನ ಉದ್ಯೋಗವಕಾಶಗಳನ್ನು ಒದಗಿಸುತ್ತವೆ. ನಗರಗಳು ತಂತ್ರಜ್ಞಾನಗಳನ್ನು ಮತ್ತು ಜಾಗತಿಕ ಸಂಬಂಧಗಳನ್ನು ಆಧುನೀಕರಣಗೊಳಿಸುತ್ತವೆ. ನಗರ ಜೀವನವು ವಿಭಿನ್ನ ಸಂಸ್ಕೃತಿಗಳ ಸಮ್ಮಿಶ್ರಣವಾದುದರಿಂದ ಸಾಂಸ್ಕೃತಿಕ ವಿನಿಮಯ (Cultural Exchange) ವನ್ನು ಪ್ರೋತ್ಸಾಹಿಸುತ್ತದೆ.

ಗ್ರಾಮಗಳು ಮತ್ತು ನಗರಗಳು ಪರಸ್ಪರ ಅವಲಂಬಿಸುವ ಮೂಲಕ ಸಮತೋಲನವನ್ನು ಕಾಪಾಡುವುದರೊಂದಿಗೆ ಭಾರತದ ಸಾಮಾಜಿಕ ವ್ಯವಸ್ಥೆಯನ್ನು ಸುದೃಢಗೊಳಿಸುತ್ತದೆ.

### ಗ್ರಾಮೀಣ – ನಗರ ನಿರಂತರತೆ (Rural-Urban Continuum)

ಗ್ರಾಮೀಣ – ನಗರ ನಿರಂತರತೆ ಯೆಂಬುದು ಗ್ರಾಮ ಸಮುದಾಯಗಳು ನಗರ ಸಮುದಾಯಗಳಾಗಿ ಪರಿವರ್ತನೆ ಯಾಗುವುದಕ್ಕೆ ಸಂಬಂಧಿಸಿದ ಪರಿಕಲ್ಪನೆಯಾಗಿದೆ. ಗ್ರಾಮ ಮತ್ತು ನಗರದ ಆರಂಭ ಮತ್ತು ಕೊನೆಯನ್ನು ಸ್ಪಷ್ಟವಾಗಿ ಗುರುತಿಸಲು ಸಾಧ್ಯವಾಗುವ ರೀತಿಯಲ್ಲಿ ಇವೆರಡರ ಮಧ್ಯೆ ಒಂದು ಮೇರೆಯು ನಿಶ್ಚಯಿಸಲ್ಪಟ್ಟಿಲ್ಲ, ಎಂಬ ಸ್ಥಿತಿವಿಶೇಷತೆಯು ಗ್ರಾಮೀಣ – ನಗರ ನಿರಂತರತೆಯಲ್ಲಿದೆಯೆಂದು ಮ್ಯಾಕ್ ಐವರ್ ಅಭಿಪ್ರಾಯಪಡುತ್ತಾರೆ. ಕೇರಳ ದಲ್ಲಿ ಇಂತಹ ಗ್ರಾಮೀಣ – ನಗರ ನಿರಂತರತೆಯು ಅಸ್ತಿತ್ವದಲ್ಲಿರುವುದನ್ನು ಕಾಣಬಹುದು.

ಗ್ರಾಮ – ನಗರ ಸಮುದಾಯಗಳ ಪರಸ್ಪರ ಅವಲಂಬನೆಯನ್ನು ಬಿಂಬಿಸುವ ಚಿತ್ರಗಳು ಮತ್ತು ವಿವರಣೆಗಳನ್ನು ಸೇರಿಸಿ ಒಂದು ಡಿಜಿಟಲ್ ಪ್ರಸೆಂಟೇಶನ್ ತಯಾರಿಸಿರಿ.

## ವೈವಿಧ್ಯದಿಂದ ಬಹುತ್ವದೆಡೆಗೆ

ನಮ್ಮ ದೇಶವು ಧರ್ಮ, ಜಾತಿ, ಗೋತ್ರ, ಪ್ರದೇಶ, ಭಾಷೆ ಮೊದಲಾದವುಗಳಲ್ಲಿ ವೈವಿಧ್ಯದಿಂದ ಕೂಡಿದ ನಾಡಾಗಿದೆಯೆಂದು ನಾವು ಅರಿತುಕೊಂಡೆವಲ್ಲವೇ. ಈ ವೈವಿಧ್ಯಗಳನ್ನು ಬಹುತ್ವದ ಮೂಲಕ ಸಮೀಪಿಸಿದಾಗ ಮಾತ್ರ ದೇಶದ ಸಾಮಾಜಿಕ ವ್ಯವಸ್ಥೆಯು ಸುಸ್ಥಿರವಾಗಿ ಉಳಿಯಲು ಸಾಧ್ಯ. ಹಲವು ಸಂದರ್ಭಗಳಲ್ಲಿ 'ವೈವಿಧ್ಯ' (Diversity) ಮತ್ತು 'ಬಹುತ್ವ' (Pluralism) ಎಂಬೀ ಪದಗಳನ್ನು ಒಂದೇ ಅರ್ಥದಲ್ಲಿ ಉಪಯೋಗಿಸುವುದನ್ನು ನೀವು ಗಮನಿಸಿದ್ದೀರಾ?



ಜೈವವೈವಿಧ್ಯ



ಆರ್ಕೆಸ್ಟ್ರಾ

ಮೇಲಿನ ಚಿತ್ರಗಳನ್ನು ಗಮನಿಸಿರಿ.

'ಜೈವವೈವಿಧ್ಯ' ಎಂಬುದರಿಂದ ವಿಭಿನ್ನ ರೀತಿಯ ಅನೇಕ ಜೀವಜಾಲಗಳು ಪ್ರಕೃತಿಯಲ್ಲಿವೆ ಎಂದು ಅರ್ಥೈಸಿಕೊಳ್ಳಬಹುದು. ವೈವಿಧ್ಯ ಎಂದರೆ ವಿಭಿನ್ನವಾದುದು ಎಂದರ್ಥ. ಆದರೆ ಬಹುತ್ವ ಎಂಬ ಪದದಿಂದ ವಿಭಿನ್ನವಾದ ವಿಷಯಗಳು ಒಂದಾಗಿ ಕಾರ್ಯನಿರ್ವಹಿಸುವುದೆಂದು ಅರ್ಥೈಸಿಕೊಳ್ಳಬಹುದು. ಒಂದು ಆರ್ಕೆಸ್ಟ್ರಾದಲ್ಲಿ ಅನೇಕ ಸಂಗೀತೋಪಕರಣಗಳಿವೆ ಎಂಬುದು ಅದರ ವಿಭಿನ್ನತೆಯಾಗಿ ಲೆಕ್ಕಹಾಕಬಹುದು. ಆದರೆ ಅವುಗಳನ್ನು ಸುಂದರವಾದ ಸಂಗೀತವನ್ನು ಹೊರಡಿಸುವ ರೀತಿಯಲ್ಲಿ ನೈಪುಣ್ಯದಿಂದ ಸಂಯೋಜಿಸಿದಾಗ (Compose) ಬಹುತ್ವವುಂಟಾಗುತ್ತದೆ.

ವಿಭಿನ್ನ ಸಾಮಾಜಿಕ ಗುಂಪುಗಳು, ಧರ್ಮಗಳು, ಮತ್ತು ವಂಶಗಳಲ್ಲಿ ಒಳಗೊಂಡ ಜನರು ಒಂದು ಸಮಾಜದಲ್ಲಿ ಒಟ್ಟಾಗಿ ವಾಸಿಸುವವರಾದರೂ ಪ್ರತಿಯೊಬ್ಬರೂ ಅವರವರ ಸಂಪ್ರದಾಯಗಳು ಮತ್ತು ಹಿತಾಸಕ್ತಿಗಳನ್ನು ಅನುಸರಿಸುವ ಒಂದು ಸನ್ನಿವೇಶವನ್ನು ಬಹುತ್ವವು ಹೊಂದಿದೆ.

ಸಮಾಜದ ವಿವಿಧತೆಯೆಂದರೆ, ಸಮಾಜದೊಳಗೆ ಅಸ್ತಿತ್ವದಲ್ಲಿರುವ ವ್ಯತ್ಯಾಸಗಳಾಗಿವೆ. ಇದು ಸಾಂಸ್ಕೃತಿಕ, ಧಾರ್ಮಿಕ, ಭಾಷಿಕ, ಜನಾಂಗೀಯ ಮತ್ತು ಸಾಮಾಜಿಕ ವ್ಯತ್ಯಾಸಗಳನ್ನು ಒಳಗೊಂಡಿದೆ. ಅಂತಹ ವಿಭಿನ್ನತೆಗಳ ನಡುವೆ ಪರಸ್ಪರ ಸಂಬಂಧ ಅಥವಾ ಪರಸ್ಪರ ಗೌರವ ಇರಬೇಕೆಂದಿಲ್ಲ. ಆದರೆ ಬಹುತ್ವವು ಈ ವಿಭಿನ್ನತೆಗಳಿಗೆ ಅತೀತವಾಗಿ ವಿವಿಧ ಗುಂಪುಗಳ ನಡುವಿನ ಸಂವಹನ, ಪರಸ್ಪರ ಗೌರವ, ಪರಸ್ಪರ ಪ್ರೀತಿ ಮತ್ತು ಪರಸ್ಪರ ಸಾಮರಸ್ಯವನ್ನು ಪ್ರೋತ್ಸಾಹಿಸುತ್ತದೆ. 'ಬಹುತ್ವವು' ಸಮಾಜದಲ್ಲಿನ ವ್ಯತ್ಯಾಸಗಳು, ವಿಭಿನ್ನತೆಗಳು ಮತ್ತು ಬಿಕ್ಕಟ್ಟುಗಳನ್ನು ಸೃಷ್ಟಿಸುವುದಿಲ್ಲವೆಂದೂ ಬದಲಾಗಿ ಏಕತೆ ಮತ್ತು ಸಹಬಾಳ್ವೆಗೆ ಕಾರಣವಾಗುತ್ತದೆಯೆಂದೂ ಖಚಿತಪಡಿಸುತ್ತದೆ.

ವಿಭಿನ್ನತೆಯು ಸ್ವಾಭಾವಿಕವಾಗಿ ಅಸ್ತಿತ್ವದಲ್ಲಿರುವುದಾದರೆ, ಬಹುತ್ವವು ಪ್ರಜ್ಞಾಪೂರ್ವಕವಾಗಿ ಸೃಷ್ಟಿಸಬೇಕಾದುದರಲ್ಲೊಂದಾಗಿದೆ. ಆದುದರಿಂದಲೇ ಬಹುತ್ವವು ಪ್ರಜ್ಞಾಪೂರ್ವಕವಾದ ಪ್ರಕ್ರಿಯೆಯ ಸೃಷ್ಟಿಯಾಗಿದೆ ಎಂದು ಪರಿಗಣಿಸಲಾಗುತ್ತದೆ.

'ಭಾರತೀಯ ಸಾಮಾಜಿಕ ವ್ಯವಸ್ಥೆ' ಎಂಬ ವಿಷಯದ ಆಧಾರದಲ್ಲಿ ತರಗತಿಯಲ್ಲೊಂದು 'ರಸಪ್ರಶ್ನೆ'ಯನ್ನು ನಡೆಸಲು ಬೇಕಾದ ಪ್ರಶ್ನಾವಳಿಯನ್ನು ತಯಾರಿಸಿರಿ.

## ಬಹುತ್ವವು ಎದುರಿಸುವ ಸವಾಲುಗಳು

ಜಾತ್ಯತೀತತೆಗೆ ಅಡ್ಡಿಯಾಗುವ ಘಟಕಗಳನ್ನು ತಡೆಗಟ್ಟಬೇಕು

ಭಾಷಾ ಅಲ್ಪಸಂಖ್ಯಾತರ ಹಿತಾಸಕ್ತಿಗಳನ್ನು ಸಂರಕ್ಷಿಸಬೇಕು

ಗಣಿಗಾರಿಕೆ ಮತ್ತು ಒಕ್ಕಲೆಬ್ಬಿಸುವಿಕೆ: ಪೂರ್ವಜರ ಭೂಮಿ ಕಳೆದುಕೊಳ್ಳುವುದಕ್ಕೆದುರಾಗಿ ಬುಡಕಟ್ಟು ಜನರ ಪ್ರತಿಭಟನೆ

ಭಾರತದ ಬಹುತ್ವಕ್ಕೆ ಸವಾಲಾಗುವ ಕೆಲವು ಸಮಸ್ಯೆಗಳನ್ನು ವಾರ್ತಾಶೀರ್ಷಿಕೆಯಲ್ಲಿ ನೀಡಲಾಗಿದೆ. ಅವು ಯಾವುವು?

- 
- 
- 

ನಮ್ಮ ದೇಶದ ವಿವಿಧತೆಗಳನ್ನು ನಾವು ಅಂಗೀಕರಿಸುವಾಗ ಮತ್ತು ಗೌರವಿಸುವಾಗ ದೇಶದಲ್ಲಿ ಬಹುತ್ವವು ಉಂಟಾಗುತ್ತದೆ. ರಾಷ್ಟ್ರೀಯ ಭಾವೈಕ್ಯದ ಮೂಲಕ ನಮಗೆ ಭಾರತದ ಬಹುತ್ವವು ಎದುರಿಸುವ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಲು ಸಾಧ್ಯವಿದೆ.

ನಿಯತಕಾಲಿಕಗಳಲ್ಲಿ ಪ್ರಕಟವಾದ ಸಾಮಾಜಿಕ ಸಾಮರಸ್ಯ ಮತ್ತು ಸಂಘರ್ಷದ ಸುದ್ದಿಗಳನ್ನು ಸಂಗ್ರಹಿಸಿರಿ. ಮಾಧ್ಯಮಗಳು ಬಹುತ್ವ ಮತ್ತು ಅದರ ಸವಾಲುಗಳನ್ನು ಹೇಗೆ ಪ್ರಸ್ತುತಪಡಿಸುತ್ತವೆ ಎಂಬುದನ್ನು ವಿಶ್ಲೇಷಿಸಿ ವಿಚಾರಗೋಷ್ಠಿ ವರದಿ ತಯಾರಿಸಿರಿ.

## ರಾಷ್ಟ್ರೀಯ ಭಾವೈಕ್ಯ

ರಾಷ್ಟ್ರೀಯ ಭಾವೈಕ್ಯ(National Integration)ವೆಂದರೆ ವಿಭಿನ್ನ ಹಿನ್ನೆಲೆ, ಪ್ರದೇಶ, ಭಾಷೆ, ಧರ್ಮ, ಸಂಸ್ಕೃತಿ ಎಂಬಿವುಗಳನ್ನು ಅನುಸರಿಸುವ ಜನರು, ಅವರ ವೈವಿಧ್ಯಗಳನ್ನು ಗೌರವಿಸಿಕೊಂಡು ಏಕೀಕೃತ ಮತ್ತು ಸಾಮರಸ್ಯದ ಒಂದು ರಾಷ್ಟ್ರದೆಡೆಗೆ ಕೊಂಡೊಯ್ಯುವ ಪ್ರಕ್ರಿಯೆಯಾಗಿದೆ. ಇದು ವೈವಿಧ್ಯಗಳನ್ನು ಗೌರವಿಸುವುದರೊಂದಿಗೆ ದೇಶದ ನಾಗರಿಕರೊಳಗಿನ ಅಸ್ಮಿತೆ, ಒಗ್ಗಟ್ಟು ಮತ್ತು ಸಾರ್ವಜನಿಕ ಅಸ್ಮಿತೆ ಎಂಬಿವುಗಳಿಗೆ ಪ್ರಾಧಾನ್ಯವನ್ನು ನೀಡುತ್ತದೆ. ಭಾರತೀಯ ರಾಷ್ಟ್ರೀಯ ಭಾವೈಕ್ಯವೆಂದರೆ ಸಾಂಸ್ಕೃತಿಕವಾಗಿ, ಭಾಷಿಕವಾಗಿ ಮತ್ತು ಧಾರ್ಮಿಕವಾಗಿ ವೈವಿಧ್ಯವನ್ನು ಹೊಂದಿದ ಭಾರತೀಯ ಸಮಾಜ, ಅದರ ವೈವಿಧ್ಯಗಳನ್ನು ಗೌರವಿಸಿ ಒಂದು ರಾಷ್ಟ್ರೀಯ ಅಸ್ಮಿತೆಯೆಡೆಗೆ ಒಗ್ಗೂಡಿಸುವ ಪ್ರಕ್ರಿಯೆಯಾಗಿದೆ.

ವಿವಿಧತೆಯಲ್ಲಿ ಏಕತೆಯನ್ನು ಪ್ರೋತ್ಸಾಹಿಸುವ ಆಚರಣೆಗಳು ಭಾರತದ ರಾಷ್ಟ್ರೀಯ ಭಾವೈಕ್ಯಕ್ಕೆ ಸ್ಫೂರ್ತಿಯಾಗಿವೆ. ಭಾರತದಲ್ಲಿ ಅವಗಣಿಸಲ್ಪಟ್ಟ ವಿಭಾಗಗಳನ್ನು ಒಳಪಡಿಸುವ ಮತ್ತು ಸಮಾಜದ ಎಲ್ಲಾ ವಿಭಾಗಗಳಿಗೆ ಸಮಾನತೆ, ಪ್ರಾತಿನಿಧ್ಯವನ್ನು ಖಾತರಿಪಡಿಸುವ ಒಂದು ಪ್ರಜಾಪ್ರಭುತ್ವ ವ್ಯವಸ್ಥೆಯಿದೆ. ಭಾರತದಾದ್ಯಂತ ಒಂದಾಗಿ ಆಚರಿಸುವ ವಿವಿಧ ಹಬ್ಬಗಳು ಮತ್ತು ಆಚರಣೆಗಳು ಸಮಾಜದಲ್ಲಿ ಸಹಬಾಳ್ವೆ ಮತ್ತು ಸಹಿಷ್ಣುತೆಯನ್ನು ಖಚಿತಪಡಿಸುತ್ತವೆ. ಅದರೊಂದಿಗೆ ಧರ್ಮ-ಭಾಷಾ ಅಲ್ಪಸಂಖ್ಯಾತರನ್ನು ಸಂರಕ್ಷಿಸುವ ಕಾನೂನು ವ್ಯವಸ್ಥೆ ಮತ್ತು ಪ್ರಕಟಿತ ಜಾತ್ಯತೀತತೆಯು ಸಮಾನತೆಯಂತಹ ಸಾಂವಿಧಾನಿಕ ಮೌಲ್ಯಗಳನ್ನು ಬಲಪಡಿಸುತ್ತದೆ.




ಭಾರತದ ವಿವಿಧ ರಾಜ್ಯಗಳಲ್ಲಿನ ಭಾಷೆ, ಕಲೆ, ಇತರ ಸಾಂಸ್ಕೃತಿಕ ವಿಶೇಷತೆಗಳು ಮತ್ತು ರಾಷ್ಟ್ರೀಯ ಭಾವೈಕ್ಯಕ್ಕೆ ಕೊಡುಗೆ ನೀಡಿದ ವ್ಯಕ್ತಿಗಳನ್ನು ಒಳಗೊಂಡ ಡಿಜಿಟಲ್ ಪ್ರಸೆಂಟೇಶನ್ ತಯಾರಿಸಿ ತರಗತಿಯಲ್ಲಿ ಡಿಜಿಟಲ್ ಮಂಡನೆಯನ್ನು ನಡೆಸಿರಿ.

## ಮುಂದುವರಿದ ಚಟುವಟಿಕೆಗಳು

- ನಿಮ್ಮ ಪ್ರದೇಶದಲ್ಲಿ ಅಥವಾ ಸಮೀಪ ಪ್ರದೇಶಗಳಲ್ಲಿ ನಡೆದ ಸಾಮಾಜಿಕ ಕೆಡುಕುಗಳಿಗೆ ಮತ್ತು ಅಸಮಾನತೆಗಳಿಗೆದುರಾದ ಚಳುವಳಿಗಳು ಮತ್ತು ಹೋರಾಟಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಸಂಗ್ರಹಿಸಿ ಒಂದು ಡಾಕ್ಯುಮೆಂಟರಿ ತಯಾರಿಸಿರಿ.
- ಭಾರತದ ಸ್ವಾತಂತ್ರ್ಯ ಹೋರಾಟಗಳ ಕಾಲದಲ್ಲಿ ವಿವಿಧ ಭಾರತೀಯ ಭಾಷೆಗಳ ಮೂಲಕ ರಾಷ್ಟ್ರೀಯತೆಯನ್ನು ಬಡಿದೆಬ್ಬಿಸಿದ ಕವಿತೆಗಳು ಮತ್ತು ಪದ್ಯಗಳನ್ನು ಸಂಗ್ರಹಿಸಿ ಗುಂಪಾಗಿ ಹಾಡಿರಿ.
- ಭಾರತದ ಸಾಂಸ್ಕೃತಿಕ ಅಭಿವೃದ್ಧಿಗೆ ಕೊಡುಗೆಯನ್ನು ನೀಡುವ ಚಿತ್ರಗಳು, ಶಿಲ್ಪಗಳು, ನೃತ್ಯರೂಪಗಳು, ಸಂಗೀತ ಮೊದಲಾದ ವಿವಿಧ ಕಲಾ ಪ್ರಕಾರಗಳನ್ನು ಸೇರಿಸಿ, ಐ.ಸಿ.ಟಿ.ಯ ಸಹಾಯದಿಂದ ಒಂದು ಸಾಂಸ್ಕೃತಿಕ ಪ್ರದರ್ಶನವನ್ನು ಆಯೋಜಿಸಿರಿ.
- 'ಭಾರತೀಯ ಸಮಾಜದಲ್ಲಿನ ಬುಡಕಟ್ಟು – ಗ್ರಾಮ – ನಗರ ಜೀವನದ ದೃಶ್ಯ ಪ್ರತಿಫಲನ' ಎಂಬ ಶೀರ್ಷಿಕೆಯಲ್ಲಿ ಫೋಟೋ ಪ್ರದರ್ಶನವೊಂದನ್ನು ಆಯೋಜಿಸಿರಿ.
- ಭಾರತದ ಸಮಾಜ ಸುಧಾರಕರ ಚಿತ್ರಗಳು ಮತ್ತು ಚಟುವಟಿಕಾ ವಲಯಗಳನ್ನು ಸೇರಿಸಿ ಒಂದು ಡಿಜಿಟಲ್ ಪ್ರಸೆಂಟೇಶನ್ ತಯಾರಿಸಿರಿ.

# ಟಿಪ್ಪಣಿ

# ಟಿಪ್ಪಣಿ

# ಟಿಪ್ಪಣಿ

## ಟಿಪ್ಪಣಿ

# ಭಾರತದ ಸಂವಿಧಾನ

ಭಾಗ IV ಕ

## ಮೂಲಭೂತ ಕರ್ತವ್ಯಗಳು

51ಕ. **ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಘೋಷಿಸುವುದು ಮತ್ತು ಅನುಸರಿಸುವುದು;

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು;

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು;

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು;

(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು;

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು;

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು;

(ಟ) ಆರರಿಂದ ಹದಿನಾಲ್ಕು ವರ್ಷಗಳ ನಡುವಿನ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

# ಮಕ್ಕಳ ಹಕ್ಕುಗಳು

ಪ್ರೀತಿಯ ಮಕ್ಕಳೇ,

ನಿಮ್ಮ ಹಕ್ಕುಗಳ ಕುರಿತು ತಿಳಿಯಬೇಕಲ್ಲವೇ? ಹಕ್ಕುಗಳ ಕುರಿತಾಗಿರುವ ತಿಳುವಳಿಕೆಯು ನಿಮ್ಮ ಭಾಗವಹಿಸುವಿಕೆ, ಸಂರಕ್ಷಣೆ, ಸಾಮಾಜಿಕ ನ್ಯಾಯ ಎಂಬಿವುಗಳನ್ನು ಖಾತರಿಪಡಿಸಲು ಪ್ರೇರಣೆಯನ್ನೂ ಪ್ರಚೋದನೆಯನ್ನೂ ನೀಡುತ್ತದೆ. ನಿಮ್ಮ ಹಕ್ಕುಗಳನ್ನು ಸಂರಕ್ಷಿಸಲು ಈಗ ಒಂದು ಆಯೋಗವು ಕಾರ್ಯಾಚರಿಸುತ್ತಿದೆ. 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣಾ ಆಯೋಗ' ಎಂದು ಅದರ ಹೆಸರು. ನಿಮ್ಮ ಹಕ್ಕುಗಳು ಯಾವುವು ಎಂದು ನೋಡೋಣ.

- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ.
- ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ.
- ಪರಿಪೂರ್ಣವಾದ ಬದುಕು ಹಾಗೂ ವಿಕಾಸದ ಹಕ್ಕು.
- ಜಾತಿ, ಮತ, ವರ್ಗ, ವರ್ಣ ಎಂಬ ಚಿಂತನೆಗಳನ್ನು ಮೀರಿ ಗೌರವಿಸಲ್ಪಡುವ ಮತ್ತು ಅಂಗೀಕರಿಸಲ್ಪಡುವ ಹಕ್ಕು.
- ದೈಹಿಕ, ಮಾನಸಿಕ ಹಾಗೂ ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ ಪಡೆಯಲೂ ಶುಶ್ರೂಷೆ ಪಡೆಯಲೂ ಇರುವ ಹಕ್ಕು.
- ಬಾಲ ಕಾರ್ಮಿಕತನದಿಂದ ಹಾಗೂ ಅಪಾಯಕಾರಿ ಕೆಲಸಗಳಿಂದ ಬಿಡುಗಡೆ.
- ಪಾಲ್ಗೊಳ್ಳುವಿಕೆಯ ಹಕ್ಕು.
- ಬಾಲ್ಯವಿವಾಹದಿಂದ ರಕ್ಷಣೆ.
- ವೈಯಕ್ತಿಕ ಸಂಸ್ಕೃತಿಯನ್ನು ಅರಿತುಕೊಂಡು ಅದನ್ನು ಅನುಸರಿಸಿ ಬದುಕುವ ಸ್ವಾತಂತ್ರ್ಯ.
- ನಿರ್ಲಕ್ಷ್ಯಕ್ಕೆ ಒಳಗಾಗದಂತೆ ಸಂರಕ್ಷಣೆ.
- ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು.
- ಕಲಿಯಲೂ ಆಟವಾಡಲೂ ಇರುವ ಹಕ್ಕು.
- ಪ್ರೀತಿ ಹಾಗೂ ರಕ್ಷಣೆಯನ್ನು ಒದಗಿಸುವ ಕುಟುಂಬ ಹಾಗೂ ಸಮಾಜವನ್ನು ಪಡೆಯುವ ಹಕ್ಕು.

## ನಿಮ್ಮ ಕೆಲವು ಜವಾಬ್ದಾರಿಗಳು

- ಶಾಲೆ, ಸಾರ್ವಜನಿಕ ಸೊತ್ತುಗಳನ್ನು ಹಾನಿ ಮಾಡದೆ ರಕ್ಷಿಸುವುದು.
- ಶಾಲೆಯಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಶಿಸ್ತು ಪಾಲಿಸುವುದು.
- ಶಾಲಾ ಅಧಿಕಾರಿಗಳನ್ನು, ಅಧ್ಯಾಪಕರನ್ನು, ಹೆತ್ತವರನ್ನು ಹಾಗೂ ಸಹಪಾಠಿಗಳನ್ನು ಗೌರವಿಸುವುದು ಮತ್ತು ಅಂಗೀಕರಿಸುವುದು.
- ಜಾತಿ, ಮತ, ವರ್ಗ, ವರ್ಣ ಇತ್ಯಾದಿ ಚಿಂತನೆಗಳನ್ನು ಮೀರಿ ಇತರರನ್ನು ಗೌರವಿಸಲೂ ಅಂಗೀಕರಿಸಲೂ ಸಿದ್ಧರಾಗುವುದು.

**ಸಂಪರ್ಕಿಸಬೇಕಾದ ವಿಳಾಸ:**
**ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**
'ಶ್ರೀ ಗಣೇಶ್', ಟಿ.ಸಿ. 14/2036, ವಾನ್ ರೋಸ್ ಜಂಕ್ಷನ್, ತಿರುವನಂತಪುರ-34
ಫೋನ್ : 0471-2326603
E-mail : childrightscpcr@kerala.gov.in, rtecpcr@kerala.gov.in
Website : www.kescpcr.kerala.gov.in.

**ಮಕ್ಕಳ ಸಹಾಯವಾಣಿ : 1098, ಅಪರಾಧ ನಿಯಂತ್ರಣ : 1090, ನಿರ್ಭಯ : 1800 425 1400**
ಕೇರಳ ಪೋಲೀಸ್ ಸಹಾಯವಾಣಿ : 0471-3243000/44000/45000

*online **R.T.E Monitoring : www.nireekshana.org.in***